“ಮಕ್ಕಳೇ ಪ್ರಮುಖರು” ವತಿಯಿಂದ ರಜಾದಿನದ

ಶಿಕ್ಷಕರ ಪುಸ್ತಕ

ಹಂತ 2



# ಟೈಮ್ ಮಷೀನ್

## ಶಿಕ್ಷಕರ ಪುಸ್ತಕ

ಎಲ್ಲಾ ವಯಸ್ಸಿನವರಿಗೆ

# ಟೈಮ್ ಮಿಷನ್




“ಮಕ್ಕಳೇ ಪ್ರಮುಖರು” ವತಿಯಿಂದ ರಜಾದಿನದ ಸತ್ಯವೇದ ಶಾಲೆ

ಶಿಕ್ಷಕರ ಪುಸ್ತಕ

ಎಲ್ಲಾ ವಯಸ್ಸಿನವರಿಗೆ

**ಹಂತ 2: ಪಾಠಗಳು 1-13**

**ವೆಬ್:**

**www.ChildrenAreImportant.com/machine/**

“ಮಕ್ಕಳೇ ಪ್ರಮುಖರು” ತಂಡದವರೆಲ್ಲರಿಗೆ ಧನ್ಯವಾದಗಳು

Editor and Creative Team Leader: Flor Boldo

Founders: Dwight y Kristina Krauss

Writer: Suzanna Kangas (Suki)

Creative Team: Jennifer Sánchez, Areli Salinas, Ramón Martínez, Marlon Hernández.

Designer: Julio Sánchez

Design Supervisor: Suzanna Kangas (Suki)

Consultants: Mike y Vickie Kangas

Ilustrations: Lindy & Friends in collaboration with NosrettepArt

**www.lindyandfriends.com**

Linda P. Romero

Fan page Administrator: Verónica Toj

# ಪರಿಚಯ

ಸತ್ಯವೇದ ಶಾಲೆಗೆ ಸ್ವಾಗತ. "ಟೈಮ್ ಮಿಷನ್" ಹಂತ 2!
ನೀತಿಯ ತಂಡವು ಯೇಸು ಕ್ರಿಸ್ತನ ಜೀವಿತದ ಬಗ್ಗೆ ಕಲಿತುಕೊಳ್ಳಲು ಹಿಂದಿನ ಕಾಲಕ್ಕೆ ಹೋಗಲು ಟೈಮ್ ಮಿಷನ್ ಉಪಯೋಗಿಸುತ್ತದೆ, ತಾವು ಕಲಿತುಕೊಂಡದ್ದನ್ನು ಹಂಚಿಕೊಳ್ಳುತ್ತದೆ ಮತ್ತು ಯೇಸು ಕ್ರಿಸ್ತನ ಕ್ರಿಯೆಗಳು ತನ್ನ ತಂಡ ಹಾಗೂ ಆಧುನಿಕ ಸಮಾಜದ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತದೆ ಎಂಬದನ್ನು ವ್ಯಕ್ತಪಡಿಸುತ್ತದೆ. ಈ ಕೈಪಿಡಿಯಲ್ಲಿ ನಮ್ಮ ಮಕ್ಕಳು ಕಲಿತುಕೊಳ್ಳಲು ಮತ್ತು "ನ್ಯಾಯ" ಭಾಗದಲ್ಲಿ ಕಲಿತುಕೊಂಡದ್ದನ್ನು ಅಳವಡಿಸಿಕೊಳ್ಳಲು ಶಕ್ತರಾಗುತ್ತಾರೆ, ಇದು ಮುಖ್ಯ ಪಾಠದ ಮೇಲೆ ಆಧಾರವಾಗಿರುವ ಆಧುನಿಕ ಅನ್ವಯಿಸುವಿಕೆಯಾಗಿರುತ್ತದೆ. ಉದಾಹರಣೆಗೆ: ಜನರೆಲ್ಲರನ್ನು ದೇವರ ಸೃಷ್ಟಿಗಳಾಗಿ ನೋಡುವದು. "ಹೋಮ್ ವರ್ಕ್ ಭಾಗವು ಮಕ್ಕಳು ತಮ್ಮ ಅನುದಿನದ ಜೀವಿತದಲ್ಲಿ ಕಲಿತುಕೊಳ್ಳುವ ವಿಷಯಗಳನ್ನು ಅಭ್ಯಾಸ ಮಾಡಲು ಅವಕಾಶ ಕೊಡುತ್ತದೆ. ಉದಾಹರಣೆಗೆ: ಒಂದುವೇಳೆ ಯಾರಾದರೂ ನಿಮ್ಮನ್ನು ನೋಯಿಸಿದರೆ ಅಥವಾ ನಿಮಗೆ ಮೋಸ ಮಾಡಿದರೆ, ಕಿತ್ತಾಡಬಾರದು. ಬದಲಾಗಿ, ದೀರ್ಘಶಾಂತರಾಗಿರಬೇಕು ಹಾಗೂ ಅವರಿಗಾಗಿ ಪ್ರಾರ್ಥನೆ ಮಾಡುತ್ತಾ, ನಿಮ್ಮ ಸಮಾಧಾನವನ್ನು ಕೊಡುವಂತೆ ದೇವರನ್ನು ಬೇಡಿಕೊಳ್ಳಬೇಕು. ನಿಮ್ಮ ಅನಿಸಿಕೆಗಳನ್ನು ನಿಮ್ಮ ಸಂಡೇ ಸ್ಕೂಲ್ ಟೀಚರ್ ಜೊತೆ ಹಂಚಿಕೊಳ್ಳಿರಿ. "ಜೀವನಚರಿತ್ರೆ" ಭಾಗವು ಮಕ್ಕಳಿಗೆ ವಿವಿಧ ವೃತ್ತಿ ಅಂದರೆ ನ್ಯಾಯಾಧಿಪತಿ, ಮಿಷನರಿ ಮತ್ತು ವ್ಯಾಪಾರಿ ಇನ್ನಿತರರು ಮತ್ತು ಅವರಿಂದ ಸಮಾಜಕ್ಕೆ ಹೇಗೆ ಅನುಕೂಲವಾಗುತ್ತದೆ ಎಂಬದನ್ನು ಮಕ್ಕಳಿಗೆ ಕಲಿಸುತ್ತದೆ. ಈ ಭಾಗದಲ್ಲಿರುವ ಕೆಲವು ವೃತ್ತಿಗಳನ್ನು ವಿವಿಧ ದೇಶಗಳಲ್ಲಿ ನಕಾರಾತ್ಮಕ ದೃಷ್ಟಿಕೊನದೊಂದಿಗೆ ನೋಡಲಾಗುತ್ತದೆ ಯಾಕಂದರೆ ವ್ಯಕ್ತಿಗತವಾಗಿ ಜನರು ತಮ್ಮ ಅಧಿಕಾರದ ಸ್ಥಾನವನ್ನು ದೂಷಿಸುವವರಾಗಿದ್ದಾರೆ. ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವದನ್ನು ಅಥವಾ ಆ ಪರಿಸ್ಥಿತಿಯಲ್ಲಿ ಯೇಸು ಕ್ರಿಸ್ತನು ಏನು ಮಾಡುವನು ಎಂಬದನ್ನು ಮಕ್ಕಳಿಗೆ ಕಲಿಸಲು ಇದು ನಿಮಗೆ ಸೂಕ್ತವಾದ ಅವಕಾಶವಾಗಿರುತ್ತದೆ. ಯಾರಿಗೆ ಗೊತ್ತು? ನಿಮ್ಮ ತರಗತಿಯಲ್ಲಿರುವ ವಿದ್ಯಾರ್ಥಿಯೇ ಮುಂದೊಂದು ದಿನ ಆ ವೃತ್ತಿಯನ್ನೇ ಆರಿಸಿಕೊಳ್ಳಬಹುದು ಮತ್ತು ಸರಿಯಾದ ಕಾರ್ಯಗಳನ್ನು ಮಾಡಬಹುದು ಹಾಗೂ ತನ್ನ ಅಧಿಕಾರವನ್ನು ದೂಷಿಸುವ ಬದಲು ಇತರರ ಹಿತಕ್ಕಾಗಿ ಕಾರ್ಯಮಾಡಬಹುದು. ಅವರು ತಮ್ಮ ಸಮುದಾಯದಲ್ಲಿ ಅಥವಾ ರಾಷ್ಟ್ರದಲ್ಲಿ ಯೇಸು ಕ್ರಿಸ್ತನ ಬೆಳಕಾಗಿ ಮುನುಗಬಹುದು.

ಇದಲ್ಲದೆ ಮಕ್ಕಳು ವಿದ್ಯಾರ್ಥಿಗಳ ಪುಸ್ತಕದಲ್ಲಿರುವ ತಮಾಷೆಯ ನಾಟಕ, ಆಟ ಮತ್ತು ಒಗಟುಗಳು ಬಿಡಿಸುವದು ಇತ್ಯಾದಿ ಕಾರ್ಯಗಳಲ್ಲಿ ಆನಂದಿಸುವರು. ಹದಿಹರೆಯದವರು ಪ್ರಶ್ನಾವಳಿಯ ಭಾಗದಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಶಕ್ತರಾಗುವರು, ಅಲ್ಲಿ ಸರಿಯಾದ ಉತ್ತರ ಕೊಡುವದು ಮುಖ್ಯ ಉದ್ದೇಶವಲ್ಲ, ಬದಲಾಗಿ ಅವರು ಯೇಸು ಕ್ರಿಸ್ತನ ಜೀವಿತದಿಂದ ತಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳುವದು ಮುಖ್ಯ ಉದ್ದೇಶವಾಗಿರುತ್ತದೆ. ಪ್ರತಿವಾರ ಹೊಸ ಕಾರ್ಡ್ ಕೊಡುವ ಮೂಲಕ ಹಾಜರಾತಿಯನ್ನು ಪ್ರೋತ್ಸಾಹಪಡಿಸಲಾಗುತ್ತದೆ.

ಶಿಕ್ಷಕರೇ, ದೇವರು ಖಂಡಿತವಾಗಿ ಪ್ರತಿಯೊಂದು ಪಾಠದ ಮೂಲಕ ನಿಮ್ಮ ಹಾಗೂ  ನಿಮ್ಮ ವಿದ್ಯಾರ್ಥಿಗಳೊಂದಿಗೆ ದೇವರು

ಮಾತನಾಡುವನು ಎಂಬ ಭರವಸೆ ನಮಗಿದೆ, ಆತನು ಲೋಕವನ್ನು ಬದಲಾಯಿಸಲು ಬಯಸುತ್ತಾನೆ, ಆದ್ದರಿಂದ ಮುಂದಿನ ಪೀಳಿಗೆಯವರಿಗೆ ತರಬೇತಿ ಕೊಡುವದನ್ನು ಬಿಟ್ಟರೆ ಉತ್ತಮವಾದ ಮಾರ್ಗ ಬೇರೆ ಯಾವುದೂ ಇಲ್ಲ! ದೇವರು ನಿಮ್ಮ ಮಕ್ಕಳ ಹೃದಯದಲ್ಲಿ ಕಾರ್ಯಮಾಡುವಾಗ ಮತ್ತು ಯಾವುದೇ ಬೇಧವಿಲ್ಲದೆ ಇತರರೊಂದಿಗೆ ಬೆರೆಯಲು ಅವರಿಗೆ ಸಹಾಯ ಮಾಡುವಾಗ ನಿಮ್ಮ ಸಮುದಾಯದಲ್ಲಿ ಏನಾಗುವದೆಂದು ಊಹಿಸಿಕೊಳ್ಳಿರಿ. ಮಕ್ಕಳಿಗೆ ಕಲಿಸುವ ಈ ಪ್ರಾಮುಖ್ಯವಾದ ಸೇವೆಯಲ್ಲಿ ನಿರತರಾಗಿರುವ ನಿಮ್ಮನ್ನು ಹೇರಳವಾಗಿ ಆಶೀರ್ವಾದ ಮಾಡಲಿ ಎಂದು ನಾವು ಪ್ರಾರ್ಥನೆ ಮಾಡುತ್ತೇವೆ.

ಯೇಸು ಕ್ರಿಸ್ತನ ಪ್ರೀತಿಯೊಂದಿಗೆ,

ಮಕ್ಕಳೇ ಪ್ರಮುಖರು ಕ್ರಿಯಾತ್ಮಕ ತಂಡ.



# ಹೊರನೋಟ

## 1 ಯೇಸು ಕ್ರಿಸ್ತನ ಹಾಗೆ ಪೋಷಣೆ ಮಾಡಿರಿ

**4000 ಜನರಿಗೆ ಊಟ ಕೊಟ್ಟದ್ದು: ಮತ್ತಾಯ 15:29-38**

ಯಕೋಬನು 2:15-16 "ಒಂದು ವೇಳೆ ಒಬ್ಬ ಸಹೋದರನಾಗಲಿ, ಸಹೋದರಿಯಾಗಲಿ ದಿನನಿತ್ಯ ಊಟಬಟ್ಟೆಗಿಲ್ಲದೆ ಇರುವಾಗ, ನಿಮ್ಮಲ್ಲಿ ಯಾರಾದರು ಅವರಿಗೆ ಅಗತ್ಯವಾದುದನ್ನು ನೀಡದೆ, "ಹೋಗು, ಸುಖವಾಗಿ ಬಾಳು, ಚಳಿ ಕಾಯಿಸಿಕೊ, ಹೊಟ್ಟೆ ತುಂಬಾ ತಿನ್ನು," ಎಂದು ಬರೀ ಬಾಯಿಮಾತಿನಲ್ಲಿ ಉಪಚರಿಸಿದರೆ ಅದರಿಂದಾದ ಪ್ರಯೋಜನವೇನು?"

## 2 ಎಲ್ಲರಿಗೂ ಉಚಿತ

**ಬಾವಿಯ ಬಳಿ ನೀರಿಗೆ ಬಂದ ಸ್ತ್ರೀ: ಯೋಹಾನ 4:4-15**

ರೋಮನರಿಗೆ 12:16 "ನಿಮ್ಮನಿಮ್ಮಲ್ಲಿ ಸಾಮರಸ್ಯವಿರಲಿ. ದೊಡ್ಡಸ್ತಿಕೆಯಿಂದ ವರ್ತಿಸಬೇಡಿ. ದೀನದಲಿತರೊಡನೆ ಗೆಳೆತನ ಬೆಳೆಸಿರಿ. ನೀವೇ ಜಾಣರೆಂದು ಭಾವಿಸದಿರಿ."

## 3 ಎಲ್ಲದಕ್ಕಿಂತಲೂ ಉತ್ತಮವಾದದ್ದು

**ಐಶ್ವರ್ಯವಂತನಾಗಿದ್ದ ಯೌವನಸ್ಥ ಅಧಿಕಾರಿ: ಮಾರ್ಕ 10:17-27**

ಮಾರ್ಕ 8:35 "ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಹಾತೊರೆಯುವವನು ಅದನ್ನು ಕಳೆದುಕೊಳ್ಳುವನು. ಆದರೆ ನನ್ನ ನಿಮಿತ್ತ ಹಾಗೂ ಶುಭಸಂದೇಶದ ನಿಮಿತ್ತ ತನ್ನ ಪ್ರಾಣವನ್ನು ಕಳೆದುಕೊಳ್ಳುವವನು ಅದನ್ನು ನಿತ್ಯಕ್ಕೂ ಉಳಿಸಿಕೊಳ್ಳುವನು."

## 4 ಯೇಸು ಕ್ರಿಸ್ತನ ಮಾತುಗಳನ್ನು ಕೇಳಿರಿ

**ಯೇಸು ಕ್ರಿಸ್ತನು 10 ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದನು: ಲೂಕ 17:11-19**

ಫಿಲಿಪ್ಪಿಯರಿಗೆ 4:6 "ಯಾವ ವಿಷಯದಲ್ಲೂ ಚಿಂತಿಸದೆ, ನಿಮ್ಮ ಅಗತ್ಯಗಳಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ. ಪ್ರಾರ್ಥಿಸುವಾಗಲೆಲ್ಲಾ ನಿಮ್ಮಲ್ಲಿ ಕೃತಜ್ಞತಾಭಾವ ಇರಲಿ."

## 5 ಯೇಸು ಕ್ರಿಸ್ತನ ಹಾಗೆ ದೀನತೆಯುಳ್ಳವರಾಗಿರಿ

**ಯೇಸು ಕ್ರಿಸ್ತನು ತನ್ನ ಶಿಷ್ಯರ ಕಾಲುಗಳನ್ನು ತೊಳೆದನು: ಯೋಹಾನ 13:3-17**

ಫಿಲಿಪ್ಪಿಯರಿಗೆ 2:3-4 "ಸ್ವಾರ್ಥಸಾಧನೆಗಾಗಲಿ, ಡಂಭಾಚಾರಕ್ಕಾಗಲಿ ಏನನ್ನೂ ಮಾಡಬೇಡಿ. ಪರಸ್ಪರ ನಮ್ರತೆಯಿಂದ ನಡೆದುಕೊಳ್ಳಿ; ಇತರರು ನಿಮಗಿಂತಲೂ ಶ್ರೇಷ್ಠರೆಂದು ಪರಿಗಣಿಸಿರಿ. ಸ್ವಹಿತವನ್ನೇ ಗಮನಿಸದೆ ಪರರ ಹಿತವನ್ನೂ ಬಯಸಿರಿ."

## 6 ಯೇಸು ಕ್ರಿಸ್ತನ ಹಾಗೆ ಆತ್ಮಭಾರವುಳ್ಳವರಾಗಿರಬೇಕು

**ಯೇಸು ಕ್ರಿಸ್ತನು ಮೇಜುಗಳನ್ನು ಕೆಡವಿದನು: ಮಾರ್ಕ 11:15-17 (ಯೋಹಾನ 2:13-17)**

ಮತ್ತಾಯ 23:13 "ಕಪಟ ಧರ್ಮಶಾಸ್ತ್ರಿಗಳೇ ಮತ್ತು ಫರಿಸಾಯರೇ, ನಿಮಗೆ ಧಿಕ್ಕಾರ! ಸ್ವರ್ಗಸಾಮ್ರಾಜ್ಯದ ದ್ವಾರಗಳನ್ನು ಮಾನವರಿಗೆ ಮುಚ್ಚಿದ್ದೀರಿ. ನೀವೂ ಪ್ರವೇಶಿಸುವುದಿಲ್ಲ, ಒಳಕ್ಕೆ ಪ್ರವೇಶಿಸಲು ಯತ್ನಿಸುವವರನ್ನೂ ಬಿಡುವುದಿಲ್ಲ."

## 7 ಯೇಸು ಕ್ರಿಸ್ತನ ಹೃದಯ ಪ್ರಕಟಗೊಂಡಿದೆ

**ಗೆತ್ಸೇಮನೆ ತೋಟ: ಮತ್ತಾಯ 26:36-39,47-54**

ಲೂಕ 6:27 "ನನ್ನನ್ನು ಆಲಿಸುತ್ತಿರುವವರೇ, ನನ್ನ ಮಾತನ್ನು ಕೇಳಿರಿ: 'ನಿಮ್ಮ ಶತ್ರುಗಳನ್ನು ಪ್ರೀತಿಸಿರಿ, ನಿಮ್ಮನ್ನು ದ್ವೇಷಿಸುವವರನ್ನು ಸತ್ಕರಿಸಿರಿ."

## 8 ಅನ್ಯಾಯ!

**ಯೇಸು ಕ್ರಿಸ್ತನ ವಿಚಾರಣೆ: ಮಾರ್ಕ 14:57-65,15:1-15**

ಯೆಶಾಯ 53:9 "ಮಾಡಲಿಲ್ಲ ಆತ ಯಾವ ಪಾಪಕೃತ್ಯ ಅವನ ಬಾಯಲಿರಲಿಲ್ಲ ವಂಚನೆಯ ವಾಕ್ಯ ಹೂಣಿದರಾತನನು ಸತ್ತಮೇಲೆ ದುರುಳರ ಹಾಗೂ ದುಷ್ಕರ್ಮಿಗಳ ನಡುವೆ."

## 9 ಮರಣದಲ್ಲಿ ಜೀವ

**ಯೇಸು ಕ್ರಿಸ್ತನನ್ನು ಶಿಲುಬೆಗೆ ಜಡಿದರು: ಮತ್ತಾಯ 27:27-31,45-54**

ಯೆಶಾಯ 53:5 "ಗಾಯಗೊಂಡನಾತ ನಮ್ಮ ಪಾಪಗಳ ನಿಮಿತ್ತ ಜಜ್ಜರಿತನಾದ ನಮ್ಮ ದ್ರೋಹಗಳ ದೆಸೆಯಿಂದ. ಶಿಕ್ಷೆಗೊಳಗಾದ ನಮ್ಮ ರಕ್ಷೆಗಾಗಿ ಪೆಟ್ಟುತಿಂದ ನಮ್ಮ ಸ್ವಸ್ಥತೆಗಾಗಿ."

## 10 ದುಷ್ಟನು ರಕ್ಷಣೆ ಹೊಂದಿದನು

**ಶಿಲುಬೆಗೆ ಹಾಕಲ್ಪಟ್ಟಿದ್ದ ಕಳ್ಳನು: ಲೂಕ 23:32-33,39-43**

ರೋಮನರಿಗೆ 10:11 "ಏಕೆಂದರೆ, “ಅವರಲ್ಲಿ ವಿಶ್ವಾಸ ಇಡುವ ಯಾರಿಗೂ ಆಶಾಭಂಗವಾಗುವುದಿಲ್ಲ,” ಎಂದು ಪವಿತ್ರಗ್ರಂಥದಲ್ಲೇ ಹೇಳಲಾಗಿದೆ."

## 11 ಘೋರವಾದ ದಿನ ಅತ್ಯುತ್ತಮ ದಿನವಾಗಿ ಬದಲಾಯಿತು

**ಯೇಸು ಕ್ರಿಸ್ತನ ಪುನರುತ್ಥಾನ: ಮತ್ತಾಯ 27:57-61,28:1-10, ಲೂಕ 24:36-48**

ಹಿಬ್ರಿಯರಿಗೆ 11:1 "ವಿಶ್ವಾಸವೆಂಬುದು ನಾವು ನಿರೀಕ್ಷಿಸುವಂಥವುಗಳು ನಮಗೆ ದೊರಕುತ್ತವೆ ಎಂಬ ದೃಢ ನಂಬಿಕೆ ಹಾಗು ಕಣ್ಣಿಗೆ ಕಾಣದಂಥವುಗಳು ನಿಶ್ಚಯವಾದವು ಎಂಬ ನಿಲುವು ಆಗಿದೆ."

## 12 ಅಸಾಧ್ಯ ವಿಶ್ವಾಸಿ

**ಸೌಲನು ನಂಬಿಕೆಯಿಟ್ಟನು: ಅಪೊ 9:1-20**

ಪ್ರೇಷಿತರ ಕಾರ್ಯಕಲಾಪಗಳು 1:8 "ಆದರೆ ಪವಿತ್ರಾತ್ಮ ಅವರು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯುತರಾಗುವಿರಿ. ಆಗ ನೀವು ಜೆರುಸಲೇಮಿನಲ್ಲೂ ಜುದೇಯದಲ್ಲೂ ಸಮಾರಿಯದಲ್ಲೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗುವಿರಿ,” ಎಂದರು."

## 13 ನಾನೂ ಬರಬಹುದೇ?

**ಪೇತ್ರನು ರಕ್ಷಣೆಯ ಸಂದೇಶವನ್ನು ಸಾರಿದನು: ಅಪೊ 2:14,36-40**

ಯೊವಾನ್ನ 3:16 "ದೇವರು ಲೋಕವನ್ನು ಎಷ್ಟಾಗಿ ಪ್ರೀತಿಸಿದರೆಂದರೆ ತಮ್ಮ ಏಕೈಕ ಪುತ್ರನನ್ನೇ ಧಾರೆಯೆರೆದರು; ಆತನಲ್ಲಿ ವಿಶ್ವಾಸವಿಟ್ಟ ಯಾರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂಬುದೇ ದೇವರ ಉದ್ದೇಶ."

# ಈ ಸಾಮಗ್ರಿಯನ್ನು ಉಪಯೋಗಿಸುವದು ಹೇಗೆ

**ನಾಟಕ (ಭಾಗ 1)**




ಪ್ರತಿಯೊಂದು ನಾಟಕದಲ್ಲಿಯೂ, ಯೇಸು ಕ್ರಿಸ್ತನ ಜೀವಿತದ ಭಾಗವನ್ನು ನೋಡಲು "ನ್ಯಾಯ ತಂಡವು" ಹಿಂದಿನ ಕಾಲಕ್ಕೆ ಹೋಗುತ್ತದೆ, ಆಗ ತಂಡದ ಸದಸ್ಯರು ಸಮಾನಾಂತರ ಪಾಠವನ್ನು ಕಲಿತುಕೊಳ್ಳುವರು ಮತ್ತು ತಮ್ಮ ಆಧುನಿಕ ಜೀವಿತಗಳಿಗೆ ಅಳವಡಿಸಿಕೊಳ್ಳುವರು. ಪ್ರತಿಯೊಂದು ನಾಟಕದ ಭಾಗವನ್ನು ಮುಖ್ಯ ಪಾಠಕ್ಕೂ ಮೊದಲೇ ಬರೆಯಲಾಗುತ್ತದೆ, ಅಲ್ಲಿ ಅವರು ಹಿಂದಿನ ಕಾಲಕ್ಕೆ ಹೋಗುತ್ತಾರೆ ಮತ್ತು ಪ್ರತಿಯೊಂದು ಪಾಠದ ಎರಡನೇ ಭಾಗವು ಮುಖ್ಯ ಪಾಠದ ನಂತರ ಬರುತ್ತದೆ, ಆಗ ಪಾತ್ರಧಾರಿಗಳು ಹಿಂದಿರುಗಿ ಬರುತ್ತಾರೆ ಮತ್ತು ತಾವು ಕಲಿತುಕೊಂಡವುಗಳನ್ನು ಅಳವಡಿಸಿಕೊಳ್ಳುತ್ತಾರೆ. 3 ನಟರಿಗಾಗಿ ನಾಟಕಗಳನ್ನು ರಚಿಸಲಾಗಿರುತ್ತದೆ: ನಾಯಕ, ತನಿಖಾಧಿಕಾರಿ ಮತ್ತು ಏಜೆಂಟ್. ಉಳಿದ ಇನ್ನೆರೆಡು ಪಾತ್ರಧಾರಿಗಳು, ಮೆಕಾನಿಕ್ ಮತ್ತು ಟೆಕ್ಸಿಷಿಯನ್, ಒಂದುವೇಳೆ ಹೆಚ್ಚು ಜನರಿದ್ದರೆ ಇಟ್ಟುಕೊಳ್ಳಬಹುದು.

**ಮುಖ್ಯ ಪಾಠ**

ಪ್ರಾರಂಭ ನಾಟಕದ ನಂತರ ಮುಖ್ಯ ಪಾಠ ಬರುತ್ತದೆ. ಸತ್ಯವೇದದ ಕಥೆಗಳನ್ನು ಪಾಠದಲ್ಲಿ ಪೂರ್ತಿಯಾಗಿ ಬರೆಯಲಾಗಿರುವದಿಲ್ಲ, ಆದ್ದರಿಂದ ಆ ಕಥೆಗಳನ್ನು ತಪ್ಪದೆ ಸತ್ಯವೇದದಿಂದ ಓದುವದನ್ನು ಮರೆಯಬೇಡಿರಿ.

**ನಾಟಕ (ಭಾಗ 2)**

ಮುಖ್ಯ ಪಾಠದ ನಂತರ, ನಾಟಕದ ಎರಡನೇ ಭಾಗವನ್ನು ಪೂರ್ತಿಗೊಳಿಸಿರಿ, ಆಗ ತಂಡದವರು ತಾವು ಕಲಿತುಕೊಂಡಿರುವ ಪಾಠದ ಮೂಲಕ ಸಮಸ್ಯೆಯನ್ನು ಬಗೆಹರಿಸುವರು. (ನಮ್ಮ ಯೂಟ್ಯೂಬ್ ಚಾನೆಲ್ ನೋಡಿ ಉದಾಹರಣೆಗಳನ್ನು ತಿಳಿದುಕೊಳ್ಳಿರಿ)

ಲಿಂಕ್: https://www.youtube.com/watch?v=29oPA594_1s

## ನ್ಯಾಯ

ಮುಖ್ಯ ಪಾಠದೊಂದಿಗೆ ಕ್ಲುಪ್ತವಾಗಿರುವ ಈ ಭಾಗವನ್ನು ವಿಮರ್ಶೆ ಮಾಡುತ್ತಾ, ಮಕ್ಕಳ ಪುಸ್ತಕದಲ್ಲಿರುವ ಒಗಟುಗಳನ್ನು ಬಗೆಹರಿಸಿರಿ, ಅಥವಾ ಏನಾದರು ಫಲಹಾರ ಸೇವಿಸಿರಿ.

## ಜೀವನಚರಿತ್ರೆ

ಜೀವನಚರಿತ್ರೆ ಭಾಗವು ಮಕ್ಕಳಿಗೆ ವಿವಿಧ ವೃತ್ತಿಗಳನ್ನು ಅಂದರೆ ಸಭಾಪಾಲಕ, ವಕೀಲ, ವಿಜ್ಞಾನಿ ಮತ್ತು ಆರಕ್ಷಕನಿಂದ ಸಮಾಜಕ್ಕೆ ಹೇಗೆ ಪ್ರಯೋಜನವಾಗುತ್ತದೆ ಎಂಬದನ್ನು ಕಲಿಸುತ್ತದೆ. ಈ ಭಾಗದಲ್ಲಿರುವ ಕೆಲವು ವೃತ್ತಿಗಳನ್ನು ವಿವಿಧ ದೇಶಗಳಲ್ಲಿ ನಕಾರಾತ್ಮಕ ದೃಷ್ಟಿಕೊನದೊಂದಿಗೆ ನೋಡಲಾಗುತ್ತದೆ ಯಾಕಂದರೆ ವ್ಯಕ್ತಿಗತವಾಗಿ ಜನರು ತಮ್ಮ ಅಧಿಕಾರದ ಸ್ಥಾನವನ್ನು ದೂಷಿಸುವವರಾಗಿದ್ದಾರೆ. ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವದನ್ನು ಅಥವಾ ಆ ಪರಿಸ್ಥಿತಿಯಲ್ಲಿ ಯೇಸು ಕ್ರಿಸ್ತನು ಏನು ಮಾಡುವನು ಎಂಬದನ್ನು ಮಕ್ಕಳಿಗೆ ಕಲಿಸಲು ಇದು ನಿಮಗೆ ಸೂಕ್ತವಾದ ಅವಕಾಶವಾಗಿರುತ್ತದೆ. ಯಾರಿಗೆ ಗೊತ್ತು? ನಿಮ್ಮ ತರಗತಿಯಲ್ಲಿರುವ ವಿದ್ಯಾರ್ಥಿಯೇ ಮುಂದೊಂದು ದಿನ ಆ ವೃತ್ತಿಯನ್ನೇ ಆರಿಸಿಕೊಳ್ಳಬಹುದು ಮತ್ತು ಸರಿಯಾದ ಕಾರ್ಯಗಳನ್ನು ಮಾಡಬಹುದು ಹಾಗೂ ತನ್ನ ಅಧಿಕಾರವನ್ನು ದೂಷಿಸುವ ಬದಲು ಇತರರ ಹಿತಕ್ಕಾಗಿ ಕಾರ್ಯಮಾಡಬಹುದು. ಅವರು ತಮ್ಮ ಸಮುದಾಯದಲ್ಲಿ ಅಥವಾ ರಾಷ್ಟ್ರದಲ್ಲಿ ಯೇಸು ಕ್ರಿಸ್ತನ ಬೆಳಕಾಗಿ ಮುನುಗಬಹುದು.

ಪ್ರಾರಂಭದಲ್ಲಿ ಚಿಕ್ಕದಾಗಿ ಆಟ ಆಡಿಸುವ ಮೂಲಕ ಇದನ್ನು ಮತ್ತಷ್ಟು ಸಂತೋಷಕರವನ್ನಾಗಿ ಮಾಡಿರಿ. ಮಕ್ಕಳಲ್ಲಿ ಯಾರಾದರು ಯಾವುದಾದರು ವೃತ್ತಿಯನ್ನು ನಟಿಸಿ ತೋರಿಸಲು ಮತ್ತು ಇತರರು ಅದು ಯಾರು ಎಂಬದಾಗಿ ಊಹೆ ಮಾಡಲಿ.

## ಕಂಠಪಾಠ ವಚನ

ಪ್ರತಿಯೊಂದು ಕಂಠಪಾಠ ವಚನವು ಅದರ ಪಾಠಕ್ಕೆ ಅನ್ವಯಿಸುತ್ತದೆ. ಕಂಠಪಾಠವನ್ನು ಹೆಚ್ಚು ಆಸಕ್ತಿಕರವನ್ನಾಗಿ ಮಾಡಲು ಯಾವುದಾದರು ಆಟ ಅಥವಾ ಚಟುವಟಿಕೆಯನ್ನು ಹುಡುಕುವ ಬಗ್ಗೆ ಆಲೋಚಿಸಿರಿ.

"ಕಂಠಪಾಠ ವಚನಗಳ ಆಟ" ಉಚಿತ ಡೌನ್‌ಲೋಡ್ ಅನ್ನು ನಾವು ಶಿಫಾರಸ್ಸು ಮಾಡುತ್ತೇವೆ.

## ವೇಳಾಪಟ್ಟಿ

ಪ್ರಾರಂಭ

* ಸ್ವಾಗತ
* ಹಾಡು

ನಾಟಕ ಮತ್ತು ಪಾಠ

* ನಾಟಕ ಭಾಗ 1
* ಪಾಠ
* ನಾಟಕ ಭಾಗ 2

ಚಟುವಟಿಕೆಗಳು

ವಿದ್ಯಾರ್ಥಿ ಪುಸ್ತಕ ಅಥವಾ ತಿಂಡಿ ತಿನ್ನುತ್ತಾ ಜೀವನಚರಿತ್ರೆ ಮತ್ತು ನ್ಯಾಯದ ಭಾಗವನ್ನು ಮಾಡಿರಿ.

* ಕಂಠಪಾಠ ವಚನ
* ವಿದ್ಯಾರ್ಥಿ ಪುಸ್ತಕಗಳು
* ಪ್ರಶ್ನೆಗಳು ಮತ್ತು ಉತ್ತರಗಳು (ಹಿರಿಯ ವಿದ್ಯಾರ್ಥಿಗಳಿಗೆ)
* ಆಟ (ಆಯ್ಕೆ)

ಮುಕ್ತಾಯ

* ಅಸ್ಸೈನ್ಮೆಂಟ್
* ಅಸ್ಸೈನ್ಮೆಂಟ್ ಕಾರ್ಡ್ಸ್

ಲಿಂಕ್: https://www.childrenareimportant.com/myCMU/series/series-memory-verse-games.php

## ವಿದ್ಯಾರ್ಥಿ ಪುಸ್ತಕಗಳು

ವಿದ್ಯಾರ್ಥಿ ಪುಸ್ತಕಗಳಲ್ಲಿರುವ ಒಗಟುಗಳನ್ನು ಬಿಡಿಸುವಾಗ ಮಕ್ಕಳು ಬಹಳ ಖುಷಿಪಡುವರು. ಪದಗಳನ್ನು ಹುಡುಕುವದು ಮತ್ತು ಚಿತ್ರಗಳಿಗೆ ಬಣ್ಣ ಹಚ್ಚುವದು ಪ್ರತಿಯೊಂದು ಪಾಠವನ್ನು ಪರಿಣಾಮಕಾರಿಯಾಗಿಸಲು ಸಹಾಯ ಮಾಡುತ್ತವೆ. ಪದಗಳ ಹುಡುಕಾಟ, ಅಂದರೆ ಮೌಲ್ಯ, ದೀನತೆ ಮತ್ತು ನ್ಯಾಯ ಇವುಗಳ ಬಗ್ಗೆ ಚರ್ಚೆ ಮಾಡಿರಿ ಹಾಗೂ ಈ ಪದಗಳು ನಿಮಗೆ ಏನಾಗಿವೆ ಎಂದು ಮಕ್ಕಳನ್ನು ಕೇಳಿರಿ.

## ಪ್ರಶ್ನೆಗಳು ಮತ್ತು ಉತ್ತರಗಳು (ಹಿರಿಯ ವಿದ್ಯಾರ್ಥಿಗಳಿಗೆ)

ವಯಸ್ಕ ಲೋಕದಲ್ಲಿ ಜೀವಿತವು ಬಹಳ ಗೊಂದಲಗಳಿಗೆ ಒಳಗಾಗಿದೆ. ಕಷ್ಟದ ಸಮಸ್ಯೆಗಳಿಗೆ ಯಾರಾದರೂ ಯಾವಾಗಲೂ ಉತ್ತರ ಕೊಡುತ್ತಾ ಇದ್ದರೆ ನಮಗೆ ಖುಷಿಯಾಗುವದಿಲ್ಲವೇ? ಆದರೆ ಸಾಮಾನ್ಯವಾಗಿ ಹಾಗೆ ಯಾರೂ ಇರುವದಿಲ್ಲ ಆದ್ದರಿಂದ ನಾವಾಗಿಯೇ ತಕ್ಕ ಮಟ್ಟಿಗೆ ಯಾವುದಾದರು ತೀರ್ಮಾನಕ್ಕೆ ಬರಬೇಕಾಗುತ್ತದೆ. ಹಿರಿಯ ವಿದ್ಯಾರ್ಥಿಗಳು ಸಹ ವಯಸ್ಕ ಸ್ಥಿತಿಗೆ ಸಮೀಪವಾಗುತ್ತಾ ಇದ್ದಾರೆ. ಒಂದುವೇಳೆ ನಾವು ಸಂಡೇ ಸ್ಕೂಲಿನಲ್ಲಿ ಎಲ್ಲವುಗಳಿಗೆ “ಸರಿಯಾದ ಉತ್ತರಗಳನ್ನು ಹೇಳಿ” ಕಠಿಣವಾದ ಪ್ರಶ್ನೆಗಳನ್ನು ಬಿಟ್ಟುಬಿಡುವದಾದರೆ, ಅವರಿಗೆ ಯಾವುದೇ ತರಬೇತಿಯನ್ನು ಕೊಟ್ಟಂತಾಗುವದಿಲ್ಲ ಮತ್ತು ತಾವಾಗಿಯೇ ಆಲೋಚನೆ ಮಾಡಲು ಹಾಗೂ ಸತ್ಯವೇದದ ಉತ್ತರಗಳನ್ನು ತಿಳಿದುಕೊಳ್ಳಲು ಅವರಿಂದ ಆಗುವದಿಲ್ಲ. ಇದರ ನಿಮಿತ್ತ ಅವರಿಗೇನಾದರೂ ಕಷ್ಟದ ಪರಿಸ್ಥಿತಿಗಳು ಎದುರಾಗುವಾಗ ಅವರು ಗೊಂದಲಗಳಿಗೆ ಒಳಗಾಗುತ್ತಾರೆ ಮತ್ತು ಇಕ್ಕಟ್ಟಿಗೆ ಸಿಲುಕುತ್ತಾರೆ ಹಾಗೂ ಕಾಲೇಜ್ ಪ್ರಾಧ್ಯಾಪಕರು ಮತ್ತು ಅಧಿಕಾರಿಗಳಿಂದ ಲೌಕಿಕ ಉತ್ತರಗಳನ್ನೇ ಕೇಳಿಸಿಕೊಳ್ಳುತ್ತಾರೆ. ಆದ್ದರಿಂದ, ಹಿರಿಯ ವಿದ್ಯಾರ್ಥಿಗಳು ಗಂಭೀರವಾದ ಆಲೋಚನೆಗಳನ್ನು ಮಾಡಲು ಅಭ್ಯಾಸ ಮಾಡುವಂತೆ ಸಹಾಯ ಮಾಡಲು ಈ ಭಾಗವನ್ನು ಉಪಯೋಗಿಸಿಕೊಳ್ಳಿರಿ. ಹಿರಿಯ ವಿದ್ಯಾರ್ಥಿಗಳ ನಡುವೆ ಚರ್ಚೆಯನ್ನು ಪ್ರಾರಂಭಿಸಿರಿ. ಅವರಿಗೆ “ಸರಿಯಾದ ಉತ್ತರವನ್ನು” ಹೇಳಬೇಡಿರಿ ಬದಲಾಗಿ ಅವರೇ ಸ್ವಂತವಾಗಿ ಯಾವುದಾದರು ಒಳ್ಳೆಯ ತೀರ್ಮಾನಕ್ಕೆ ಬರುವಂತೆ ಅವರನ್ನು ಸೌಮ್ಯವಾಗಿಯೇ ಪ್ರೋತ್ಸಾಹಪಡಿಸಿರಿ. ಶಿಕ್ಷಕರಿಗೆ ಮಾರ್ಗದರ್ಶಕವಾಗಿ ಕಷ್ಟದ ಪ್ರಶ್ನೆಗಳಿಗೆ ಕೆಲವು ಉತ್ತರಗಳನ್ನು ಕೊಟ್ಟಿದ್ದೇವೆ.

## ಆಟ

ವಿದ್ಯಾರ್ಥಿಗಳೊಂದಿಗೆ ಆಟ ಆಡಿರಿ! ಆಟಗಳು ಮಕ್ಕಳಿಗೆ ಬಹಳ ಪ್ರಾಮುಖ್ಯವಾಗಿದ್ದು, ಅವರು ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ಮಾಡುತ್ತವೆ. ಇದರೊಂದಿಗೆ, ಅವು ತಮಾಷೆಯಾಗಿಯೂ ಇರುತ್ತವೆ. ಮಕ್ಕಳು ತಮ್ಮ ಸ್ನೇಹಿತರನ್ನು ನಿಮ್ಮ ತಮಾಷೆಯ ತರಗತಿಗಳಿಗೆ ಆಹ್ವಾನಿಸುವಾಗ ಅನೇಕ ಮಕ್ಕಳು ಬಂದು ಯೇಸು ಕ್ರಿಸ್ತನ ಬಗ್ಗೆ ತಿಳಿದುಕೊಳ್ಳಲು ಅವರನ್ನು ಪ್ರೋತ್ಸಾಹಪಡಿಸಲು ಇದು ಉತ್ತಮವಾದ ಸಾಧನವಾಗಿದೆ.

## ಹೋಮ್‌ವರ್ಕ್ ಅಸೈನ್ಮೆಂಟ್

ನಾವು ದೇವರ ವಾಕ್ಯವನ್ನು ಕೇಳಿಯೂ ಅದರಂತೆ ನಡೆಯದೆ ಹೋದರೆ ಅದರಿಂದ ನಮಗೆ ಯಾವುದೇ ಪ್ರಯೋಜನವಿಲ್ಲ ಎಂದು ದೇವರ ವಾಕ್ಯ ಹೇಳುತ್ತದೆ (ಯಾಕೋಬ 1:22-25). ಮಕ್ಕಳಿಗೆ ಅವರು ಕಲಿತುಕೊಂಡಿರುವ ವಿಷಯಗಳಿಂದ ಏನಾದರೂ ಮಾಡುವ ಮೂಲಕ ತಮ್ಮ ಅನುದಿನದ ಜೀವಿತಗಳಿಗೆ ಅಳವಡಿಸಿಕೊಳ್ಳುವಂತೆ ತರಬೇತಿಯನ್ನು ಕೊಡಿರಿ. ಕಳೆದ ವಾರದ ಅಸೈನ್ಮೆಂಟ್ ಪೂರೈಸಿರುವ ಮಕ್ಕಳಿಗೆ ಕ್ಯಾಂಡಿ ಅಥವಾ ಸಣ್ಣ ಬಹುಮಾನವನ್ನು ಕೊಡಲು ಕೆಲವು ನಿಮಿಷಗಳನ್ನು ಉಪಯೋಗಿಸಿರಿ.

## ಕಾರ್ಡ್ಸ್

ಈ ಕಾರ್ಡ್‌ಗಳನ್ನು ಹಾಜರಾತಿಯ ಬಹುಮಾನವಾಗಿ ಉಪಯೋಗಿಸಿರಿ. ಮುಂಭಾಗದಲ್ಲಿ ಪ್ರತಿಯೊಂದು ಸಂತಸದ ರಚನೆಯನ್ನು ಹೊಂದಿರುತ್ತದೆ ಮತ್ತು ಹಿಂಭಾಗದಲ್ಲಿ ಕಂಠಪಾಠ ವಚನವನ್ನು ಹೊಂದಿರುತ್ತದೆ.

# ಯೇಸು ಕ್ರಿಸ್ತನ ಹಾಗೆ ಘೋಷಣೆ ಮಾಡಿರಿ 01

**4000 ಜನರಿಗೆ ಊಟ ಕೊಟ್ಟನು: ಮತ್ತಾಯ 15:29-38**



### ನಾಟಕ (ಭಾಗ 1)

ಈ ವಾರದ ಎಲ್ಲಾ ದಿವಸ ತನಿಖಾಧಿಕಾರಿಯು ಮೈಯೆಲ್ಲಾ ಒಣಗಿ, ಹಸಿವೆಯಲ್ಲಿದ್ದ ಮತ್ತು ಕೊಳಕು ಬಟ್ಟೆಗಳನ್ನು ಹಾಕಿಕೊಂಡಿದ್ದ ಯಾರೋ ಒಬ್ಬನನ್ನು ನೋಡಿದಳು. ಆಕೆ ತಂಡದ ಇತರೆ ಸದಸ್ಯರಾದ ನಾಯಕ ಮತ್ತು ಏಜೆಂಟ್ ಗೆ ಆ ವ್ಯಕ್ತಿಯ ಬಗ್ಗೆ ಹೇಳಿದಳು ಹಾಗೂ ವಾರವೆಲ್ಲಾ ಆತನಿಗಾಗಿ ತಾನು ಪ್ರಾರ್ಥನೆ ಮಾಡುತ್ತಿರುವದನ್ನೂ ತಿಳಿಸಿದಳು. ಆಕೆ ಒಳ್ಳೆಯ ಕಾರ್ಯಮಾಡುತ್ತಿದ್ದಾಳೆಂದು ಅವರು ಆಲೋಚಿಸಿದರು. ಅವರು ಟೈಮ್ ಮಿಷನ್ ಹತ್ತಿದರು ಮತ್ತು ಒಂದುವೇಳೆ ಸಾಧ್ಯವಾದರೆ ಅವರು ಟೈಮ್ ಮಿಷನ್ ಅಲುಗಾಡಿಸಿದರು ಹಾಗೂ ಮಿಷನ್ ಅವರನ್ನು ಪಾಠದ ಅವಧಿಗಾಗಿ ಹಿಂದಕ್ಕೆ ಕಳುಹಿಸುವದರಿಂದ ಯಾಂತ್ರಿಕ ಶಬ್ದಗಳನ್ನು ಮಾಡಬಹುದು.

### ಪಾಠ

ಜನರ ದೊಡ್ಡ ಗುಂಪು ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾ ಆತನ ಬೋಧನೆಗಳನ್ನು ಕೇಳಿಸಿಕೊಳ್ಳುತ್ತಾ ಇತ್ತು. ಯೇಸು ಕ್ರಿಸ್ತನ ಮಾತುಗಳನ್ನು ಅವರು ಕೇಳಿಸಿಕೊಳ್ಳುತ್ತಾ ಆತನು ಮಾಡುತ್ತಿದ್ದ ಅದ್ಭುತ ಕಾರ್ಯಗಳನ್ನು ನೋಡುತ್ತಾ ಊಟವನ್ನೇ ಮಾಡಿರಲಿಲ್ಲ, ಆದ್ದರಿಂದ ಅವರಿಗೆ ಹಸಿವೆ ಆಯಿತು. ಯೇಸು ಕ್ರಿಸ್ತನಿಗೆ ಅವರ ಮೇಲೆ ಕನಿಕರ ಉಂಟಾಯಿತು.

ಮತ್ತಾಯ 15:29-38 ಓದಿರಿ

ಆತನ ಹೃದಯದಲ್ಲಿ ಕನಿಕರ ಉಂಟಾದದ್ದರಿಂದ ಜನರ ಹಸಿವೆ ತೀರಲಿಲ್ಲ. ಯೇಸು ಕ್ರಿಸ್ತನು ತನ್ನ ಕನಿಕರವನ್ನು ಕ್ರಿಯೆಯಲ್ಲಿ ಮಾರ್ಪಡಿಸಿದನು ಮತ್ತು ಅಧ್ಭುತಕಾರ್ಯವನ್ನು ಮಾಡಿ ಏಳು ರೊಟ್ಟಿ ಹಾಗೂ ಕೆಲವು ಸಣ್ಣ ಮೀನುಗಳಿಂದ 4000 ಜನರಿಗೆ ಆಹಾರವನ್ನು ಒದಗಿಸಿದನು. ಎಲ್ಲರೂ ತೃಪ್ತರಾಗಿ ತಿಂದರು! ಯೇಸು ಕ್ರಿಸ್ತನು ಬೇಕಾಗುವದಕ್ಕಿಂತ ಹೆಚ್ಚಿನದನ್ನು ಒದಗಿಸಿದನು. ನಿಮ್ಮ ಹೃದಯದಲ್ಲಿ ಕನಿಕರ ಹುಟ್ಟುವಂತೆ ಮಾಡುವ ಜನರು ಯಾರು ಎಂದು ನಿಮಗೆ ಗೊತ್ತಿದೆಯೇ? ನಿಮಗಿರುವವುಗಳಿಗಿಂತ ಕಡಿಮೆ ಹೊಂದಿರುವವರು ಅಥವಾ ಯಾವುದಾದರೊಂದು ರೀತಿಯಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವವರು? ಯೇಸು ಕ್ರಿಸ್ತನಂತೆ ನಾವು ನಿಜವಾಗಿಯೂ ಕನಿಕರಪಟ್ಟರೆ ಅದು ನಮ್ಮನ್ನು ಕ್ರಿಯೆಗೆ ನಡೆಸುತ್ತದೆ. ಹೋಗಿ ಅದರ ವಿಷಯದಲ್ಲಿ ನಾವು ಏನಾದರು ಮಾಡುತ್ತೇವೆ. ಲೋಕದ ಬಹುತೇಕ ಸಮಸ್ಯೆಗಳು ಬಹಳ ದೊಡ್ಡದಾಗಿವೆ ಮತ್ತು "ನನ್ನಿಂದ ಏನೂ ಮಾಡಲು ಆಗುವದಿಲ್ಲ" ಎಂದು ನಾವು ಯೋಚಿಸುತ್ತೇವೆ. ಆದರೆ ನಮಗೆ ಸಹಾಯ ಮಾಡಲು ಒಬ್ಬ ವ್ಯಕ್ತಿ ಯಾವಾಗಲೂ ಸಿದ್ಧನಾಗಿರುತ್ತಾನೆ. ಅವರಿಗೆ ಸಹಾಯ ಮಾಡುವ ಮೂಲಕ ಯೇಸು ಕ್ರಿಸ್ತನು ಕೊಡುವ ಪ್ರೀತಿಯನ್ನು ಅವರಿಗೆ ಕೊಡುವದು ಬಹಳ ತೃಪ್ತಿಕರವಾಗಿರುತ್ತದೆ.

### ಕಂಠಪಾಠ ವಚನ

ಯಕೋಬನು 2:15-16 ಒಂದು ವೇಳೆ ಒಬ್ಬ ಸಹೋದರನಾಗಲಿ, ಸಹೋದರಿಯಾಗಲಿ ದಿನನಿತ್ಯ ಊಟಬಟ್ಟೆಗಿಲ್ಲದೆ ಇರುವಾಗ, ನಿಮ್ಮಲ್ಲಿ ಯಾರಾದರು ಅವರಿಗೆ ಅಗತ್ಯವಾದುದನ್ನು ನೀಡದೆ, "ಹೋಗು, ಸುಖವಾಗಿ ಬಾಳು, ಚಳಿ ಕಾಯಿಸಿಕೊ, ಹೊಟ್ಟೆ ತುಂಬಾ ತಿನ್ನು," ಎಂದು ಬರೀ ಬಾಯಿಮಾತಿನಲ್ಲಿ ಉಪಚರಿಸಿದರೆ ಅದರಿಂದಾದ ಪ್ರಯೋಜನವೇನು?

## ನಾಟಕ (ಭಾಗ 2)

ಮುಖ್ಯ ಪಾಠದ ನಂತರ, ತಂಡದವರು ಪ್ರಸ್ತುತ ಸಮಯಕ್ಕೆ ಹಿಂದಿರುಗುವರು ಮತ್ತು ಟೈಮ್ ಮಿಷನ್‌ನಿಂದ ಹೊರಗೆ ಬಂದರು. ಯೇಸು ಕ್ರಿಸ್ತನು ಸಾವಿರಾರು ಜನರಿಗೆ ರೊಟ್ಟಿ ಮತ್ತು ಮೀನುಗಳನ್ನು ಹಂಚಿದ್ದನ್ನು ನೋಡಿ ಅವರೆಲ್ಲರೂ ಆಶ್ಚರ್ಯಪಟ್ಟರು. ಕೆಲವು ಗಿಡಗಳ ಬದಿಯಲ್ಲಿ ಬಿದ್ದಿದ್ದ ಒಂದೆರೆಡು ಚೂರುಗಳನ್ನು ಅವರೂ ತಿಂದರು (ಸಮಯ ಅಂತರದ ನಿರಂತರತೆಯನ್ನು ಮುರಿಯದ ನಿಮಿತ್ತ ಕಾಣಿಸಿಕೊಳ್ಳದಂತೆ ಅವರು ಉತ್ತಮ ಪ್ರಯತ್ನವನ್ನು ನಡೆಸಿದರು). ಯೇಸು ಕ್ರಿಸ್ತನು ಕನಿಕರಪಟ್ಟದ್ದು ಮತ್ತು ಹಸಿವೆಯಲ್ಲಿದ್ದ ಜನರಿಗೆ ಪ್ರಾರ್ಥನೆ ಮಾಡಿದ್ದು ಮಾತ್ರವಲ್ಲ ಬದಲಾಗಿ ಅವರಿಗೆ ಆಹಾರ ಒದಗಿಸಿದ್ದನ್ನು ತನಿಖಾಧಿಕಾರಿಯು ತಂಡವರಿಗೆ ತಿಳಿಸಿದಳು. ತಾನು ಪ್ರತಿದಿನ ದಾರಿಯಲ್ಲಿ ನೋಡುತ್ತಿರುವ ವ್ಯಕ್ತಿಗೆ ಏನಾದರೂ ಮಾಡಬೇಕೆಂದು ಆಕೆ ಅರಿತುಕೊಂಡಳು. ಅವರೆಲ್ಲರೂ ಹೇಗೆ ಸಹಾಯ ಮಾಡಬಹುದೆಂದು ಯೋಚಿಸಿದರು, ಅಂದರೆ ಮನೆಯಿಂದ ಸ್ಯಾಂಡ್‌ವಿಚ್ ತರುವದು ಅಥವಾ ಆ ವ್ಯಕ್ತಿಯನ್ನು ಪರಿಚಯಪಡಿಸಲು ಹತ್ತಿರದಲ್ಲಿ ಯಾವುದಾದರು ಸೇವೆ ಇದೆಯೇ ಹಾಗು ಆತನಿಗಾಗಿ ಪ್ರಾರ್ಥನೆ ಮಾಡುವದನ್ನು ಮುಂದುರೆಸುವದರ ಬಗ್ಗೆ ಆಲೋಚನೆ ಮಾಡಿದರು.

## ನ್ಯಾಯ

ಯೇಸು ಕ್ರಿಸ್ತನು ನಿಜವಾಗಿಯೂ ಇತರೆ ಜನರನ್ನು ಪೋಷಿಸಿದನು. ಆತನು ಹಸಿವೆಯಲ್ಲಿದ್ದ ಜನರ ಗುಂಪನ್ನು ನೋಡಿ ಕನಿಕರಪಟ್ಟನು ಮತ್ತು ಅವರ ಹಸಿವೆಯನ್ನು ನೀಗಿಸಿದನು. ನಾವು ಯಾವಾಗಲೂ ಉದಾರಿಗಳಾಗಿದ್ದು ಇತರರ ಅವಶ್ಯಕತೆಗಳನ್ನು ಪೂರೈಸಬೇಕು.

## ಜೀವನಚರಿತ್ರೆ (ಬಾಸ್)

ಎಲ್ಲರು ಅಥವಾ ಸಂಸ್ಥೆಯ ಒಂದು ಭಾಗದ ಮೇಲೆ ಮೇಲ್ವಿಚಾರಣೆ ನಡೆಸುವ ಜವಾಬ್ದಾರಿಕೆ ಬಾಸ್ ನದ್ದಾಗಿರುತ್ತದೆ ಮತ್ತು ಆತನು ಕೆಲಸಗಳನ್ನು ಪೂರ್ಣಗೊಳಿಸಲು, ಗುರಿಗಳನ್ನು ಸಾಧಿಸಲು ಒಟ್ಟಾಗಿ ಕಾರ್ಯಮಾಡುವ ತಂಡದವನ್ನು ಮುನ್ನಡೆಸುತ್ತಾನೆ. ಸತ್ಯವೇದದಲ್ಲಿ ನಾವು ಇದಕ್ಕೆ ಅನೇಕ ಉದಾಹರಣೆಗಳನ್ನು ನೋಡಬಹುದು, ಅರಸರಿಂದ ಸಂಗೀತಗಾರರು, ಅಧಿಪತಿಗಳು ಮತ್ತು ಕಾರ್ಯನಿರ್ವಹಕರು ನಮಗೆ ಸಿಗುತ್ತಾರೆ.

ಜವಾಬ್ದಾರಿಕೆಗಳು: ಬಾಸ್ ಆದವನು ಸಂಸ್ಥೆಯ ಮುಖ್ಯ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಆ ಉದ್ದೇಶಗಳನ್ನು ನೆರವೇರಿಸಲು ತನ್ನ ತಂಡವನ್ನು ಮುನ್ನಡೆಸಬೇಕು. ಉತ್ತಮವಾದ ಸಾಮರಸ್ಯದೊಂದಿಗೆ

ಪ್ರತಿಯೊಬ್ಬರು ಕಾರ್ಯಮಾಡುವದನ್ನು ಮತ್ತು ನೀವು ಬಯಸುವ ಫಲಿತಾಂಶವನ್ನು ಎದುರುನೋಡುವಂತೆ ತಡೆಯಲು ಯಾವುದಕ್ಕೂ ಅವಕಾಶ ಕೊಡದೆ ಇರುವದನ್ನು ದೃಢಪಡಿಸುವದು ಬಾಸ್ ಕೆಲಸವಾಗಿರುತ್ತದೆ. ಕಂಪನಿಯ ಹೆಸರು ಮತ್ತು ಪ್ರಸಿದ್ಧತೆಯನ್ನು ಕಾಪಾಡಿಕೊಳ್ಳುವದು ಬಾಸ್ ಕರ್ತವ್ಯವಾಗಿದೆ; ಹಾಗೂ ತಮ್ಮ ಕಾರ್ಯವು ದಾರಿ ತಪ್ಪದಂತೆ ನೋಡಿಕೊಳ್ಳುವದು ಮುಖ್ಯವಾಗಿದೆ.

ಅವಕಾಶಗಳು: ಸೇವಕ ನಾಯಕನಾಗಿರುವದು ಹೇಗೆ ಎಂಬದನ್ನು ಬಾಸ್ ಆದವನ್ನು ನಮ್ಮ ಮಹಾ ಅರಸನಾಗಿರುವ ಯೇಸು ಕ್ರಿಸ್ತನ ಮೂಲಕ ಕಲಿತುಕೊಳ್ಳಬಹುದು. ಪ್ರಸಿದ್ಧನಾಗಿರುವ ಬಾಸ್ ತನ್ನ ಬಳಿ ಕೆಲಸ ಮಾಡುವವರ ಮೇಲೆ ಪ್ರಭುತ್ವ ಸಾಧಿಸುವದಿಲ್ಲ ಬದಲಾಗಿ ಅವರ ಸೇವೆ ಮಾಡುತ್ತಾನೆ. ತನ್ನ ಬಳಿ ಕೆಲಸ ಮಾಡುವವರನ್ನು ಪ್ರೋತ್ಸಾಹಪಡಿಸುವ ಮೂಲಕ, ಇತರರ ಎದುರಿನಲ್ಲಿ ಅವರನ್ನು ಹೊಗಳುವ ಮೂಲಕ, ಅವರ ಕೊಡುಗೆ ಮತ್ತು ಒಳ್ಳೆಯ ಕೆಲಸಗಳನ್ನು ಗುರುತಿಸುವ ಮೂಲಕ, ತನ್ನ ಬಳಿ ಕೆಲಸ ಮಾಡುವವರ ಒಳ್ಳೆಯ ಆಲೋಚನೆಗಳನ್ನು ನೆರವೇರಿಸುವ ಮೂಲಕ ಅವರನ್ನು ಪರಿಪಕ್ವರನ್ನಾಗಿಸುವ ಒಳ್ಳೆಯ ಅವಕಾಶ ಬಾಸ್ ಗೆ ಇರುತ್ತದೆ.

ಸೇವೆ ವ್ಯವಸ್ಥಾಪಕನು ತನ್ನ ತಂಡವು ವಿಫಲತೆಯ ಮಾರ್ಗವನ್ನು ಹಿಡಿಯದಂತೆ ಅದನ್ನು ತಡೆಯುತ್ತಾನೆ ಮತ್ತು ತನ್ನ ಕಾರ್ಮಿಕರಿಗೆ ಪರಸ್ಪರ ವಿಷಯಗಳಲ್ಲಿ ಮಾರ್ಗದರ್ಶನವನ್ನು ಕೊಡುತ್ತಾನೆ, ಕೆಲವೊಮ್ಮೆ ಇತರರ ಒಳಿತಿಗಾಗಿ ಕಷ್ಟದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾನೆ. ಬಾಸ್ ಆದವನು ತನ್ನ ಕಾರ್ಮಿಕರು ತಮ್ಮ ಕೆಲಸವನ್ನು ಸರಿಯಾಗಿ ನಿಭಾಯಿಸುವ ಸಲುವಾಗಿ ಅವರಿಗೆ ಸಾಮಗ್ರಿಗಳು, ತರಬೇತಿ ಮತ್ತು ಪ್ರೋತ್ಸಾಹವನ್ನು ಕೊಡುತ್ತಾನೆ ಹಾಗೆಯೇ ಬೆಳೆಯಲು ಮತ್ತು ಹೊಸ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಅವಕಾಶಗಳನ್ನು ಒದಗಿಸುತ್ತಾ, ಯಾವಾಗಲೂ ಕಾರ್ಮಿಕರಲ್ಲಿ ಸ್ವಭಾವಿಕ ತಲಾಂತುಗಳನ್ನು ಹುಡುಕುತ್ತಾನೆ ಹಾಗೂ ತಮ್ಮ ಸ್ವಂತ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಪಡಿಸುತ್ತಾನೆ.

## ಪ್ರಶ್ನೆಗಳು ಮತ್ತು ಉತ್ತರಗಳು

1. ಕೆಲವೊಮ್ಮೆ ದೇವರ ವಿಷಯಗಳಲ್ಲಿ ನಾನು ಯಾಕೆ ಸಮಾಧಾನದಿಂದ ಇರುವದಿಲ್ಲ?

ಅನೇಕ ಸಮಯಗಳಲ್ಲಿ ನಾವು ನಮ್ಮ ಸ್ನೇಹಿತರಿಂದ ನಮಗೆ ಸಂತೋಷ ಸಿಗುತ್ತದೆ, ಅವರ ಬೆಂಬಲ ಅಥವಾ ಪ್ರೋತ್ಸಾಹ ಇಲ್ಲದೆ ಹೋದರೆ ಎಲ್ಲೇ ಹೋದರೂ ನಮಗೆ ಸಮಾಧಾನ ಇರುವದಿಲ್ಲ ಎಂದು ಯೋಚಿಸುತ್ತೇವೆ. 2 ತಿಮೊಥೆ 2:15ರಲ್ಲಿ ದೇವರ ವಾಕ್ಯ ಕಲಿಸುವದನ್ನು ನೆನಪಿನಲ್ಲಿಟ್ಟುಕೊಳ್ಳಿರಿ (ಜೋರಾಗಿ ಓದಿರಿ) ನೀವು ನಿಮ್ಮ ಸ್ನೇಹಿತರ ಸಮ್ಮತಿಗೆ ಬದಲಾಗಿ ದೇವರ ಸಮ್ಮತಿಯನ್ನು ಅನುಭವಿಸಲು ಪ್ರಾರಂಭಿಸುವದು ಹೆಚ್ಚು ಉತ್ತಮವಾಗಿರುತ್ತದೆ, ಇದಲ್ಲದೆ ನೀವು ದೇವರ ವಾಕ್ಯಗಳನ್ನು ಹೆಚ್ಚಾಗಿ ಓದುವಾಗ ಮತ್ತು ಅಭ್ಯಾಸ ಮಾಡುವಾಗ, ಅದು ಭವಿಷ್ಯದಲ್ಲಿ ನಿಮಗೆ ಸಹಾಯ ಮಾಡುತ್ತದೆ, ಮನೋಭಾವನೆಯಲ್ಲಿಯೂ ಬದಲಾವಣೆ ಉಂಟಾಗುತ್ತದೆ.

2. ನಿಮ್ಮ ತಂದೆತಾಯಿಗಳು ಮತ್ತು ಅಧಿಕಾರಿಗಳಿಗೆ ನೀವು ಕನಿಕರವನ್ನು ಹೇಗೆ ತೋರಿಸಬಹುದು?


ನಾವು ನಮ್ಮ ತಂದೆತಾಯಿಗಳಿಗೆ ಅಧೀನರಾಗಿ ಜೀವಿಸುವದನ್ನು ದೇವರ ಬಹಳವಾಗಿ ಶ್ಲಾಘಿಸುತ್ತಾನೆ, ಅದುವೇ ವಾಗ್ದಾನ ಸಹಿತವಾದ ಮೊದಲನೆಯ ಆಜ್ಞೆಯಾಗಿದೆ. ನಕಾರಾತ್ಮಕವಾಗಿ ನಿಮ್ಮ ತಂದೆತಾಯಿಗಳ ಮೇಲೆ ಪ್ರಭಾವ

ಬೀರುವ ಮನೋಭಾವನೆಯನ್ನು ನೀವು ನಿಜವಾಗಿಯೂ ಬದಲಾಯಿಸಲು ಬಯಸುವದಾದರೆ, ನಾವು ಯಾಕೆ ಆ ರೀತಿ ನಡೆದುಕೊಂಡೆವು, ನನ್ನ ತಂದೆತಾಯಿಗಳಿಗೆ ಕನಿಕರ ತೋರಲು ಆಗುತ್ತಿಲ್ಲ ಆದರೆ ಇತರರೆ ತೋರಿಸಲು ಆಗುತ್ತಿದೆಯಲ್ಲಾ ಯಾಕೆ ಎಂದು ಒಂದು ಕ್ಷಣ ಆಲೋಚನೆ ಮಾಡಿರಿ. ಬದಲಾವಣೆ ಮಾಡಿಕೊಳ್ಳುವದು ವೈಯಕ್ತಿಕವಾದ ತೀರ್ಮಾನವಾಗಿದೆ ಮತ್ತು ದೀನತೆಯ ಮನೋಭಾವನೆಯೊಂದಿಗೆ, ಒಂದುವೇಳೆ ನಾವು ಆ ವಿಷಯಗಳನ್ನು ದೇವರಿಗೆ ಒಪ್ಪಿಸಿದರೆ, ನಾವು ಬದಲಾಗಲು ಮತ್ತು ನಮ್ಮ ಸಮಯದಲ್ಲಿ ಹೆಚ್ಚು ಸಂತೋಷಪಡಲು ಸಾಧ್ಯವಾಗುತ್ತದೆ.

## ಒಗಟಿನ ಉತ್ತರಗಳು

### ಪದ ಹುಡುಕುವದು

| | | | | | | | | | |
|---|---|---|---|---|---|---|---|---|---|
| ಆ | ಸ | ಜ | ಪ್ರೀ | ಗ್ಗಿ | ಚ | ಕ | ಕಾ | ಅ | ಜ |
| ಹ | ಹಾ | ನ | ಮೀ | ತಿ | ಯೇ | ರು | ಗ್ಗಿ | ಧ್ಬು | ರ |
| ಸಿ | ಯ | ರ | ಧ್ಬು | ನ | ವ | ಣೆ | ವೆ | ತ | ಸ |
| ವೆ | ದ | ಗುಂ | ಒ | ಟ್ಟ | ಸೂ | ರೊ | ಸಿ | ಕಾ | ಗ |
| ಸ | ಣೆ | ಪು | ಲ್ಬ | ದ | ನ | ಭ | ಟ್ಟಿ | ಯ್ಗ | ಳು |
| ರ | ಮ | ಸ | ತ | ಧಾ | ಗಿ | ಪೂ | ರಾ | ಗ | ಒ |
| ನು | ಗ್ಗಿ | ಸ್ವೈ | ನ | ಳು | ಕೆ | ಸಿ | ಯ್ಗ | ಳು | ಳು |
| ಕು | ಕಾ | ರೊ | ಗ | ರಿ | ರು | ಕಾ | ದ | ಯೇ | ಗ್ಗಿ |
| ಚ | ಯೇ | ನೆ | ಹ | ಳು | ಕ | ಧ್ಬು | ಮೀ | ನು | ಸು |
| ಳು | ವ | ರ | ಒ | ಚ | ದ | ಗಿ | ಸಿ | ದ | ನು |
| ಭಾ | ಆ | ಹಾ | ಸೂ | ಣೆ | ಧಾ | ರಾ | ಳ | ತ | ನ |



ವಾಕ್ಯವನ್ನು ಪೂರ್ತಿಗೊಳಿಸಲು ಪಟ್ಟಿಯಲ್ಲಿರುವ ಪದಗಳಲ್ಲಿ ಒಂದನ್ನು ಉಪಯೋಗಿಸಿರಿ.
ಉಪಯೋಗಿಸದೆ ಇರುವ ಪದಗಳಿಗೆ x ಗುರುತು ಹಾಕಿರಿ.


**4000** **ರೊಟ್ಟಿ** **ಬಂಡೆಗಳು** **ಊಟ ಒದಗಿಸಿದನು** **ಕರುಣೆ**

**ಕೋಪ** **ಮೀನು** **ಸಮಯ** **ಜನರ ಗುಂಪು** **100**

ನನಗೆ ಗೊತ್ತಿಲ್ಲ . . .
**ಜನರ ಗುಂಪು** ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾ ಇತ್ತು.
ಯೇಸು ಕ್ರಿಸ್ತನು ***4000*** ಜನರಿಗೆ ಊಟ ಒದಗಿಸಿದನು,
ಆತನು ಏಳು **ರೊಟ್ಟಿ** ಮತ್ತು ಕೆಲವು **ಮೀನು** ಮೂಲಕ ಈ ಅದ್ಭುತ ಮಾಡಿದನು
ಯೇಸು ಕ್ರಿಸ್ತನು ಜನರ **ಕರುಣೆ** ಮತ್ತು **ಊಟ ಒದಗಿಸಿದನು**.


## ಆಟ

**ನಿಮ್ಮ ದೇಹದ ಮೂಲಕ ಸ್ವಾಗತಿಸುವದು**



ಮಕ್ಕಳನ್ನು ಮುಂದಕ್ಕೆ ಕರೆದು ಸಮಾನ ಸಂಖ್ಯೆಯಲ್ಲಿ ಎರಡು ವೃತ್ತಗಳನ್ನು ಮಾಡುವಂತೆ ಹೇಳಬೇಕು, ಒಂದು ಒಳಗೆ ಮತ್ತು ಇನ್ನೊಂದು ಹೊರಗೆ, ನಂತರ ವೃತ್ತದಲ್ಲಿರುವ ಒಬ್ಬರ ಕಡೆಗೆ ಒಬ್ಬರು ಮುಖ ಮಾಡಬೇಕು. ಇದಲ್ಲದೆ ತಮ್ಮ ಎದುರಿನಲ್ಲಿರುವವರ ಕೈ ಕುಲುಕಿ ತಮ್ಮ ಹೆಸರು, ಹಾಗೂ ಇಷ್ಟವಿರುವವುಗಳು ಮತ್ತು ಇಷ್ಟವಿಲ್ಲದವುಗಳನ್ನು ಹೇಳಬೇಕು. ವೃತ್ತಗಳು ವಿರುದ್ಧ ದಿಕ್ಕನಲ್ಲಿ ಸುತ್ತುವಂತೆ ಶಿಕ್ಷಕ ಸೂಚನೆಯನ್ನು ಕೊಡಬೇಕು, ಸೂಚನೆ ಮುಗಿದ ನಂತರ, ಪ್ರತಿಯೊಂದು ಮಗು ಮತ್ತೊಂದು ಮಗುವಿನ ಎದುರಿನಲ್ಲಿ ನಿಂತಿರಬೇಕು. ಅವರು ಒಬ್ಬರಿಗೊಬ್ಬರು ಹೈ-ಫೈವ್ ಕೊಡುವಂತೆ, ತಮ್ಮ ಹೆಸರು ಮತ್ತು ಇತರೆ ಪ್ರಶ್ನೆಗಳನ್ನು ಕೇಳುವಂತೆ ತಮ್ಮನ್ನು ಪರಿಚಯಪಡಿಸುವಂತೆ ಹೇಳಬೇಕು. ಉದಾಹರಣೆಗೆ, ವಾರಾಂತ್ಯದಲ್ಲಿ ನೀವೇನು ಮಾಡಿದಿರಿ? ನಂತರ ಅವರು ಮತ್ತೆ ಸುತ್ತಬೇಕು ಮತ್ತು ಈ ಸಲ ತಮ್ಮ ಕಾಲುಗಳನ್ನು ಕುಲುಕಬೇಕು, ಆಮೇಲೆ ಮೊಣಕೈ, ಭುಜಗಳು, ಇತ್ಯಾದಿ.

## ಹೋಮ್ ವರ್ಕ್




ನಿಮ್ಮ ಶಾಲೆ ಅಥವಾ ನೆರೆಹೊರೆಯಲ್ಲಿ ಅವಶ್ಯಕತೆಯಲ್ಲಿರುವ ಸಹಪಾಠಿಯನ್ನು ಹುಡುಕಿರಿ. ಒಂದುವೇಳೆ ಸೂಕ್ತ ಅನ್ನಿಸಿದರೆ ಆತನಿಗೆ ಹಣ್ಣು, ಕಾಳು ಅಥವಾ ತಿನ್ನಲು ಬೇರೆ ಏನಾದರೂ ತರುವಂತೆ – ಅಂದರೆ ಅವನಿಗೆ ಮತ್ತು ಅವನ ಕುಟುಂಬದವರಿಗೆ ಒದಗಿಸಲು ಸಹಾಯ ಮಾಡುವಂತೆ ಕೇಳಿಕೊಳ್ಳಿರಿ. ಹಂಚಿಕೊಳ್ಳಲು ಹೆಚ್ಚಿನ ಊಟವನ್ನು ತೆಗೆದುಕೊಂಡು ಹೋಗಿರಿ. ನಿಮ್ಮ ಶಾಲೆಯಲ್ಲಿ ಕಸಗೂಡಿಸುವ ವ್ಯಕ್ತಿಯೊಂದಿಗೂ ನೀವು ಈ ಕಾರ್ಯ ಮಾಡಬಹುದು ಎಂಬದನ್ನು ಮರೆಯಬೇಡಿರಿ.

# ಎಲ್ಲರಿಗು ಉಚಿತ

02

**ಬಾವಿಯ ಬಳಿ ನೀರಿಗೆ ಬಂದ ಸ್ತ್ರೀ: ಯೋಹಾನ 4:14-15**



ನಾಟಕ (ಭಾಗ 1)

ತನಿಖಾಧಿಕಾರಿಯು ಇತ್ತೀಚೆಗೆ ಪಟ್ಟಣದ ಇನ್ನೊಂದು ಕಡೆಯಲ್ಲಿದ್ದ ಒಬ್ಬ ವ್ಯಕ್ತಿಯನ್ನು ಭೇಟಿ ಮಾಡಿದಳು. ಆ ಹೊಸ ಸ್ನೇಹಿತನ ಆಲೋಚನೆಗಳು ತನ್ನ ಆಲೋಚನೆಗಿಂತ ಹೇಗೆ ಭಿನ್ನವಾಗಿವೆ ಎಂಬದನ್ನು ತನ್ನ ತಂಡದವರಿಗೆ ತಿಳಿಸಿದಳು. ಆಕೆ ಯೋಚನೆ ಮಾಡುತ್ತಿದ್ದ ಕೆಲವು ವಿಷಯಗಳು ಆಕೆಯ ಸ್ನೇಹಿತನ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲ, ಆದರೆ ಆಕೆಗೆ ಪ್ರಾಮುಖ್ಯವೇ ಅಲ್ಲದ ಸಂಗತಿ ಒಂದು ಆಕೆಯ ಸ್ನೇಹಿತೆಗೆ ಬಹಳ ಬೇಸರವನ್ನುಂಟು ಮಾಡಿತು. ಆಕೆಯ ಹೊಸ ಸ್ನೇಹಿತನಿಗೆ ವೈಯಕ್ತಿಕ ಶುಚಿತ್ವ ಹೇಗಿರಬೇಕು ಎಂಬ ವಿಷಯದಲ್ಲಿ ಭಿನ್ನವಾದ ಆಲೋಚನೆ ಇತ್ತು. ಆಕೆ ತನ್ನ ಸ್ನೇಹಿತನೊಂದಿಗೆ ಯೇಸು ಕ್ರಿಸ್ತನೊಂದಿಗೆ ಮಾತನಾಡಲು ಬಯಸಿದಳು ಆದರೆ ಹೇಗೆ ಎಂಬದು ಗೊತ್ತಿರಲಿಲ್ಲ. ಯೇಸು ಕ್ರಿಸ್ತನು ತನಗಿಂತ ಭಿನ್ನವಾಗಿದ್ದವನೊಂದಿಗೆ ಹೇಗೆ ಮಾತುಕತೆ ನಡೆಸಿದನು ಎಂಬದನ್ನು ತಿಳಿಯಲು ಅವರು ಹಿಂದಿನ ಕಾಲಕ್ಕೆ ಹೊರಟರು.

ಪಾಠ

ಯೆಹೂದ್ಯರು ಮತ್ತು ಸಮಾರ್ಯದವರು ವೈರಿಗಳಾಗಿದ್ದು ಅವರಿಗೆ ಒಪ್ಪಿಕೊಳ್ಳಲು ಇಷ್ಟವಿಲ್ಲದಿದ್ದರೂ ಅವರಲ್ಲಿ ಹೆಚ್ಚು ವಿಷಯಗಳು ಸಮಾನವಾಗಿದ್ದವು. ಅವರ ಮೂಲಪಿತೃಗಳ ನಿಮಿತ್ತ ಅವರು ಸಂಬಂಧಿಕರಾಗಿದ್ದರು ಮತ್ತು ಅವರೆಲ್ಲರೂ ಸತ್ಯವೇದದ ಮೊದಲ ಐದು ಪುಸ್ತಕಗಳಲ್ಲಿ ಭರವಸೆಯುಳ್ಳವರಾಗಿದ್ದರು! ಇದಲ್ಲದೆ, ಅವರೆಲ್ಲರೂ ದೇವರ ಸೃಷ್ಟಿಯಾಗಿದ್ದರು. ಆದರೆ ಅವರ ನಡುವೆ ಉತ್ತಮ ಬಾಂಧವ್ಯ ಇರಲಿಲ್ಲ, ಯಾಕಂದರೆ ಜನರು ಅವರಿಗೆ ಹಾಗೆ ಹೇಳಿದ್ದರು. ಯಾಕೆ ಎಂಬದು ನಮಗೆ ನಿಜವಾಗಿಯೂ ಗೊತ್ತಿಲ್ಲ. ಪೂರ್ವಾಪರವು ಈ ರೀತಿಯಾಗಿ ಕಾರ್ಯ ಮಾಡುತ್ತದೆ.

ಆದರೆ ಯೇಸು ಕ್ರಿಸ್ತನು ಎಲ್ಲರನ್ನು ಪ್ರೀತಿಸುತ್ತಾನೆ ಮತ್ತು ಸಮಾರ್ಯದ ಸ್ತ್ರೀಯೊಂದಿಗೆ ಮಾತನಾಡಲು ಹೆದರಿಕೊಳ್ಳಲಿಲ್ಲ. ಇತರರು ಆತನ ಬಗ್ಗೆ ಏನು ಯೋಚಿಸುತ್ತಾರೆ ಎಂಬದರ ಬಗ್ಗೆಯೂ ಆತನು ಹೆದರಿಕೊಳ್ಳಲಿಲ್ಲ.

ಯೋಹಾನ 4:4-15 ಓದಿರಿ

ಈ ಕಥೆ ನಾವು ಕುಡಿಯುವ ನೀರಿನ ಕುರಿತಾದದ್ದಲ್ಲ. ಈ ಕಥೆಯಲ್ಲಿ ಯೇಸು ಕ್ರಿಸ್ತನು ಕೇಳಿದ ನೀರನ್ನು ತೆಗೆದುಕೊಳ್ಳಲೇ ಇಲ್ಲ. ಆತನು ತೆಗೆದುಕೊಂಡಿರಬಹುದು, ಆದರೆ ಅದು ಕಥೆಗೆ ಪ್ರಾಮುಖ್ಯವಲ್ಲ. ಯೇಸು ಕ್ರಿಸ್ತನು ಆ ಸ್ತ್ರೀಗೆ "ಜೀವಜಲವನ್ನು" ಒದಗಿಸಿದ್ದು ಪ್ರಾಮುಖ್ಯವಾದ ಸಂಗತಿಯಾಗಿದೆ. ಯೇಸು ಕ್ರಿಸ್ತನಲ್ಲಿ ದೊರೆಯುವ ರಕ್ಷಣೆ ಮತ್ತು ತೃಪ್ತಿಕರವಾದ ಜೀವಿತದ ಬಗ್ಗೆ ಆತನು ಮಾತನಾಡುತ್ತಾ ಇದ್ದಾನೆ, ಇವುಗಳನ್ನು ಆತನು ಎಲ್ಲರಿಗೂ ಕೊಡುತ್ತಾನೆ.

ನಿಮಗೆ ಆ ರೀತಿಯ ಜೀವನವು ಬೇಕೇ? ಎಂದಿಗೂ ಬಾಯಾರಿಕೆ ಆಗುವದೇ ಇಲ್ಲ ಮತ್ತು ಸತತವಾಗಿ ಬಯಸುವದರಿಂದ ಸ್ವತಂತ್ರರಾಗಿರುವದು? ನೀವು ಯಾರೇ ಆದರೂ, ಯೇಸು ಕ್ರಿಸ್ತನು ಇದನ್ನು ನಿಮಗೆ ಕೊಡುತ್ತಾನೆ!!!

## ಕಂಠಪಾಠ ವಚನ

ರೋಮನರಿಗೆ 12:16 ನಿಮ್ಮನಿಮ್ಮಲ್ಲಿ ಸಾಮರಸ್ಯವಿರಲಿ. ದೊಡ್ಡಸ್ತಿಕೆಯಿಂದ ವರ್ತಿಸಬೇಡಿ. ದೀನದಲಿತರೊಡನೆ ಗೆಳೆತನ ಬೆಳೆಸಿರಿ. ನೀವೇ ಜಾಣರೆಂದು ಭಾವಿಸದಿರಿ.

## ನಾಟಕ (ಭಾಗ 2)

ಅವರು ಹಿಂದಿರುಗಿ ಬಂದ ನಂತರ, ತಾವು ನೋಡಿದ ವಿಷಯ, ಯೇಸು ಕ್ರಿಸ್ತನ ಆ ಸ್ತ್ರೀಯ ಸಂಗಡ ಹೇಗೆ ಮಾತನಾಡಿದನು, ನಂತರ ಆಕೆ ಹೋಗಿ ಪಟ್ಟಣದ ಜನರೆಲ್ಲರನ್ನು ಆತನನ್ನು ನೋಡಲು ಕರೆದುಕೊಂಡು ಬಂದದ್ದರ ಬಗ್ಗೆ ಆಸಕ್ತಿಯಿಂದ ಮಾತನಾಡಿದರು. ಆಗ ಅವರೆಲ್ಲರಿಗೆ ಯೇಸು ಕ್ರಿಸ್ತನು ಕೊಡುವ ಜೀವಜಲದ ವರ ಎಲ್ಲರಿಗೂ ಅನ್ವಯಿಸುತ್ತದೆ, ಅವರು ಯಾರು ಅಥವಾ ಎಲ್ಲಿಂದ ಬಂದವರು ಎಂಬದು ಪ್ರಾಮುಖ್ಯವಲ್ಲ. ತನ್ನ ಹೊಸ ಸ್ನೇಹಿತನೊಂದಿಗೆ ಯೇಸು ಕ್ರಿಸ್ತನ ಬಗ್ಗೆ ಮಾತನಾಡಬಹುದು ಎಂಬ ಪ್ರೋತ್ಸಾಹ ತನಿಖಾಧಿಕಾರಿಗೆ ದೊರೆಯಿತು ಮತ್ತು ಮುಂದಿನ ಸಲ ಆ ಕಾರ್ಯವನ್ನು ಮಾಡುವ ಬಗ್ಗೆ ಆಕೆ ಯೋಚನೆ ಮಾಡಿದಳು.

## ನ್ಯಾಯ


ಲೋಕವು ತಿರಸ್ಕರಿಸಿದ ಜನರೊಂದಿಗೆ ಮಾತನಾಡಲು ಯೇಸು ಕ್ರಿಸ್ತನು ಹೆದರಲಿಲ್ಲ. ಯೇಸು ಕ್ರಿಸ್ತನ ಹಾಗೆ ಇರಿ ಮತ್ತು ಜನರ ಸಾಮಾಜಿಕ ಸ್ಥಿತಿಗತಿಯ ನಿಮಿತ್ತ ಅವರೊಂದಿಗೆ ಮಾತನಾಡಲು ನಿಮಗೆ ಸಹಜವಾಗಿ ಇಷ್ಟವಿಲ್ಲದೆ ಹೋದರೆ ಅವರ ಸಂಗಡ ಮಾತುಕತೆ ನಡೆಸಿರಿ.

## ಜೀವನ ಚರಿತ್ರೆ (ಹೆಂಡತಿ)

ಮನೆಯ ಎಲ್ಲಾ ಕೆಲಸಗಳನ್ನು ಮಾಡುವ ಸ್ತ್ರೀಯನ್ನು ಗೃಹಿಣಿ ಎಂದು ಕರೆಯುತ್ತಾರೆ. ಅನುದಿನ ಮನೆಯಲ್ಲಿ ಮಾಡಬೇಕಾದ ಅವಶ್ಯವಾದ ಕಾರ್ಯಗಳ ಅಭಿವೃದ್ಧಿಯನ್ನು ಮೇಲ್ವಿಚಾರ ನಡೆಸುವ ವ್ಯಕ್ತಿಯ ಬಗ್ಗೆ ಈ ಸಂಗತಿಯಾಗಿದೆ.

ಜವಾಬ್ದಾರಿಕೆಗಳು: ಮನೆಯನ್ನು ಶುಚಿಯಾಗಿ ಇಟ್ಟುಕೊಳ್ಳುವ, ಬಟ್ಟೆಗಳನ್ನು ಒಗೆಯುವ, ಅಡುಗೆ ಮಾಡುವ, ಖರೀದಿ ಮಾಡುವ ಮತ್ತು ಒಂದುವೇಳೆ ಆಕೆಗೆ ಮಕ್ಕಳಿರುವದಾದರೆ, ಅವರನ್ನು ನೋಡಿಕೊಳ್ಳುವ ಮತ್ತು ಓದುವ ವಿಷಯಗಳಲ್ಲಿ ಸಹಾಯ ಮಾಡುವ ಹಾಗೂ ಇನ್ನಿತರ ಕಾರ್ಯಗಳ ಜವಾಬ್ದಾರಿಕೆ ಆಕೆಗಿರುತ್ತದೆ. ಈ ಜವಾಬ್ದಾರಿಕೆಗಳ ಹೊರತಾಗಿಯೂ, ಆಕೆಗೆ ಕೆಲಸಗಳಿಗೆ ಯಾವುದೇ ಸಂಬಳ ಇಲ್ಲ ಆದರೆ ಕೆಲಸ ಮಾಡುವವರಿಗೆ ಅಥವಾ ಮನೆಯ ಹೊರಗೆ ಕೆಲಸ ಮಾಡುವವರಿಗೆ ಸಂಬಳ ಸಿಗುತ್ತದೆ.

ಅವಕಾಶಗಳು: ಮಕ್ಕಳೊಂದಿಗೆ ಮನೆಯಲ್ಲಿಯೇ ಇರುವ ಸ್ತ್ರೀ ತನ್ನ ಚಿಕ್ಕ ಮಕ್ಕಳ ಸಾಮರ್ಥ್ಯಗಳನ್ನು ಮತ್ತು ತಲಾಂತುಗಳನ್ನು ಬಹಳವಾಗಿ ಉಪಯೋಗಿಸಿಕೊಳ್ಳುವಳು; ಅವರಿಗೆ ಮೌಲ್ಯಗಳನ್ನು, ತತ್ವಗಳನ್ನು ಮತ್ತು ದೇವರ ವಾಕ್ಯಗಳನ್ನು ಅರ್ಥಮಾಡಿಸುವಳು ಮತ್ತು ಕಲಿಸುವಳು. ರೂಪುಗೊಳ್ಳುತ್ತಿರುವ ಜೀವಿತಗಳ ಮೇಲೆ ಪ್ರಭಾವ ಬೀರುವ ಈ ಅವಕಾಶ ಬಹಳ ಪ್ರಾಮುಖ್ಯವಾಗಿರುತ್ತದೆ.



ಸ್ತ್ರೀ ಅಥವಾ ಪುರುಷ ಎಂದು ಯೋಚಿಸುವ ಮೊದಲು ನಾವೆಲ್ಲರೂ ಜನರು, ದೇವರು ನಮಗೆ ಕೊಟ್ಟಿರುವ ಸಾಮರ್ಥ್ಯಗಳ ಪ್ರಕಾರ ಮನೆಯ ವಿವಿಧ ಜವಾಬ್ದಾರಿಕೆಗಳನ್ನು ನೆರವೇರಿಸುತ್ತೇವೆ ಎಂಬದನ್ನು ಅರ್ಥಮಾಡಿಕೊಳ್ಳ ಬೇಕು. ನಾವು ನಮ್ಮನ್ನು ನಂಬಬೇಕು ಮತ್ತು ನಮ್ಮ ಜೀವಿತದಲ್ಲಿ ದೇವರ ಉದ್ದೇಶವನ್ನು ನೆರವೇರಿಸಬೇಕು.

## ಪ್ರಶ್ನೆಗಳು ಮತ್ತು ಉತ್ತರಗಳು

**1. ನನಗೆ ಇಷ್ಟವಿಲ್ಲದೆ ಇರುವ ಜನರೊಂದಿಗೆ ನಾನು ಉತ್ತಮವಾದ ಸಂಬಂಧವನ್ನು ಇಟ್ಟುಕೊಳ್ಳುವದು ಹೇಗೆ?**

ಇದು ಕಷ್ಟ ಎಂದು ನಾವು ಯೋಚಿಸಿದರೂ, ನಮಗೆ ಇಷ್ಟವಿಲ್ಲದೆ ಇರುವ ಜನರೊಂದಿಗೆ ಬೆರೆಯುವದು ನಾವಂದು ಕೊಳ್ಳುವಷ್ಟು ಕಷ್ಟವೇನೂ ಅಲ್ಲ. ನಮ್ಮ ಸ್ನೇಹಿತರಿಗೆ ಕೆಲವರು ಇಷ್ಟವಾಗದ ಕಾರಣ ನಮಗೂ ಅವರು ಇಷ್ಟವಾಗುವದಿಲ್ಲ, ಆದರೆ ನಾವು ಆ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡುವದಿಲ್ಲ. ಇದು ನಿಮಗೆ ವ್ಯತ್ಯಾಸವನ್ನು ಮಾಡಲು ದೊರೆಯುವ ಅವಕಾಶವಾಗಿದೆ.

**2. ನಿರ್ದಿಷ್ಟವಾಗಿ ಖ್ಯಾತಿ ಇಲ್ಲದೆ ಇರುವ ವ್ಯಕ್ತಿಯೊಂದಿಗೆ ಬೆರೆಯುವ ಪರಿಸ್ಥಿತಿ ಎದುರಾದರೆ ಏನು ಮಾಡುವದು?**

ಚರಿತ್ರೆಯಲ್ಲಿ ಅವರು ನಮಗೆ ಸಮಾರ್ಯದ ಸ್ತ್ರೀಯ ಬಗ್ಗೆ ಹೇಳುತ್ತಾರೆ, ಆಕೆಯ ಹೆಸರು ಏನು ಎಂದು ಗೊತ್ತಿಲ್ಲ, ಆದರೆ ಆಕೆಯ ಖ್ಯಾತಿ ಮಾತ್ರ ಗೊತ್ತಿದೆ. ಆದರೂ, ಆಕೆಯೊಂದಿಗೆ ರಕ್ಷಣೆಯ ಯೋಜನೆಯನ್ನು ಹಂಚಿಕೊಳ್ಳದೆ ಇರುವದಕ್ಕೆ ಇದು ಯೇಸು ಕ್ರಿಸ್ತನಿಗೆ ನೆಪವಲ್ಲ. ಇತರರು ಏನು ಹೇಳುವರು ಎಂಬ ಕಾರಣಕ್ಕೆ ಯಾರ ಬಳಿಯಾದರೂ ಹೋಗಲು ಇಷ್ಟವಿಲ್ಲದ ಪರಿಸ್ಥಿತಿ ನಮಗೂ ಎದುರಾಗುವ ಹಾಗೆ ಒಬ್ಬನು ಮೊದಲನೆಯ ಹೆಜ್ಜೆಯನ್ನು ಇಡಬಹುದು ಮತ್ತು ಉಳಿದವರಿಗೆ ಭೇಟಿ ಮಾಡಲು ಇಷ್ಟವಿಲ್ಲದೆ ಇರುವ ಜನರನ್ನು ಭೇಟಿ ಮಾಡಬಹುದು; ಆಗ ನಮಗೆ ದೊಡ್ಡ ಆಶ್ಚರ್ಯ ಎದುರಾಗುತ್ತದೆ.

**3. ಯೇಸು ಕ್ರಿಸ್ತನು ಮಾಡಿದ ಪ್ರತಿಯೊಂದು ಕಾರ್ಯವನ್ನು ನಾನು ಅನುಸರಣೆ ಮಾಡಬೇಕೇ?**

ಸಹಜವಾಗಿ, ಆತನು ನಡೆಸಿದ ಕ್ರಿಯೆಗಳು ನಮ್ಮ ಕ್ರಿಯೆಗಳನ್ನು ಮುನ್ನಡೆಸಬೇಕು, ಇದರ ಅರ್ಥ ಆತನು ಮಾಡಿದ ಕಾರ್ಯಗಳನ್ನೇ ನಾವು ಮಾಡಬೇಕು ಎಂದಲ್ಲ, ಆದರೆ ನಮ್ಮ ಸ್ವಭಾವದಲ್ಲಿ ತೀರ್ಮಾನ ತೆಗೆದುಕೊಳ್ಳಲು ಶಕ್ತರಾಗುವ ಸೂಚನೆಯಾಗಿದೆ. ನಾನು ಕ್ರಿಸ್ತನನ್ನು ಅನುಸರಿಸುವಂತೆ ನೀವು ನನ್ನನ್ನು ಅನುಸರಿಸಿರಿ (1 ಕೊರಿಂಥ 11:1) ಎಂದು ಪೌಲನು ನಮ್ಮನ್ನು ಪ್ರೋತ್ಸಾಹಪಡಿಸಿದ್ದಾನೆ, ಇದರ ಬಗ್ಗೆ ಮಾತನಾಡುವ ಅನೇಕ ವಿಷಯಗಳಲ್ಲಿ ಇದೂ ಒಂದಾಗಿದೆ, ನನಗೆ ಫಿಲಿಪ್ಪಿ 2:3-8 ಇಷ್ಟ, ನಮಗೆ ಯಾವುದೇ ಲಾಭವನ್ನು ಬಯಸದೆ ಇತರರಿಗೆ ಒಳಿತನ್ನು ಮಾಡುವ ಮನೋಭಾವನೆ ನಮಗೆ ಇರಬೇಕು.

## ಒಗಟಿನ ಉತ್ತರಗಳು

### ಪದ ಹುಡುಕುವದು

| | | | | | | | | |
|---|---|---|---|---|---|---|---|---|
| ತ್ರೆ | ಬಾ | ಯಾ | ಬ | ಯ | ಕೆ | ರಿ | ನಾ | ಸ್ತ್ರೀ |
| ಚ | ಡಿ | ಕೆ | ವೈ | ರಿ | ಗ | ಳು | ವಾ಼ | ಸ್ಕಾ |
| ರಿ | ರ್ಯ | ಮಾ | ಯಾ | ಸಿ | ನು | ತಿ | ಲೋ | ತ |
| ತ್ರೆ | ಣೆ | ಬಾ | ತ | ವ | ದ | ರ | ಕ್ಷ | ಣೆ |
| ಯೇ | ಸು | ಲೋ | ದ | ನಾ | ಮೀ | ಸ್ಕಾ | ಮೀ | ನು |
| ಸ್ಕಾ | ಗ | ರ್ಯ | ಮೀ | ಸ್ವೈ | ಡಿ | ರ | ಯೇ | ಚ |
| ಬ | ಮಾ | ರ | ಕ್ | ಣೆ | ವ | ಸ | ತ್ರೆ | ಸು |
| ಸ | ಭ | ಸೂ | ಗ್ಗಿ | ವಾ಼ | ಕೆ | ರು | ಲು | ಯಾ |
| ರಿ | ದ | ಯ | ಪೂ | ಸಿ | ನ | ನಾ | ಡಿ | ಕೆ |
| ಲೋ | ಕ | ಗ | ರಿ | ಜ | ಬ | ತ | ವಾ಼ | ರ್ಯ |



**ಸತ್ಯವೇದದ ಕಥೆಗನುಸಾರ ಪ್ರಶ್ನೆಗಳಿಗೆ ಉತ್ತರಿಸಿರಿ.**

**ಎಲ್ಲರಿಗೂ ರಕ್ಷಣೆ ಮತ್ತು ನಿತ್ಯಜೀವ**

ಯೇಸು ಕ್ರಿಸ್ತನಿಗೆ ಬಾವಿಯ ಬಳಿಯಲ್ಲಿ ಯಾರು ಸಿಕ್ಕಿದರು?

**ಸಮಾರ್ಯದ ಸ್ತ್ರೀಗೆ**

ನಾವು ಯಾರ ವಿಷಯದಲ್ಲಿಯೂ ಯಾಕೆ ತೀರ್ಪು ಮಾಡಬಾರದು?

**ಯಾಕಂದರೆ ಯೇಸು ಕ್ರಿಸ್ತನು ಮಾತ್ರವೇ ನಮ್ಮನ್ನು ಎಲ್ಲಾ ಪಾಪಗಳಿಂದ ಶುದ್ಧಿಮಾಡುವವನಾಗಿದ್ದಾನೆ**

ಯೇಸು ಕ್ರಿಸ್ತನನ್ನು ವೈಯಕ್ತಿಕವಾಗಿ ನೀವು ಎಲ್ಲಿ ತಿಳಿದುಕೊಂಡಿರಿ ಮತ್ತು ಆ ಕ್ಷಣದ ಕುರಿತು ಕ್ಲುಪ್ತವಾದ ಟಿಪ್ಪಣಿ ಬರೆಯಿರಿ.

______________________________
______________________________
______________________________
______________________________

ಯೋಹಾನ 4:14-15 ರ ಪ್ರಕಾರ ಯೇಸು ಕ್ರಿಸ್ತನು ನಮಗೆ ಕೊಡುವ ವರ ಯಾವುದು?


**"ಜೀವಜಲವೇ", ರಕ್ಷಣೆ ಮತ್ತು ನಿತ್ಯಜೀವವಾಗಿದೆ**

ಯೇಸು ಕ್ರಿಸ್ತನು ಆಕೆಗೆ ಜೀವಜಲವನ್ನು ಕೊಡುತ್ತಿದ್ದಾಗ, ಶಿಷ್ಯರು ಎಲ್ಲಿಗೆ ಹೋಗಿದ್ದರು?


**ಅವರು ಆಹಾರ ತರಲು ಪಟ್ಟಣದೊಳಗೆ ಹೋಗಿದ್ದರು**

🌍 **ಆಟ**

**ಸನ್ನೆಗಳು ಮತ್ತು ಶುಭಾಷಯಗಳು**



ಗುಂಪಿನವರನ್ನೆಲ್ಲಾ ವೃತ್ತಾಕಾರದಲ್ಲಿ ನಿಲ್ಲುವಂತೆ ಹೇಳಿರಿ. ಒಬ್ಬನು ತನ್ನ ಹೆಸರನ್ನು ಹೇಳಲು ಪ್ರಾರಂಭಿಸಿ ಅದರೊಂದಿಗೆ ಸನ್ನೆ ಮಾಡಬೇಕು, ಜಿಗಿಯಬೇಕು, ಶುಭಾಷಯ ತಿಳಿಸಬೇಕು, ನಾಟ್ಯ ಮಾಡಬೇಕು, ಇತ್ಯಾದಿ ಮತ್ತು ಎಲ್ಲರೂ ಅದರಂತೆಯೇ ಮಾಡಬೇಕು. ಪ್ರತಿಯೊಬ್ಬರು ಸನ್ನೆಯೊಂದಿಗೆ ತಮ್ಮ ಹೆಸರು ಹೇಳುವ ತನಕ ಮುಂದುವರೆಸಬೇಕು ಮತ್ತು ಗುಂಪಿನವರೆಲ್ಲರೂ ಹೇಳಬೇಕು.




🌍 **ಹೋಮ್‌ವರ್ಕ್**

ನಿಮ್ಮ ಶಾಲೆಯ ಕೋಣೆಯೊಳಗಿರುವ ತೊಂದರೆಯಲ್ಲಿರುವ ಅಥವಾ ಬೇರೆ ಊರಿನಿಂದ ಬಂದಿರುವ ಅಥವಾ ಬೇರೆ ಧರ್ಮದ ಹುಡುಗ ಅಥವಾ ಹುಡುಗಿಯೊಂದಿಗೆ ಮಾತನಾಡಿರಿ. ಪೂರ್ವಾಪರವು ನಿಮ್ಮನ್ನು ದೂರ ಇಡುವಂತೆ ಅನುಮತಿಸಬೇಡಿರಿ. ಮುಂಜಾನೆಯಲ್ಲಿ ಆತನಿಗೆ ಶುಭಾಷಯವನ್ನು ತಿಳಿಸಿರಿ ಅಥವಾ ಆತನ ದಿನ ಹೇಗಿತ್ತು ಎಂದು ತಿಳಿಸಿರಿ. ಒಂದುವೇಳೆ ನಿಮಗೆ ಅನ್ನಿಸಿದರೆ, ನಿಮ್ಮ ಊಟವನ್ನು ಹಂಚಿಕೊಳ್ಳಿರಿ ಮತ್ತು ಅವರ ಪ್ರತಿಕ್ರಿಯೆ ನಕಾರಾತ್ಮಕವಾಗಿದ್ದರೆ ಆಶ್ಚರ್ಯಪಡಬೇಡಿರಿ. ವಾರದ ದಿನಗಳಲ್ಲಿ ಇದನ್ನು ಪ್ರಯತ್ನಿಸಿರಿ ನಂತರ ಸಂಡೆ ಸ್ಕೂಲ್ ಟೀಚರ್ ಬಳಿ ನಡೆದ ಸಂಗತಿಗಳನ್ನು ತಿಳಿಸಿರಿ.

# ಎಲ್ಲದಕ್ಕಿಂತಲೂ ಉತ್ತಮವಾದದ್ದು 03

## ಐಶ್ವರ್ಯವಂತನಾದ ಯೌವನಸ್ಥ ಅಧಿಕಾರಿ: ಮಾರ್ಕ 10:17-27



### ನಾಟಕ (ಭಾಗ 1)

ಕೆಲವು ದಿನಗಳಿಂದ ತನಗೆ ತೊಂದರೆ ಕೊಡುತ್ತಿರುವ ವಿಷಯವನ್ನು ಏಜೆಂಟ್ ಹಂಚಿಕೊಳ್ಳುತ್ತಾನೆ. ತನಗೆ ಅವಕಾಶ ಸಿಗುವಾಗಲೆಲ್ಲಾ ತನ್ನ ಮೆಚ್ಚಿನ ವೀಡಿಯೋ ಗೇಮ್ ಆಡುತ್ತಾನೆ. ಗಂಟೆಗಟ್ಟಲೆ ಆಡುತ್ತಾ ಅವನು ಬಹಳ ಸಂತೋಷ ಪಡುತ್ತಿದ್ದನು, ಅದನ್ನು ಬಹಳ ಚೆನ್ನಾಗಿ ಕಲಿತುಕೊಳ್ಳುತ್ತಿದ್ದನು ಮತ್ತು ದೊಡ್ಡ ದೊಡ್ಡ ಯುದ್ಧಗಳನ್ನು ಜಯಿಸುತ್ತಿದ್ದನು ಹಾಗೂ ಟ್ರೋಫಿಗಳನ್ನು ಮತ್ತು ವಿಶೇಷವಾದ ವಸ್ತುಗಳನ್ನು ಬಹುಮಾನವಾಗಿ ಪಡೆದಿದ್ದನು, ಅವುಗಳಲ್ಲಿ ಕೆಲವು ಬಹಳ ಅಪರೂಪವಾಗಿದ್ದವು. ಆದರೆ ಕೆಲವು ದಿನಗಳಿಂದ ಆ ಆಟದ ನಿಮಿತ್ತ ಅವನಿಗೆ ಬಹಳ ತೊಂದರೆಯಾಗುತ್ತಾ ಇದೆ ಯಾಕಂದರೆ ಆಟದಲ್ಲಿ ಕೆಲವು ಮನೋಭಾವನೆಗಳು ಮತ್ತು ದುಷ್ಟತನಗಳು ಕೆಟ್ಟವುಗಳೆಂದು ಅವನಿಗೆ ಮನಃಪೂರ್ವಕವಾಗಿ ಗೊತ್ತಿತ್ತು. ಆದರೆ ಅದರಲ್ಲಿ ಯಾವುದೇ ತೊಂದರೆಯಿಲ್ಲದ ಸಂತೋಷವಿರುವಂತೆ ಅನ್ನಿಸುತ್ತದೆ. ಆದರೂ ಅವನು ತನ್ನ ಶಾಲೆಯ ಕೆಲಸ ಮತ್ತು ಮನೆಯ ಕೆಲಸಗಳನ್ನು ಪೂರ್ತಿಗೊಳಿಸುತ್ತಿದ್ದನು. ಅವನು ತನ್ನ ಬಿಡುವಿನ ಸಮಯದಲ್ಲಿ ಮಾತ್ರವೇ ಆಟ ಆಡುತ್ತಿದ್ದಾನೆ. ಅವನು ಏನು ಮಾಡಬೇಕೆಂಬ ವಿಷಯದಲ್ಲಿ ತಂಡದವರೊಳಗೆ ಸ್ವಲ್ಪ ಗೊಂದಲವಿದೆ. ಹಿಂದಿನ ಕಾಲಕ್ಕೆ ಹೋಗಿ ಏನಾದರೂ ಕಲಿತುಕೊಳ್ಳಬಹುದೇನೋ ಎಂದು ಅವರು ತೀರ್ಮಾನಿಸುತ್ತಾರೆ.

### ಪಾಠ

ನಮ್ಮ ಮತ್ತು ಆತನ ನಡುವೆ ಏನೂ ಬರಬಾರದೆಂಬದು ದೇವರ ಬಯಕೆಯಾಗಿದೆ. ಆತನು ನಮ್ಮನ್ನು ಬಹಳವಾಗಿ ಪ್ರೀತಿಸುವದರಿಂದ ನಮ್ಮ ಲೋಕವನ್ನು ಅನುಭವಿಸಲು ಮತ್ತು ನಾವು ಜೀವಿಸುವ ಸ್ಥಳದಲ್ಲಿ ನಮ್ಮನ್ನು ಭೇಟಿ ಮಾಡಲು ಮಗುವಾಗಿ ಜನಿಸಿ ಬಂದನು! ಈ ಕಥೆಯನ್ನು ನೋಡೋಣ ಬನ್ನಿರಿ.

**ಮಾರ್ಕ 10:17-27 ಓದಿರಿ**

ಐಶ್ವರ್ಯವಂತನು ಯೇಸು ಕ್ರಿಸ್ತನ ಬಳಿಗೆ ಬಂದು ನಾನು ರಕ್ಷಣೆ ಹೊಂದಲು ಏನು ಮಾಡಬೇಕೆಂದು ಕೇಳಿದಾಗ, ಅವನು ದೇವರೊಂದಿಗೆ ತನ್ನ ಸಂಬಂಧಕ್ಕಿಂತಲೂ ಐಶ್ವರ್ಯಕ್ಕೆ ಹೆಚ್ಚು ಬೆಲೆ ಕೊಡುತ್ತಾನೆ ಎಂಬದನ್ನು ಯೇಸು ಕ್ರಿಸ್ತನು ತಿಳಿದುಕೊಂಡನು, ಯೇಸು ಕ್ರಿಸ್ತನು ಇದೊಂದು ಕಾರ್ಯಕ್ಕೆ ಬೆಲೆ ಕೊಡುವವನಾಗಿದ್ದನು. ಯೇಸು ಕ್ರಿಸ್ತನು ಅವನಿಗೆ ನಿನ್ನ ಆಸ್ತಿಯನ್ನೆಲ್ಲಾ ಮಾರಿ ಬಡವರಿಗೆ ಹಂಚು ಎಂದು ಹೇಳಿದನು. ಯೇಸು ಕ್ರಿಸ್ತನ ಆಲೋಚನೆ ಸರಿಯಾಗಿತ್ತು, ಯಾಕಂದರೆ ಆತನು ಹೇಳಿದ ಹಾಗೆ ಅವನು ಮಾಡಲಿಲ್ಲ. ದೇವರೊಂದಿಗೆ ವೈಯಕ್ತಿಕವಾದ ಸಂಬಂಧಕ್ಕಿಂತಲೂ ಅವನಿಗೆ ತನ್ನ ಐಶ್ವರ್ಯ ಬಹಳ ಪ್ರಾಮುಖ್ಯವಾಗಿತ್ತು. ನಿಮಗೆ ಬಹಳ ಪ್ರಾಮುಖ್ಯವಾದದ್ದು ಏನು? ದೇವರನ್ನು ಬಿಟ್ಟರೆ ನಿಮಗೆ ಅತ್ಯಂತ

ಪ್ರಾಮುಖ್ಯವಾದದ್ದು ಏನು ಎಂದು ಆಲೋಚಿಸಿರಿ. ನಿಮಗೆ ಪ್ರಿಯವಾದ ಗೊಂಬೆಯನ್ನು ಕೊಡಲು ನೀವು ಇಷ್ಟಪಡುತ್ತೀರೋ? ಅಥವಾ ದೇವರನ್ನು ಹಿಂಬಾಲಿಸಲು ಒಂದುದಿನ ನಿಮ್ಮ

ಕುಟುಂಬವನ್ನು ತೊರೆಯಲು ಮತ್ತು ಆತನು ನಿಮಗಾಗಿ ಇಟ್ಟಿರುವ ಕಾರ್ಯಗಳನ್ನು ಮಾಡಲು ಬಯಸುತ್ತೀರೋ?
ದೇವರು ನಮ್ಮೆಲ್ಲರೊಂದಿಗೆ ವೈಯಕ್ತಿಕವಾದ ಸಂಬಂಧವನ್ನು ಬಯಸುವದರಿಂದ ನಮ್ಮ ಮತ್ತು ಆತನ ನಡುವೆ ಏನಾದರೂ ಬಂದರೆ ಆತನು ಅದನ್ನು ಸಹಿಸುವದಿಲ್ಲ. ಹಣ, ಪ್ರಖ್ಯಾತಿ, ಸ್ನೇಹಿತರು ಮತ್ತು ಸಾಮಾಜಿಕ ಸ್ಥಿತಿಗತಿಗಳೆಲ್ಲವೂ ನಮ್ಮ ಮತ್ತು ದೇವರ ನಡುವೆ ತಡೆಗಳಾಗಿ ಕಾಣಿಸಿಕೊಳ್ಳುತ್ತವೆ. ನಮ್ಮನ್ನು ಒಳ್ಳೆಯ ಕಾರ್ಯಗಳಿಂದ ಬೇರ್ಪಡಿಸುವದು ದೇವರ ಗುರಿಯಲ್ಲ, ಬದಲಾಗಿ ಆತನೊಂದಿಗೆ ನಮಗೆ ಸಮೃದ್ಧವಾದ ಜೀವನವನ್ನು ಕೊಡುವದಾಗಿದೆ. ಮತ್ತು ಇವುಗಳೆಲ್ಲವೂ ಅವುಗಳೊಂದಿಗೆ ಬರುವವು.

### ಕಂಠಪಾಠ ವಚನ

ಮಾರ್ಕ 8:35 "ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಹಾತೊರೆಯುವವನು ಅದನ್ನು ಕಳೆದುಕೊಳ್ಳುವನು. ಆದರೆ ನನ್ನ ನಿಮಿತ್ತ ಹಾಗೂ ಶುಭಸಂದೇಶದ ನಿಮಿತ್ತ ತನ್ನ ಪ್ರಾಣವನ್ನು ಕಳೆದುಕೊಳ್ಳುವವನು ಅದನ್ನು ನಿತ್ಯಕ್ಕೂ ಉಳಿಸಿಕೊಳ್ಳುವನು."

### ನಾಟಕ (ಭಾಗ 2)

ಅವರು ಹಿಂದಿರುಗಿ ಬಂದ ನಂತರ, ತಾನೇನು ಮಾಡಬೇಕೆಂದು ತನಗೆ ಗೊತ್ತಾಯಿತೆಂದು ಏಜೆಂಟ್ ತಂಡದವರಿಗೆ ತಿಳಿಸಿದನು. ಆಟವು ಬಹಳ ಸಂತೋಷಕರವಾಗಿದ್ದರೂ ಮತ್ತು ಅದರಿಂದ ಬಹುಮಾನಗಳು ದೊರೆಯುತ್ತಾ ಇದ್ದರೂ, ಆತನು ಅನೇಕ ನಿಕ್ಷೇಪಗಳನ್ನು ಕೂಡಿಸಿಕೊಂಡಿದ್ದರು, ಯೇಸು ಕ್ರಿಸ್ತನನ್ನು ಹಿಂಬಾಲಿಸುವದಕ್ಕಿಂತ ಯಾವುವೂ ಆತನಿಗೆ ಉತ್ತಮವಾಗಿರಲಿಲ್ಲ. ದೇವರಿಗೆ ಹೆಚ್ಚು ಮಾನ ಸಲ್ಲಿಸುವ ಬೇರೊಂದು ವೀಡಿಯೋ ಗೇಮ್ ಆಡಬಹುದಾಗಿತ್ತು, ಆದರೆ ತನ್ನ ನೆಚ್ಚಿನ ಆಟ ಆಡುವದನ್ನು ನಿಲ್ಲಿಸಬೇಕೆಂದು ಅವನು ಬಲ್ಲವನಾಗಿದ್ದನು. ಚಟವಾಗುವ ಆಟ ಆಡುವದನ್ನು ನಿಲ್ಲಿಸಬೇಕೆಂದು ಅವನು ಬಯಸುವದಾದರೆ, ಶೋಧನೆಯನ್ನು ತಡೆಯುವ ಸಲುವಾಗಿ ಅವನು ಅದನ್ನು ತನ್ನ ಮೊಬೈಲ್‌ನಿಂದ ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ನಾಯಕನು ಸೂಚಿಸಿದನು. ಏಜೆಂಟ್ ಮನೆಗೆ ಬಂದ ಕೂಡಲೇ ತನಗೆ ನಾಯಕ ಹೇಳಿದಂತೆಯೇ ಮಾಡಿದನು.

### ನ್ಯಾಯ

ನಿಮಗಿಂತ ಕಡಿಮೆ ವಸ್ತು ಮತ್ತು ಹಣ ಇರುವ ಜನರನ್ನು ನೋಡುವಾಗ, ಆ ವ್ಯಕ್ತಿ ಮತ್ತು ದೇವರ ನಡುವೆ ಇರುವ ಕಾರ್ಯಗಳು ಬಹಳ ಕಡಿಮೆಯಾಗಿವೆ ಎಂಬದನ್ನು ಮರೆಯಬೇಡಿರಿ.

## ಜೀವನ ಚರಿತ್ರೆ (ವ್ಯಾಪಾರಿ)

ವ್ಯಾಪಾರಿಯು ಮಾರಾಟದ ಸಾಮಾನುಗಳನ್ನು ವಿಚಾರಿಸುವ, ಖರೀದಿ ಮಾಡುವ ಮತ್ತು ಮಾರಾಟ ಮಾಡುವ ವ್ಯಕ್ತಿಯಾಗಿರುತ್ತಾನೆ. ವ್ಯಾಪಾರ ಹೊಂದಿರುವವನು ಅಥವಾ ವ್ಯಾಪಾರದಲ್ಲಿ ಕಾರ್ಯ ಮಾಡುವ ವ್ಯಕ್ತಿಗೆ ಈ ಪದವನ್ನು ಉಪಯೋಗಿಸಲಾಗುತ್ತದೆ.

ಜವಾಬ್ದಾರಿಕೆಗಳು: ಅವರು ಅವಶ್ಯವಾಗಿರುವ ಮೂಲಭೂತ ಉತ್ಪನ್ನಗಳು, ಅವಶ್ಯವಾಗಿರುವ ಔಷಧಿಗಳು, ಅದರೊಂದಿಗೆ ಇತರೆ ಕಾರ್ಯಗಳನ್ನು ಸಮುದಾಯಗಳಿಗೆ ಒದಗಿಸುವರು. ವ್ಯಾಪಾರಿಗಳು ಲೋಕದಲ್ಲಿ ಬಹಳ ಹಳೆಯದಾದ ಚಟುವಟಿಕೆಗಳನ್ನು ನಡೆಸುತ್ತಾ ಇದ್ದಾರೆ ಎಂಬದು ಆಸಕ್ತಿಕರ ವಿಷಯವಾಗಿದೆ.


ಅವಕಾಶಗಳು: ವ್ಯಾಪಾರಿಗಳು ಉತ್ಪನ್ನಗಳನ್ನು ಕೊಳ್ಳುವ ಅಥವಾ ಮಾರುವ ವ್ಯಕ್ತಿಗಳಾಗಿದ್ದಾರೆ. ಈ ಕಾರಣದಿಂದ

ಅವರು ಪಟ್ಟಣದಲ್ಲಿರುವ ಅನೇಕರನ್ನು ಭೇಟಿ ಮಾಡುತ್ತಾರೆ. ಪ್ರಾಮಾಣಿಕ ವ್ಯಕ್ತಿಯಾಗಿರುವದು ಮತ್ತು ನೀವು ಭೇಟಿಯಾಗಿ ಮಾತನಾಡುವ ಪ್ರತಿಯೊಬ್ಬ ಗ್ರಾಹಕನಿಗೆ ಪಾಠವನ್ನು ತಿಳಿಸುವದು ಪ್ರಾಮುಖ್ಯವಾಗಿದೆ.

ನಿಮ್ಮ ಜೀವಿತವೇ ದೇವರ ಒಳ್ಳೇತನವನ್ನು ತಿಳಿಸುವ ಉತ್ತಮ ಮಾರ್ಗವಾಗಿದೆ, ಅದರ ಮೂಲಕ ದೇವರ ನಂಬಿಗಸ್ತಿಕೆಗೆ ಸಾಕ್ಷಿಯಾಗಿರುವವರನ್ನು ನೀವು ಭೇಟಿಯಾಗುವಾಗ ಇತರರ ನಂಬಿಕೆಯು ಬೆಳೆಯುತ್ತದೆ.

## ಪ್ರಶ್ನೆಗಳು ಮತ್ತು ಉತ್ತರಗಳು

1. ದೇವರ ಸೇವೆ ಮಾಡುವದಕ್ಕಿಂತಲೂ ನಿಮ್ಮ ಯೋಜನೆಗಳು ಪ್ರಾಮುಖ್ಯವಾಗಿವೆ ಎಂದು ಕಡೆಯದಾಗಿ ನಿಮಗೆ ಅನ್ನಿಸಿದ್ದು ಯಾವಾಗ?



ದೇವರು ನಮ್ಮ ಜೀವಿತಗಳಿಗಾಗಿ ಏನು ಸಿದ್ಧಮಾಡಿದ್ದಾನೆ ಎಂಬದನ್ನು ಅರ್ಥಮಾಡಿಕೊಳ್ಳುವದು ಕಷ್ಟದ ವಿಷಯವಾಗಿದೆ. ದೇವರ ಸೇವೆ ಮಾಡಲು ತೀರ್ಮಾನ ತೆಗೆದುಕೊಳ್ಳುವದು ಅಥವಾ ನಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವದು ಕಷ್ಟ ಎಂದು ನಾವು ಹೇಳಬಹುದು. ದೇವರು ನಮಗಾಗಿ ಇಟ್ಟಿರುವ ಕಾರ್ಯಗಳನ್ನು ಆತನು ನೋಡುವ ಹಾಗೆಯೇ ನೋಡಲು ಒಂದುವೇಳೆ ನಾವು ಪ್ರಯತ್ನಿಸಿದರೆ, ದೃಷ್ಟಿಕೋನವು ಬದಲಾಗುತ್ತದೆ. ಇದು ನಮ್ಮ ಕನಸುಗಳನ್ನು ತ್ಯಾಗ ಮಾಡುವ ವಿಷಯವಲ್ಲ; ದೇವರು ನಮ್ಮ ಜೀವಿತಕ್ಕಾಗಿ ಇಟ್ಟಿರುವ ಯೋಜನೆಗಳನ್ನು ಅಂಗೀಕರಿಸಿಕೊಳ್ಳುವದಾಗಿದೆ. ಅಬ್ರಹಾಮನು ತನಗೆ ಗೊತ್ತಿಲ್ಲದ ಸ್ಥಳಕ್ಕೆ ಹೋಗುವ ಸಲುವಾಗಿ ಎಲ್ಲವನ್ನು ತ್ಯಜಿಸುವ ಮೂಲಭೂತ ತೀರ್ಮಾನವನ್ನು ತನ್ನ ಜೀವಿತದಲ್ಲಿ ತೆಗೆದುಕೊಂಡನು. ದೇವರ ಯೋಜನೆಯು ಉತ್ತಮವಾಗಿದೆ ಮತ್ತು ತಂದೆಯಾದ ಚಿತ್ತದಂತೆ ನಡೆದುಕೊಳ್ಳುವಾಗ ತನ್ನ ಕನಸುಗಳೂ ನೆರವೇರುತ್ತವೆ ಎಂದು ಭರವಸೆಯಿಡುವ ನಂಬಿಕೆ ಆತನಿಗೆ ಇತ್ತು.

2. ಯಾವುದಾದರು ರೀತಿಯಲ್ಲಿ ದೇವರಿಗೆ ಪ್ರೀತಿ ತೋರಿಸಬೇಕೆಂಬ ಪ್ರೇರಣೆ ನಿಮಗೆ ಆಗಿದೆಯೇ?

ನಾವು ದೇವರ ಕಾರ್ಯಗಳಿಗೆ ಬೆಲೆ ಕೊಡುವಾಗ ಮತ್ತು ಪೂರ್ಣಹೃದಯದಿಂದ ಅವುಗಳನ್ನು ಮಾಡುವಾಗ, ಅದು ನಿಮ್ಮ ಕೃತಜ್ಞತೆಯನ್ನು ಮತ್ತು ಆತನ ಮೇಲೆ ನಿಮಗಿರುವ ಪ್ರೀತಿಯನ್ನು ತೋರಿಸುತ್ತದೆ. ನಾವು ನಮ್ಮ ಕ್ರಿಯೆಗಳ ಮೂಲಕ

ತಂದೆಯಾದ ದೇವರನ್ನು ಆತುಕೊಳ್ಳಲು ಬಯಸುತ್ತೇವೆ ಎಂಬದನ್ನು ತೋರಿಸುತ್ತಾ ಇದ್ದೇವೆ. ಉದಾಹರಣೆಗೆ, ಐಶ್ವರ್ಯವಂತನು ನಿಜವಾಗಿಯೂ ತನ್ನ ಆಸ್ತಿಯಿಂದ ಬೇರ್ಪಡಲು ಇಷ್ಟಪಡಲಿಲ್ಲ ಯಾಕಂದರೆ ಅದು ಅವನಿಗೆ ಬಹಳ ಪ್ರಾಮುಖ್ಯವಾಗಿತ್ತು.

**3. ದೇವರಿಗೆ ನನ್ನ ಜೀವಿತದಿಂದ ಏನು ಬೇಕು ಎಂದು ನಾನು ತಿಳಿದುಕೊಳ್ಳುವದು ಹೇಗೆ?**

ನಾವು ಪ್ರತಿದಿನ ದೇವರನ್ನು ದೃಷ್ಟಿಸುವಾಗ ನಾವೇನು ಮಾಡಬೇಕೆಂದು ಅಥವಾ ಹೇಗೆ ನಡೆದುಕೊಳ್ಳಬೇಕೆಂದು ಬಯಸುತ್ತಾನೆ ಎಂಬದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆತನು ನಿಮ್ಮೊಂದಿಗೆ ವೈಯಕ್ತಿಕ ಸಂಬಂಧ ಇಟ್ಟುಕೊಳ್ಳಲು ಮತ್ತು ನಿಮಗೂ ಹಾಗೂ ಆತನು ನಡುವೆ ನಿಮ್ಮ ಜೀವಿತದಲ್ಲಿ ಏನಾದರೂ ಅಡೆತಡೆ ಇದ್ದರೆ ಅದನ್ನು ತೆಗೆದುಹಾಕಲು ಬಯಸುತ್ತಾನೆ ಎಂಬದನ್ನು ಮರೆಯಬೇಡಿರಿ. ನಿಮ್ಮನ್ನು ಇತರರೊಂದಿಗೆ ಹೋಲಿಸಬೇಡಿರಿ; ದೇವರು ವ್ಯಕ್ತಿಗತವಾಗಿ ಕಾರ್ಯಮಾಡುತ್ತಾನೆ. ನಾವು ನಮ್ಮ ಜೀವನದ ಎಲ್ಲಾ ವಿಷಯಗಳಲ್ಲಿಯೂ ಪ್ರತಿದಿನ ಉತ್ತಮರಾಗಬೇಕು ಎಂಬದೇ ಆತನ ಉದ್ದೇಶವಾಗಿದೆ.

## ಒಗಟಿನ ಉತ್ತರಗಳು

### ಪದ ಹುಡುಕುವದು

| | | | | | | |
|---|---|---|---|---|---|---|
| ಗ | ಫ್ | ಛ | ಝ | ದೇ | ಹ | ಸಂ |
| ಮ | ಅ | ಲೋ | ಟುಂ | ವ | ಯ | ಬಂ |
| ಸಂ | ನು | ಡೆ | ತು | ರು | ಭ | ಧ |
| ಪ | ಭ | ಷ್ಯ | ತ | ರ | ಯ | ಜ್ಞಿ |
| ತ್ | ವ | ಹಿ | ಳ | ಡೆ | ಡಿ | ಲಿ |
| ಪ್ರ | ಸ್ನೇ | ಭ್ರ | ವಾರ್ | ರಿ | ಯ್ರ | ಣ |
| ಪ | ಖ್ಯಾ | ಮ | ಗು | ಸು | ರ | ಸ್ತೆ |
| ತ್ತು | ಕು | ತಿ | ಜೀ | ಕಾ | ಕ್ಷ | ಯೇ |
| ಣೆ | ಟುಂ | ಕ | ರು | ಣೆ | ಣೆ | ಸು |
| ವ | ಬ | ಲೋ | ಳಿ | ಸಂ | ಪ | ತ್ತು |
| ಕಾ | ರ | ಣ್ | ಕ | ಅ | ನು | ಬ |



**ಬಲಗಡೆಯಲ್ಲಿರುವ ಉತ್ತರಗಳ ಉಪಯೋಗದಿಂದ, ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಡಿರಿ.**

- ಪ್ರಖ್ಯಾತಿ ಮತ್ತು ಸಾಮಾಜಿಕ ಸ್ಥಿತಿಗತಿ — ಈಗ ನಮ್ಮ ಮತ್ತು ದೇವರ ನಡುವೆ ಎದುರಾಗುವ ಎರಡು ಅಡೆತಡೆಗಳನ್ನು ಬರೆಯಿರಿ.
- ದೇವರೊಂದಿಗೆ ನಮ್ಮ ಸಂಬಂಧ — ಆಸ್ತಿಗಿಂತ ಹೆಚ್ಚು ಪ್ರಾಮುಖ್ಯವಾದದ್ದು ಏನು?
- ನಮ್ಮ ಜೀವಿತವನ್ನು ಯೇಸು ಕ್ರಿಸ್ತನಿಗೆ ಕೊಡುವದು — ನಾವು ರಕ್ಷಣೆ ಹೊಂದುವದು ಹೇಗೆ?
- ನಿರಾಸೆಗೊಂಡನು ಮತ್ತು ದುಃಖದಿಂದ ಹೊರಟು ಹೋದನು — ಯೇಸು ಕ್ರಿಸ್ತನ ಉತ್ತರವನ್ನು ಕೇಳಿ ಯೌವನಸ್ಥನಾದ ಐಶ್ವರ್ಯವಂತನು ಏನು ಮಾಡಿದನು?
- ಯೇಸು ಕ್ರಿಸ್ತನು ಕೊಡುವ ಜೀವವನ್ನು ಕಳೆದುಕೊಳ್ಳುತ್ತೇವೆ — ನಮ್ಮ ಬಯಕೆಯ ಹಿಂದೆ ಹೋಗುವದರಿಂದ ಎದುರಾಗುವ ಅಪಾಯ ಏನು?
- ದೇವರಿಗಿಂತ ಹೆಚ್ಚಾಗಿ ಹಣವನ್ನು ಪ್ರೀತಿಸುವವರು — ದೇವರ ರಾಜ್ಯದೊಳಗೆ ಸೇರಲು ಯಾರಿಗೆ ಕಷ್ಟವಾಗುವದು?
- ನಿತ್ಯಜೀವ — ಯೌವನಸ್ಥನಾದ ಐಶ್ವರ್ಯವಂತನು ಯೇಸು ಕ್ರಿಸ್ತನಿಂದ ಏನನ್ನು ಪಡೆದುಕೊಂಡನು?
- ಪ್ರೀತಿಯಿಂದ — ಯೌವನಸ್ಥನಾದ ಐಶ್ವರ್ಯವಂತನ ಪ್ರತಿಕ್ರಿಯೆಯನ್ನು ಯೇಸು ಕ್ರಿಸ್ತನು ಹೇಗೆ ನೋಡಿದನು?

ನಿತ್ಯಜೀವ

ಯೇಸು ಕ್ರಿಸ್ತನು ಕೊಡುವ ಜೀವವನ್ನು ಕಳೆದುಕೊಳ್ಳುತ್ತೇವೆ

ಪ್ರಖ್ಯಾತಿ ಮತ್ತು ಸಾಮಾಜಿಕ ಸ್ಥಿತಿಗತಿ

ನಿರಾಸೆಗೊಂಡನು ಮತ್ತು ದುಃಖದಿಂದ ಹೊರಟು ಹೋದನು

ಪ್ರೀತಿಯಿಂದ

ದೇವರೊಂದಿಗೆ ನಮ್ಮ ಸಂಬಂಧ


ನಮ್ಮ ಜೀವಿತವನ್ನು ಯೇಸು ಕ್ರಿಸ್ತನಿಗೆ ಕೊಡುವದು

ದೇವರಿಗಿಂತ ಹೆಚ್ಚಾಗಿ ಹಣವನ್ನು ಪ್ರೀತಿಸುವವರು

### ಆಟ


**ನಿಂಬೆಹಣ್ಣಿನ ಆಟ**

ಮಕ್ಕಳನ್ನು ಎರಡು ತಂಡಗಳಾಗಿ ವಿಭಾಗಿಸಿರಿ. ಆರಂಭದ ಗೆರೆಯಿಂದ ಸ್ವಲ್ಪ ದೂರದಲ್ಲಿ ಬ್ಲಾಕ್ ಬೋರ್ಡ್ ಅಥವಾ ದೊಡ್ಡ ಹಾಳೆಯಲ್ಲಿ ಇಡಿರಿ. ಪ್ರತಿಯೊಂದು ತಂಡದ ಮೊದಲನೆಯ ಮಗುವಿಗೆ ಪೆನ್ಸಿಲ್ ಮತ್ತು ಚಮಚವನ್ನು ಕೊಡಿರಿ. ಮಕ್ಕಳು ಚಮಚವನ್ನು ಬಾಯೊಳಗೆ ಇಟ್ಟುಕೊಂಡು ಅದರ ಮೇಲೆ ನಿಂಬೆಹಣ್ಣನ್ನು ಇಟ್ಟುಕೊಂಡು ಸಾಗಬೇಕು. ನಾಯಕನು “ಹೋಗಿರಿ” ಎಂದು ಕೂಗುವಾಗ ಮಕ್ಕಳು ಬ್ಲಾಕ್ ಬೋರ್ಡ್ ಬಳಿಗೆ ನಿಂಬೆ ಹಣ್ಣು ಬೀಳಿಸದಂತೆ ಓಡಿ



ಹೋಗಬೇಕು ಮತ್ತು ಸತ್ಯವೇದ ವಚನದ ಮೊದಲನೆಯ ಪದವನ್ನು ಬರೆಯಬೇಕು. ನಂತರ ತನ್ನ ತಂಡದವರ ಬಳಿಗೆ ಹೋಗಬೇಕು ಮತ್ತು ಪೆನ್ಸಿಲ್ ಹಾಗೂ ನಿಂಬೆ ಹಣ್ಣನ್ನು ಮುಂದಿನ ಆಟಗಾರನಿಗೆ ಕೊಡಬೇಕು. ಯಾವ ತಂಡ ವಚನವನ್ನು ರೆಫರೆನ್ಸ್ ಸಮೇತ ಮೊದಲು ಬರೆಯುತ್ತದೆಯೋ, ಅದು ಆಟವನ್ನು ಗೆಲ್ಲುತ್ತದೆ.

### ಹೋಮ್ ವರ್ಕ್




(ಒಂದುವೇಳೆ ನಿಜವಾಗಿಯೂ ನಿಮಗೆ ಮಾಡಬೇಕೆಂದು ಅನ್ನಿಸಿದರೆ) ನಿಮಗೆ ಬಹಳ ಪ್ರಿಯವೆಂದು ಅನ್ನಿಸುವ ಗೊಂಬೆ ಅಥವಾ ವಸ್ತುವನ್ನು ಆಯ್ಕೆ ಮಾಡಿರಿ ಮತ್ತು ಅನೇಕ ಗೊಂಬೆಗಳಿಲ್ಲದೆ ಇರುವವರಿಗೆ ಅದನ್ನು ಕೊಡಿರಿ. ಒಂದುವೇಳೆ ಈ ವಾರ ಇದನ್ನು ಮಾಡಲು ಆಗಲಿಲ್ಲವೆಂದರೆ ಮುಂದಿನ ವಾರ ಪ್ರಯತ್ನಿಸಿರಿ. ಮಾಡಿದ ನಂತರ, ನಿಮ್ಮ ಸಂಡೇ ಸ್ಕೂಲ್ ತರಗತಿಯಲ್ಲಿ ಅದನ್ನು ಹಂಚಿಕೊಳ್ಳಿರಿ. ಅನುಭವವನ್ನು ತಿಳಿಸಿರಿ?

# ಯೇಸು ಕ್ರಿಸ್ತನ ಮಾತುಗಳನ್ನು ಕೇಳಿರಿ

04



## ಯೇಸು ಕ್ರಿಸ್ತನು 10 ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದನು: ಲೂಕ 17:11-19

### ನಾಟಕ (ಭಾಗ 1)

ಏಜೆಂಟ್ ತಂಡದ ಸದಸ್ಯರ ಬಳಿ ಸಹಾಯ ಕೇಳಿಕೊಂಡು ಬಂದನು. ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡ ನಂತರ ತನ್ನ ಸ್ವಭಾವದಲ್ಲಿ ದೊಡ್ಡ ಬದಲಾವಣೆಯಾಗಿರುವದನ್ನು ತನ್ನ ತಂದೆತಾಯಿಗಳು ಗಮನಿಸುತ್ತಾ ಇದ್ದಾರೆ ಎಂದು ಹೇಳಿದನು, ಇದು ನಿಜವಾಗಿಯೂ ಅದ್ಭುತವಾದ ವಿಷಯವಾಗಿದೆ. ಆದರೆ ಕೆಟ್ಟ ಮಾತುಗಳು ಹೇಳದೆ ಇರಲು ಮಾತ್ರ ಅವನಿಂದ ಆಗುತ್ತಾ ಇಲ್ಲ; ಅವು ಅವನೊಳಗಿನಿಂದ ಬರುತ್ತಲೇ ಇರುತ್ತವೆ. ಮನೆ ಕೆಲಸ ಮಾಡುವದರಲ್ಲಿ ತನಗಿರುವ ಕಷ್ಟ ಮತ್ತು ಅವುಗಳನ್ನು ಪೂರ್ತಿಗೊಳಿಸಲು ಆಗದೆ ಇರುವದು, ಅದರಿಂದ ತನ್ನ ತಾಯಿಗೆ ತೊಂದರೆಯಾಗುವದನ್ನು ತನಿಖಾಧಿಕಾರಿಯು ಹಂಚಿಕೊಂಡಳು, ಇದಲ್ಲದೆ ತನ್ನನ್ನು ಸರಿಪಡಿಸಿಕೊಳ್ಳ ಬೇಕೆಂಬದನ್ನು ಬಯಸಿದಳು. ಕೆಲವು ದಿನಗಳ ನಂತರ, ಆಕೆ ಸತ್ಯವೇದವನ್ನು ತನ್ನ ಹಾಸಿಗೆಯ ಪಕ್ಕದಲ್ಲಿಯೇ ಇಟ್ಟುಕೊಳ್ಳುತ್ತಾ ಇದ್ದಾಳೆ ಮತ್ತು ಪ್ರತಿದಿನ ಮುಂಜಾನೆ ಸತ್ಯವೇದವನ್ನು ಓದುತ್ತಿದ್ದಾಳೆ, ಪ್ರಾರ್ಥನೆ ಮಾಡುತ್ತಿದ್ದಾಳೆ ಮತ್ತು ದೇವರನ್ನು ಸ್ತುತಿಸುತ್ತಿದ್ದಾಳೆ, ಇವೆಲ್ಲವುಗಳನ್ನು ಹಾಸಿಗೆಯಿಂದ ಹೊರಬರುವ ಮೊದಲೇ ಮಾಡುತ್ತಿದ್ದಾಳೆ. ಇದು ಸರಳವಾದರೂ, ಕ್ರಮೇಣವಾಗಿ ಮನೆಯ ಕಾರ್ಯಗಳನ್ನೂ ಉತ್ತಮವಾಗಿ ಮಾಡುತ್ತಾ ಇದ್ದಾಳೆ ಯಾಕಂದರೆ ದೇವರೊಂದಿಗೆ ಕಳೆಯುತ್ತಿರುವ ಸಮಯವು ಆಕೆ ತನ್ನ ಮುಂಜಾನೆಯನ್ನು ಒಳ್ಳೆಯ ಮನೋಭಾವನೆಯೊಂದಿಗೆ ಪ್ರಾರಂಭಿಸಲು ಸಹಾಯ ಮಾಡುತ್ತಾ ಇದೆ. ತಾನೂ ಹೀಗೆ ಮಾಡಲು ಪ್ರಯತ್ನಿಸುವದಾಗಿ ಏಜೆಂಟ್ ತೀರ್ಮಾನಿಸಿದನು. ತನಿಖಾಧಿಕಾರಿಯು ಈ ಕಾರ್ಯವನ್ನು ದೀರ್ಘಕಾಲದ ತನಕ ಮಾಡುವಂತೆ ಪ್ರೋತ್ಸಾಹಪಡಿಸಿದಳು ಯಾಕಂದರೆ ಬದಲಾವಣೆಯು ಕ್ರಮೇಣವಾಗಿಯೇ ಉಂಟಾಗುತ್ತದೆ. ಅವರು ತಮ್ಮ ನಿಯೋಗದ ನಿಮಿತ್ತ ಹಿಂದಿನ ಕಾಲಕ್ಕೆ ಹೊರಟರು.

### ಪಾಠ

ಮತ್ತೊಮ್ಮೆ, ಯೇಸು ಕ್ರಿಸ್ತನು "ಅನ್ಯರಿಗೆ" ಕರುಣೆ ತೋರಿಸುತ್ತಾ ಇದ್ದಾನೆ. ಯೇಸು ಕ್ರಿಸ್ತನು ಅಂಥವರೊಂದಿಗೆ ಬೆರೆಯಬಾರದು ಎಂದು ಜನರು ಯೋಚಿಸುತ್ತಿದ್ದರು, ಆದರೆ ಯೇಸು ಕ್ರಿಸ್ತನು ಅವರನ್ನು ಪ್ರೀತಿಸಿದನು ಮತ್ತು ಅವರನ್ನು ಗುಣಪಡಿಸಿದನು.

**ಲೂಕ 17:11-19 ಓದಿರಿ**

ಸಮ್ಮೇಳನವಾಗಲಿ ಅಥವಾ ಸಂಸ್ಕಾರವಾಗಲಿ ಅಥವಾ ವಿಶೇಷ ಪ್ರಾರ್ಥನೆಯಾಗಲಿ ಇರಲಿಲ್ಲ. ಹಳೇ ಒಡಂಬಡಿಕೆಯ ನಿಯಮವನ್ನು ಪಾಲಿಸುವ ಸಲುವಾಗಿ ಯಾಜಕರ ಬಳಿಗೆ ಹೋಗಬೇಕೆಂಬ ಸೂಚನೆಯನ್ನು ಯೇಸು ಕ್ರಿಸ್ತನು ಅವರಿಗೆ

ಕೊಟ್ಟನು. ಯೇಸು ಕ್ರಿಸ್ತನು ಹೇಳಿದಂತೆಯೇ 10 ಮಂದಿ ಮಾಡಿದಾಗ, ಘೋರವಾದ ಕಾಯಿಲೆಯಿಂದ ಅವರಿಗೆ ಗುಣವಾಯಿತು. ಯೇಸು ಕ್ರಿಸ್ತನ ಸರಳವಾದ ಸೂಚನೆಗಳನ್ನು ಪಾಲಿಸಿದ್ದರ ನಿಮಿತ್ತ

ಅವರ ಜೀವಿತಗಳಲ್ಲಿ ಅಮೋಘವಾದ ಆಶೀರ್ವಾದಗಳು ದೊರೆತವು.

ಅವರಲ್ಲಿ ಒಬ್ಬನು ಯೇಸು ಕ್ರಿಸ್ತನ ಬಳಿಗೆ ಹಿಂದಿರುಗಿ ಬಂದು ಆತನನ್ನು ಆರಾಧಿಸಿದಿ, ಆ ಅದ್ಭುತಕಾರ್ಯಕ್ಕಾಗಿ ಯೇಸು ಕ್ರಿಸ್ತನಿಗೆ ಕೃತಜ್ಞತೆ ಸಲ್ಲಿಸಿದನು.

ನಮ್ಮ ಜೀವಿತಗಳಲ್ಲಿ ದೇವರ ಆಶೀರ್ವಾದವನ್ನು ಅಂಗೀಕರಿಸಿಕೊಳ್ಳಲು ಮತ್ತು ದೇವರಿಗೆ ಶ್ರೇಯವನ್ನು ಕೊಡದೆ ಇರುವದು ಅತ್ಯಂತ ಸುಲಭವಾದ ಕಾರ್ಯವಾಗಿದೆ. ಪ್ರಾರಂಭದಲ್ಲಿ, ನಮಗೆ ಬೇಕಾಗಿರುವವುಗಳನ್ನು ದೇವರ ಬಳಿ ಬೇಡಿಕೊಳ್ಳುವದು ಉತ್ತಮವಾಗಿ, ಒಂದುವೇಳೆ ನಮ್ಮಲ್ಲಿ ಆ ಭಾವನೆ ಬಾರದೆ ಇದ್ದರೂ ನಾವು ಆತನ ಆಶೀರ್ವಾದಗಳಿಗೆ ಅರ್ಹರಾಗಿದ್ದೇವೆ. ಎರಡನೆಯದಾಗಿ, ದೇವರು ನಮಗೆ ಸೂಚನೆಗಳನ್ನು ಕೊಡುವಾಗ, ನಾವು ಆತನ ಸೂಚನೆಗಳಂತೆ ನಡೆಯಬೇಕು. ಮೂರನೆಯದಾಗಿ, ನಾವು ಯಾವಾಗಲೂ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು ಮತ್ತು ದೇವರು ನಮಗೆ ಮಾಡಿರುವ ಕಾರ್ಯಗಳನ್ನು ಇತರರಿಗೆ ಹೇಳಬೇಕು!

### ಕಂಠಪಾಠ ವಚನ

ಫಿಲಿಪ್ಪಿಯರಿಗೆ 4:6 "ಯಾವ ವಿಷಯದಲ್ಲೂ ಚಿಂತಿಸದೆ, ನಿಮ್ಮ ಅಗತ್ಯಗಳಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ. ಪ್ರಾರ್ಥಿಸುವಾಗಲೆಲ್ಲಾ ನಿಮ್ಮಲ್ಲಿ ಕೃತಜ್ಞತಾಭಾವ ಇರಲಿ."

### ನಾಟಕ (ಭಾಗ 2)

ನಿಯೋಗದಿಂದ ಹಿಂದಿರುಗಿದ ನಂತರ, ಯೇಸು ಕ್ರಿಸ್ತನು ಸಾಧಾರಣವಾಗಿ ಕುಷ್ಠರೋಗಿಗಳನ್ನು ಗುಣಪಡಿಸಿದ್ದನ್ನು ನೋಡಿ ಅವರೆಲ್ಲರೂ ಆಶ್ಚರ್ಯಪಟ್ಟರು. ಸರಳವಾದ ಸೂಚನೆಗಳನ್ನು ಹಿಂಬಾಲಿಸುವದರಿಂದ ದೊಡ್ಡ ಬದಲಾವಣೆಯನ್ನು ಕಾಣಬಹುದು ಎಂಬದನ್ನು ಏಜೆಂಟ್ ವಿವರಿಸಿದನು. ದೇವರು ಕ್ರಮೇಣವಾಗಿ ತನ್ನನ್ನು ಬದಲಾಯಿಸುತ್ತಾ ಇದ್ದಾನೆ ಮತ್ತು ತನ್ನ ತಾಯಿಗಾಗಿ ಮನೆ ಕೆಲಸಗಳನ್ನು ಮಾಡಲು ಸಹಾಯ ಮಾಡುತ್ತಾ ಇದ್ದಾನೆ ಎಂಬದನ್ನು ತನಿಖಾಧಿಕಾರಿ ಮನವಿಕೆ ಮಾಡಿಕೊಂಡಳು ಮತ್ತು ದೇವರನ್ನು ಸ್ತುತಿಸಿ ಕೊಂಡಾಡಬೇಕೆಂದು ಬಯಸಿದಳು. ಅವರಿಬ್ಬರ ಜೀವಿತದಲ್ಲಿಯೂ ಸಕಾರಾತ್ಮಕ ಬದಲಾವಣೆಗಳು ಕಾಣಿಸುತ್ತಿರುವದನ್ನು ನಾಯಕನು ವಿವರಿಸಿದನು ಮತ್ತು ಅವುಗಳಿಗಾಗಿ ದೇವರಿಗೆ ಸ್ತೋತ್ರಗಳನ್ನು ಸಲ್ಲಿಸಿದನು.

### ನ್ಯಾಯ

ದೇವರು ಇತರರ ಜೀವಿತದಲ್ಲಿ ಮಾಡುತ್ತಿರುವ ಕಾರ್ಯಗಳನ್ನು ಗಮನಿಸಿರಿ ಮತ್ತು ಅವರೊಂದಿಗೆ ಸಂಭ್ರಮಿಸಿರಿ!


## ಜೀವನ ಚರಿತ್ರೆ (ನರ್ಸ್)

ನರ್ಸ್ ಅಂದರೆ ಅನಾರೋಗ್ಯದಲ್ಲಿರುವವರು, ಗಾಯಗೊಂಡಿರುವವರು ಮತ್ತು ಮರಣದ ಸ್ಥಿತಿಯಲ್ಲಿರುವವರನ್ನು ನೋಡಿಕೊಳ್ಳುವ ಅಥವಾ ಅವರಿಗೆ ಚಿಕಿತ್ಸೆ ಕೊಡುವ ವ್ಯಕ್ತಿಯಾಗಿದ್ದಾಳೆ. ನರ್ಸ್ ಎಲ್ಲಾ ವಯಸ್ಸಿನವರ ಆರೈಕೆಯನ್ನು ಮಾಡುತ್ತಾಳೆ, ವೈಯಕ್ತಿಕವಾಗಿ ಅಥವಾ ವೈದ್ಯಕೀಯ ತಂಡದವರೊಂದಿಗೆ ಸೇರಿ ಎಲ್ಲೇ ಕಳುಹಿಸಿದರೂ ಅಲ್ಲಿಗೆ ಹೋಗಿ ಸೇವೆ ಮಾಡುತ್ತಾಳೆ.

ಜವಾಬ್ದಾರಿಕೆಗಳು: ಅನಾರೋಗ್ಯದಲ್ಲಿರುವವರು ಇರುವ ಕಡೆ ನೇರವಾಗಿ ಮತ್ತು ತೀವ್ರವಾದ ಆರೈಕೆಯ ಕಡೆಗೆ ಗಮನ ಹರಿಸುತ್ತದೆ. ಆರೋಗ್ಯ ಮತ್ತು ಹಿತವನ್ನು ಕಾಯುವಲ್ಲಿ ಅವರ ಪಾತ್ರ ಬಹಳ ಪ್ರಾಮುಖ್ಯವಾಗಿದೆ ಹಾಗೂ ರೋಗಿಗಳ ಜೀವಿತದ ಮೌಲ್ಯ ಹೆಚ್ಚಿಸಲು ಸಹಾಯಕವಾಗಿರುತ್ತದೆ. ವೈದ್ಯಕೀಯ ಸೂಚನೆಗಳ ಮೂಲಕ ನರ್ಸ್ ಅನುಸರಣೆಯ ಕಾರ್ಯವನ್ನು ಮೇಲ್ವಿಚಾರಣೆ ಮಾಡಬೇಕು ಮತ್ತು ಪ್ರತಿಯೊಂದು ವಿಷಯದಲ್ಲಿಯೂ ಸೂಕ್ತವಾದ ಪೌಷ್ಠಿಕಾಂಶವನ್ನು ಒದಗಿಸಬೇಕು.

ಅವಕಾಶಗಳು: ಜನರ ಭರವಸೆಯನ್ನು ಸಂಪಾದಿಸುವ ಮೂಲಕ ಅವರು ಸೇವೆ ಮಾಡುವದರಿಂದ ಜನರ ಜೀವಿತಗಳ ಮೇಲೆ ಅಪಾರವಾದ ಪ್ರಭಾವವನ್ನು ಬೀರುತ್ತಾರೆ. ತಾಂತ್ರಿಕ ಮತ್ತು ಸೈದ್ಧಾಂತಿಕ ತಿಳುವಳಿಕೆಯೊಂದಿಗೆ, ಅತ್ಯಂತ ಪ್ರಾಮುಖ್ಯವಾದ ಈ ಸೇವೆಯಲ್ಲಿ ಅವರು ಸೇವೆಯ ಮನೋಭಾವನೆಯನ್ನು ಹೊಂದಿರಬೇಕು. ಅವರು ರೋಗಿಗಳೊಂದಿಗೆ ಇರುವಾಗ ಉನ್ನತ ಮಟ್ಟದ ಸಹನೆ ಮತ್ತು ಅಪಾರವಾದ ಪರಾನುಭೂತಿ ಹೊಂದಿದ್ದರೆ, ತಮ್ಮ ತಿಳುವಳಿಕೆ, ಸಮರ್ಪಣೆ ಹಾಗೂ ಸ್ಥಿರತೆಯನ್ನು ಇತರರಿಗೆ ಒದಗಿಸಲು ಸಾಧ್ಯವಾಗುತ್ತದೆ.

## ಪ್ರಶ್ನೆಗಳು ಮತ್ತು ಉತ್ತರಗಳು



1. ನಾನು ಸೂಚನೆಗಳನ್ನು ಯಾವಾಗಲೂ ಅನುಸರಿಸಬೇಕೇ?

ಹೊಸ ಸಾಧನ ಅಥವಾ ಆಟದ ಪರಿಚಯವಾಗುವಾಗ, ಅವುಗಳನ್ನು ಉಪಯೋಗಿಸುವದು ಹೇಗೆ ಎಂಬದನ್ನು ತಿಳಿಸಲು ಸೂಚನೆಗಳನ್ನು ಓದಲೇಬೇಕು ಎಂಬ ಸಂಗತಿಯನ್ನು ನಾನು ಎಂದಿಗೂ ಮರೆಯಬಾರದು. ಆದ್ದರಿಂದ ಸೂಚನೆಗಳು ಸಹಾಯಕವಾಗಿರುತ್ತವೆ ಎಂಬದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು, ಯೇಸು ಕ್ರಿಸ್ತನು ಬಾರ್ತಿಮಾಯನ ಕಣ್ಣುಗಳಿಗೆ ಹಚ್ಚಿದ್ದ ಮಣ್ಣನ್ನು ತೊಳೆದುಕೊಳ್ಳಲು ಕೊಳದ ಬಳಿಗೆ ಹೋಗುವಂತೆ ಹೇಳಿದನು. ಬಾರ್ತಿಮಾಯನು ಸೂಚನೆಗಳಿಗೆ ವಿಧೇಯನಾದನು ಮತ್ತು ತನ್ನ ಕಣ್ಣಿನ ದೃಷ್ಟಿಯನ್ನು ಪಡೆದುಕೊಂಡನು. ಒಂದುವೇಳೆ ಅವನು ಆ ಸೂಚನೆಗಳನ್ನು ಪಾಲಿಸದೆ ಇದ್ದರೆ ಏನಾಗುತ್ತಾ ಇತ್ತು ಎಂದು ಊಹಿಸಿರಿ. ಅವನು ಅವುಗಳನ್ನು ಅನುಸರಿಸಿದನು ಮತ್ತು ಆರೋಗ್ಯ ಪಡೆದುಕೊಂಡನು ಎಂಬದನ್ನು ತಿಳಿಯುವದು ಉತ್ತಮವಾಗಿದೆ.

2. ನಾನು ಕೃತಜ್ಞತೆಯುಳ್ಳವನಾಗಿರಬೇಕೆಂದು ನನ್ನ ತಂದೆತಾಯಿಗಳು ನನಗೆ ಯಾಕೆ ಹೇಳುತ್ತಾರೆ?

ಈ ಅಭ್ಯಾಸವನ್ನು ನಾವು ಪ್ರತಿದಿನ ರೂಢಿಸಿಕೊಳ್ಳಬೇಕು, ಆದರೆ ನಿಮ್ಮ ತಂದೆತಾಯಿಗಳು ಅಥವಾ ಅಧಿಕಾರಿಗಳು

ಕೃತಜ್ಞತೆಯುಳ್ಳವನಾಗಿರು ಎಂದು ನಿಮಗೆ ಬುದ್ದಿ ಹೇಳುವಾಗ ಕೇಳಿಸಿಕೊಳ್ಳಲು ಇಷ್ಟವಾಗದೆ ಇರಬಹುದು. ನಾವು ಕೇಳಿಸಿಕೊಂಡ ಪಾಠದ ಬಗ್ಗೆ ಒಂದು ಕ್ಷಣ ಆಲೋಚಿಸಿ ನೋಡಿರಿ, ಯೇಸು ಕ್ರಿಸ್ತನು 10 ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದನು, ಅವರಲ್ಲಿ ಒಬ್ಬನು ಮಾತ್ರವೇ ತನಗೆ ಗುಣವಾದದ್ದನ್ನು ತಿಳಿದು, ಆ ಅದ್ಭುತಕಾರ್ಯಕ್ಕಾಗಿ ಆತನಿಗೆ ಕೃತಜ್ಞತೆ ಸಲ್ಲಿಸಲು ಹಿಂದಿರುಗಿ ಬಂದನು. ಯೇಸು ಕ್ರಿಸ್ತನು ಅವನಿಗೆ ಹೇಳಿದ್ದೇನೆಂದರೆ: ಉಳಿದವರು ಎಲ್ಲಿ, ನಾನು 10 ಮಂದಿಯನ್ನು ಗುಣಪಡಿಸಿದೆನಲ್ಲವೇ? ಆತನಿಗೆ ಕೃತಜ್ಞತೆ ಸಲ್ಲಿಸುವದು ಒಳ್ಳೆಯ ಮನೋಭಾವನೆ ಆಗಿದ್ದರೆ, ನಾವೂ ಆತನಿಗೆ ಕೃತಜ್ಞತೆ ಸಲ್ಲಿಸುವದು ಪ್ರಾಮುಖ್ಯವಾಗಿದೆ ಎಂಬದನ್ನು ಇದು ಸೂಚಿಸುತ್ತದೆ ಅಲ್ಲವೇ?


3. ನನ್ನ ತಂದೆತಾಯಿಗಳು ಕೊಡುವ ಸೂಚನೆಗಳು ದೇವರ ಚಿತ್ತಕ್ಕೆ ವಿರುದ್ಧವಾಗಿದ್ದರೆ, ನಾನು ಅವುಗಳನ್ನು ಅನುಸರಿಸಬೇಕೋ?


ಸತ್ಯವೇದವು ಹೇಳುವದೇನೆಂದರೆ ಅಧಿಕಾರಿವೆಲ್ಲವೂ ದೇವರಿಂದಲೇ ಬರುತ್ತದೆ; ನಾವೇನು ಮಾಡಬಹುದು ನಮ್ಮ ತಂದೆತಾಯಿಗಳು ನಮಗೆ ಏನು ಹೇಳುತ್ತಾರೆ ಎಂಬದರ ಆಧಾರದ ಮೇಲೆ ದೇವರಿಗೆ ವಿರುದ್ಧವಾಗಿದೆ ಎಂಬದು ಗೊತ್ತಾದ ಮೇಲೆ ಖಂಡಿತವಾಗಿಯೂ ನಾವು ಅದನ್ನು ಮಾಡುವದಿಲ್ಲ. ಒಂದುವೇಳೆ ಸಭೆಗೆ ಹೋಗಬಾರದೆಂದು ನಮ್ಮ ತಂದೆತಾಯಿಗಳು ನಮಗೆ ಹೇಳಿದರೆ, ದೇವರ ವಾಕ್ಯಗಳನ್ನು ಕೇಳಿಸಿಕೊಳ್ಳಲು ನಮಗೆ ಅನೇಕ ಆಯ್ಕೆಗಳು ಸಿಗುತ್ತವೆ. ನಾವು ತೀರ್ಮಾನ ತೆಗೆದುಕೊಳ್ಳುವ ಸಮಯ ಬರುತ್ತದೆ, ನಾವು ನಮ್ಮ ತಂದೆತಾಯಿಗಳನ್ನು ಗೌರವಿಸಬೇಕು ಮತ್ತು ದೇವರ ಆಜ್ಞೆಗಳಿಗೆ ವಿಧೇಯರಾಗಬೇಕು. ಎರಡೂ ಕಾರ್ಯಗಳನ್ನು ಒಟ್ಟಿಗೆ ಮಾಡಬಹುದು.

## ಒಗಟಿನ ಉತ್ತರಗಳು

### ಪದ ಹುಡುಕುವದು


| | | | | | | | |
|---|---|---|---|---|---|---|---|
| ಸಂ | ಕೃ | ತ | ಜ್ | ಮ | ನು | ಷ್ಯ | ನು |
| ಬ್ರ | ಸ್ತ | ತಿ | ಚ | ಝ್ | ಚ | ವ | ಭ |
| ಮ | ಶ | ಯೋ | ಗ್ಯ | ವಾ | ದ | ದ್ದು | ಇ |
| ಗು | ಜೀ | ಳ | ಸೂ | ಶ | ಕ | ರು | ಣೆ |
| ರಿ | ಜ್ಞ | ವ | ದೇ | ಚ | ಕ | ಜ್ಞ | ಝೊ |
| ಯೇ | ಸು | ನ್ಯ | ನ | ಜ | ನೆ | ಜ | ಸ್ತು |
| ಸ್ತು | ಅ | ಳ | ಯಾ | ವ | ಎ | ಗ | ತಿ |
| ಭಿ | ಮ್ಮೈ | ಶೀ | ತ್ತು | ಭಿ | ರ್ಯಂ | ಕೃ | ಖು |
| ಸ | ಶ | ಣೆ | ರ್ವಾ | ಸ್ನೇ | ದ್ | ತ | ರಿ |
| ಜೀ | ವ | ನ | ಪ | ದ | ಳ | ಜ್ಞ | ರ |
| ಕಾ | ಯಿ | ಲೆ | ಧಿ | ಝು | ರ | ತೆ | ಳಿ |






## ಆಟ

**ಸಂಗೀತ ಅಪ್ಪುಗೆ**




ದೊಡ್ಡ ಗುಂಪು ರಚನೆಯಾಗುವ ತನಕ ವ್ಯಕ್ತಿಗತವಾಗಿ ಅಥವಾ ಇಬ್ಬಿಬ್ಬರು ಜೊತೆಯಾಗಿ ಗುಂಪು ರಚಿಸಿರಿ. ಭಾಗವಹಿಸುವವರು ಕೋಣೆಯೊಳಗೆ ಜಿಗಿಯುತ್ತಿರುವಾಗ ಹಾಡು ಹಾಕಿರಿ. ಹಾಡು ನಿಲ್ಲಿಸುವಾಗ ಪ್ರತಿಯೊಬ್ಬರು ಮತ್ತೊಬ್ಬರನ್ನು ಅಪ್ಪಿಕೊಳ್ಳಬೇಕು ಮತ್ತು ತಮ್ಮ ಹೆಸರನ್ನು ಹೇಳಬೇಕು. ಹಾಡು ಮುಂದುವರೆಯಬೇಕು ಮತ್ತು ಮುಂದಿನ ಸಲ ನಿಲ್ಲುವಾಗ ಮೂವರು ಮಕ್ಕಳು ಒಬ್ಬರನ್ನೊಬ್ಬರು ತಪ್ಪಿಕೊಳ್ಳಬೇಕು ಮತ್ತು ತಮ್ಮ ಹೆಸರುಗಳನ್ನು ಹೇಳಬೇಕು ಇದು ಹೀಗೆಯೇ ದೊಡ್ಡ ಸಂಗೀತ ಅಪ್ಪುಗೆ ಆಗುವ ತನಕ ಮುಂದುವರೆಸಿರಿ.



## ಹೋಮ್ ವರ್ಕ್

ನೀವು ದೇವರ ಹತ್ತಿರ ಬೇಡಿಕೊಂಡಿರುವ ಮತ್ತು ಆತನಿಂದ ಪಡೆದುಕೊಂಡಿರುವ ವಿಷಯಗಳ ಬಗ್ಗೆ ಆಲೋಚಿಸಿರಿ ಒಂದುವೇಳೆ ನೀವು ಬೇಡಿಕೊಂಡಿರುವವುಗಳಿಗೆ ಆತನು ನಿಮ್ಮ ಕುಟುಂಬದರ ಅಥವಾ ನಿಮ್ಮ ಸ್ವಂತ ಜೀವಿತದ ವಿಷಯದಲ್ಲಿ ಉತ್ತರ ಕೊಟ್ಟಿರುವದಾದರೆ, ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು ಸಮಯ ತೆಗೆದುಕೊಳ್ಳಿರಿ, ನಂತರ ಅದರ ಬಗ್ಗೆ ಸಂಡೇ ಸ್ಕೂಲ್ ಟೀಚರ್ ಗೆ ಹೇಳಿರಿ.

# ಯೇಸು ಕ್ರಿಸ್ತನ ಹಾಗೆ ದೀನತೆಯುಳ್ಳವರಾಗಿರಿ 05



**ಯೇಸು ಕ್ರಿಸ್ತನು ತನ್ನ ಶಿಷ್ಯರ ಕಾಲುಗಳನ್ನು ತೊಳೆದನು: ಯೋಹಾನ 13:3-17**

**ನಾಟಕ (ಭಾಗ 1)**

ಇಂದು ಅವರು ನಿಯೋಗದ ನಂತರ ಮಿಷನ್ ಸ್ವಚ್ಛ ಮಾಡಬೇಕಾಗಿತ್ತು. ಏಜೆಂಟ್ ಈಗಾಗಲೇ ಎರಡು ಸಲ ಮಿಷನ್ ಸ್ವಚ್ಛ ಮಾಡಿದ್ದಾನೆ, ಇಂದು ತನಿಖಾಧಿಕಾರಿಯ ಸರದಿ. ಆಕೆಗೆ ಸ್ವಚ್ಛ ಮಾಡಲು ಇಷ್ಟವಿಲ್ಲ ಆದ್ದರಿಂದ ಹೇಗಾದರೂ ತಪ್ಪಿಸಿಕೊಳ್ಳಲು ಆಕೆ ಪ್ರಯತ್ನಿಸುತ್ತಾಳೆ. ಇದಲ್ಲದೆ ಆಕೆ ತಂಡದ ಹಿರಿಯ ಸದಸ್ಯೆ, ಆದ್ದರಿಂದ ನಿಜವಾಗಿಯೂ ಮತ್ತೊಮ್ಮೆ ಏಜೆಂಟ್ ಸ್ವಚ್ಛ ಮಾಡಬೇಕಾಗುತ್ತದೆ. ಇಂದು ನಾವು ಹಿಂದಿರುಗಿ ಬಂದ ನಂತರ ಸ್ವಚ್ಛ ಮಾಡುವ ಸರದಿ ನಿನ್ನದು ಎಂದು ನಾಯಕ ಆಕೆಗೆ ಹೇಳಿದನು. ಆಕೆ ಅದಕ್ಕೆ ಒಪ್ಪಿಕೊಂಡಳು.

**ಪಾಠ**

ಯೇಸು ಕ್ರಿಸ್ತನು ತನ್ನ ಶಿಷ್ಯರ ಸಂಗಡ ಊಟ ಮಾಡುತ್ತಾ ಇದ್ದನು ಆ ಸಮಯದಲ್ಲಿ ಆತನು ಮಾಡಿದ ಒಂದು ಕಾರ್ಯ ಶಿಷ್ಯರಿಗೆ ಬಹಳ ಆಶ್ಚರ್ಯವನ್ನುಂಟು ಮಾಡಿತು, ಆಗ ಪೇತ್ರನು ಆತನಿಗೆ ಬೇಡ ಎಂಬದಾಗಿ ಹೇಳಿದನು. ಅದೇನೆಂದು ನೋಡೋಣ.

ಯೋಹಾನ 13:3-7 ಓದಿರಿ.

ಸೇವಕರು ಮಾತ್ರವೇ ಮಾಡುವಂಥ ಯಾವ ಕಾರ್ಯವನ್ನು ಯೇಸು ಕ್ರಿಸ್ತನು ಮಾಡಿದನು. ಲೂಕ 22:27 ರಲ್ಲಿ, ಯೇಸು ಕ್ರಿಸ್ತನು ಶಿಷ್ಯರಿಗೆ "ಯಾವನು ಹೆಚ್ಚಿನವನು; ಊಟಕ್ಕೆ ಕೂತವನೋ, ಸೇವೆಮಾಡುವವನೋ ಎಂದು ಕೇಳಿದನು," ನಂತರ ಆತನು ಅದನ್ನು ತನ್ನ ಕ್ರಿಯೆಗಳ ಮೂಲಕ  ಪ್ರದರ್ಶಿಸಿದನು. ಇದಲ್ಲದೆ ತನ್ನನ್ನು ಹಿಡಿದುಕೊಡುತ್ತಾನೆ ಎಂಬದಾಗಿ ಆತನಿಗೆ ಗೊತ್ತಿದ್ದರೂ ಆ ಶಿಷ್ಯನ ಕಾಲುಗಳನ್ನೂ ತೊಳೆದನು.

ಯೇಸು ಕ್ರಿಸ್ತನು ತನ್ನ ಮಾನವೀಯತೆಯನ್ನು ಇತರೆ ವಿಧಗಳಲ್ಲಿಯೂ ತೋರಿಸಿದನು. ಆತನು ಪರಲೋಕವನ್ನು ತೊರೆದು ಮಗುವಾಗಿ ಭೂಮಿಯ ಮೇಲೆ ಜನಿಸಿ ಬಂದನು! ಆತನಿಗೆ ಮನೆ ಇರಲಿಲ್ಲ ಅಥವಾ ವಯಸ್ಕನಾದ ನಂತರವೂ ಆತನಿಗೆ ಸ್ವಂತ ಮನೆ ಇರಲಿಲ್ಲ. ಆತನಿಗೆ ಸೇವಕರು ಇರಲಿಲ್ಲ. ಜನರು ತನ್ನನ್ನು ಆರಾಧನೆ ಮಾಡಬೇಕೆಂದು ಆತನು ಒತ್ತಾಯ ಮಾಡಲಿಲ್ಲ. ತನ್ನ ವಿಚಾರಣೆಯ ಸಮಯದಲ್ಲಿಯೂ, ಆತನು ತನ್ನ ಮೇಲೆ ಹೊರಿಸಲಾದ ಸುಳ್ಳು ಆರೋಪಗಳಿಗೂ ಪ್ರತಿಕ್ರಿಯಿಸಲಿಲ್ಲ. ತನ್ನನ್ನ ಗೇಲಿ ಮಾಡಿದ ಸಿಪಾಯಿಗಳನ್ನೂ ಆತನು ಗದರಿಸಲಿಲ್ಲ.

ಮತ್ತು ಅಂತ್ಯದಲ್ಲಿ, ನಮಗಾಗಿ, ತನ್ನ ಕುರಿಗಳಿಗಾಗಿ ಆತನು ತನ್ನ ಪ್ರಾಣವನ್ನೇ ಅರ್ಪಿಸಿದನು. ಫಿಲಿಪ್ಪಿ 2:8 ಹೇಳುವದೇನೆಂದರೆ; "ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು."

ಯೇಸು ಕ್ರಿಸ್ತನು ಹೇಳಿರುವದೇನೆಂದರೆ ನಾವು ಆತನ ಮಾದರಿಯನ್ನು ಅನುಸರಿಸಬೇಕು ಮತ್ತು ಎಲ್ಲರ ಸೇವಕರಾಗಿರಬೇಕು. ನಮಗೆ ಇಷ್ಟವಾಗುವ ಜನರಿಗೆ ಮಾತ್ರವಲ್ಲ ಬದಲಾಗಿ ದೇವರು ಉಂಟು ಮಾಡಿರುವ ಎಲ್ಲರಿಗೂ ನಾವು ಸೇವಕರಾಗಿರಬೇಕು.

### ಕಂಠಪಾಠ ವಚನ

ಫಿಲಿಪ್ಪಿಯರಿಗೆ 2:3-4 "ಸ್ವಾರ್ಥಸಾಧನೆಗಾಗಲಿ, ಡಂಭಾಚಾರಕ್ಕಾಗಲಿ ಏನನ್ನೂ ಮಾಡಬೇಡಿ. ಪರಸ್ಪರ ನಮ್ರತೆಯಿಂದ ನಡೆದುಕೊಳ್ಳಿ; ಇತರರು ನಿಮಗಿಂತಲೂ ಶ್ರೇಷ್ಠರೆಂದು ಪರಿಗಣಿಸಿರಿ. ಸ್ವಹಿತವನ್ನೇ ಗಮನಿಸದೆ ಪರರ ಹಿತವನ್ನೂ ಬಯಸಿರಿ."

### ನಾಟಕ (ಭಾಗ 2)

ಪ್ರಯಾಣದಿಂದ ಹಿಂದಿರುಗಿ ಬಂದ ನಂತರ, ಸರ್ವಲೋಕದ ಒಡೆಯನಾಗಿರುವ ಯೇಸು ಕ್ರಿಸ್ತನು, ಹೇಗೆ ತನ್ನ ಶಿಷ್ಯರ ಕಾಲುಗಳನ್ನು ತೊಳೆಯುತ್ತಿದ್ದನು ಎಂಬದರ ಬಗ್ಗೆ ಮಾತನಾಡುತ್ತಾ ಇದ್ದರು. ಅದು ಭಯಂಕರವಾದ ಕಾರ್ಯವಾಗಿ ತೋರುತ್ತಾ ಇತ್ತು! ಕೆಲವು ಶಿಷ್ಯರ ಬೆರಳುಗಳಲ್ಲಿ ದೊಡ್ಡ ಉಗುರುಗಳಿದ್ದವು!
ಮತ್ತು ಪಾದಗಳಿಂದ ದುರ್ವಾಸೆ ಬರುತ್ತಿತ್ತು. ಮಿಷಿನ್ ಸ್ವಚ್ಛ ಮಾಡುವ ವಿಷಯದಲ್ಲಿ ತನ್ನ ಮನೋಭಾವನೆಯನ್ನು ನೆನೆದು ತನಿಖಾಧಿಕಾರಿ ಕ್ಷಮಾಪಣೆ ಕೇಳಿದಳು. ನಾಯಕ ಒಂದು ಕ್ಷಣ ಆಲೋಚಿಸಿದನು, ನಂತರ ಇಂದು ನಾನೇ ಮಿಷಿನ್ ಸ್ವಚ್ಛ ಮಾಡುತ್ತೇನೆ, ತನಿಖಾಧಿಕಾರಿ ಮುಂದಿನ ಸಲ ಸ್ವಚ್ಛ ಮಾಡಲಿ ಎಂದು ಹೇಳಿದನು.
ತನಿಖಾಧಿಕಾರಿ ನಾವು ಕಾರ್ಯಗಳ ನಿಯಂತ್ರಿಸುವ ಭಾಗವನ್ನು ಸ್ವಚ್ಛ ಮಾಡುತ್ತೇನೆ ಎಂದು ಮುಂದೆ ಬಂದಳು ಮತ್ತು ಮಿಷನ್ ಗೆ ಗ್ರೀಸ್ ಹಾಕುವ ಭಾಗವನ್ನೆಲ್ಲಾ ತಾನು ಸ್ವಚ್ಛ ಮಾಡುವದಾಗಿ ಮುಂದೆ ಬಂದನು.

### ನ್ಯಾಯ

ಯೇಸು ಕ್ರಿಸ್ತನು ಜನರ ಸೇವೆ ಮಾಡಲು ಬಂದನು, ನಾವು ಆತನ ಮಾದರಿಯನ್ನು ಅನುಸರಿಸಬೇಕು. ಆದ್ದರಿಂದ ನಾವು ಯಾವಾಗಲೂ ಇತರರ ಹಾಗೂ ನಮ್ಮನ್ನು ನೋಯಿಸುವವರ ಸೇವೆ ಮಾಡುವ ಸರಳವಾದ ಮಾರ್ಗಗಳನ್ನು ಹುಡುಕಿಕೊಳ್ಳಬೇಕು.

### ಜೀವನ ಚರಿತ್ರೆ (ಸಂದೇಶಕ ದೂತನು)

ಸಂದೇಶ ತಲುಪಿಸುವ ದೂತನು ಪತ್ರಗಳನ್ನು ಅಥವಾ ಗಂಟುಗಳನ್ನು ಜನರಿಂದ ಪಡೆದು ಅವರು ಸೂಚಿಸುವ ವಿಳಾಸಗಳಿಗೆ ತಲುಪಿಸುವ ಕೆಲಸವನ್ನು ಮಾಡುತ್ತಾನೆ. ಅದು ಒಂದುವೇಳೆ ಅದೇ ಪಟ್ಟಣದಲ್ಲಾಗಿರಬಹುದು ಅಥವಾ ಬೇರೆ ಪಟ್ಟಣದಲ್ಲಾಗಿರಬಹುದು.
ಜವಾಬ್ದಾರಿಕೆಗಳು: ಸಂದೇಶ ತಲುಪಿಸುವ ದೂತನು ಪ್ರಾಮಾಣಿಕತೆಯಿಂದ ವಸ್ತುಗಳನ್ನು ಸುರಕ್ಷಿತವಾಗಿ ತಲುಪಿಸಬೇಕು. ತನ್ನ ಸಂಪರ್ಕವನ್ನು ವಿಸ್ತರಿಸುವ ಸಲುವಾಗಿ ಗ್ರಾಹಕರ ಭರವಸೆಯನ್ನು ಸಂಪಾದಿಸಿಕೊಳ್ಳುವದು ಬಹಳ ಪ್ರಾಮುಖ್ಯವಾದ ಕಾರ್ಯವಾಗಿದೆ ಆಗ ಹೆಚ್ಚಿನ ಕೆಲಸವೂ ಸಿಗುತ್ತದೆ.

ಅವಕಾಶಗಳು: ಅವರು ಜನರ ಭರವಸೆಯನ್ನು ಸಂಪಾದನೆ ಮಾಡಿದ ನಂತರ, ಜನರ ಮೇಲೆ ವೈಯಕ್ತಿಕ ಪ್ರಭಾವವನ್ನು ಬೀರಬಹುದು. ಅದನ್ನು ಅವರು ಯಾವಾಗಲೂ ನೆನಪಿನಲ್ಲಿ ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಜವಾಬ್ದಾರಿಕೆಯುಳ್ಳವರಾಗಿ ಸೇವೆ ಸಲ್ಲಿಸುತ್ತಾ ಪ್ರಯೋಜನಗಳನ್ನು ಪಡೆದುಕೊಳ್ಳಿರಿ ಅಂದರೆ ಯಾವಾಗಲೂ

ತಲುಪಿಸುವ ಕಾರ್ಯವನ್ನು ಉತ್ತಮವಾಗಿ ಮಾಡಿರಿ.

ಪ್ರಸ್ತುತ, ಜನರಿಗೆ ಭರವಸೆಯೇ ಇಲ್ಲದಾಗಿದೆ. ಅನೇಕ ಹಗರಣಗಳು ಅಥವಾ ವಂಚನೆಗಳ ನಿಮಿತ್ತ ಪ್ರಥಮ ಬಾರಿಗೆ ವಸ್ತುಗಳನ್ನು ಸಂದೇಶಗಳನ್ನು ಕಳುಹಿಸುವವರು ಅವು ತಲುಪುವ ತನಕ ಇಂಥ ಸೇವೆಗಳ ಬಗ್ಗೆ ಚಿಂತಿಸದೆ
ಇರಲು ಆಗುವದೇ ಇಲ್ಲ.

## ಪ್ರಶ್ನೆಗಳು ಮತ್ತು ಉತ್ತರಗಳು

1. ದೀನತೆಯುಳ್ಳವನಾಗಿ ನಡೆದುಕೊಳ್ಳಲು ನಾನು ಯಾವ ಕ್ರಿಯೆಗಳನ್ನು ಮಾಡಬೇಕು?

ನಾವು “ದೀನತೆಯನ್ನು” ಅಭ್ಯಾಸ ಮಾಡಲು ನಮಗೆ ಅನೇಕ ಸಂದರ್ಭಗಳು ಸಿಗುತ್ತವೆ. ಏನನ್ನಾದರೂ ಆಯ್ಕೆ ಮಾಡಿಕೊಳ್ಳುವ ಅವಕಾಶ ನಮಗೆ ಸಿಗುವಾಗ, ಯಾವುದೇ ರೀತಿಯ ಆಡಂಬರವನ್ನು ತೋರದೆ ವಿನಯವುಳ್ಳವರಾಗಿ ನಡೆದುಕೊಳ್ಳಬೇಕು. ನನಗಿಂತ ಇತರರು ಹೆಚ್ಚು ಪ್ರಾಮುಖ್ಯರು ಎಂಬದಾಗಿ ಯೋಚಿಸುವದು ಮುಖ್ಯವಾಗಿರುತ್ತದೆ. ನಿಮ್ಮ ಹಿಂದಿನ ದಿನದ ಪ್ರತಿಯೊಂದು ಕ್ರಿಯೆಯನ್ನು ವಿಶ್ಲೇಷಿಸಿರಿ ಆಗ ನೀವು ಅಹಂಭಾವದಿಂದ ನಡೆದುಕೊಂಡಿದ್ದೀರೋ ಅಥವಾ ದೀನತೆಯಿಂದ ನಡೆದುಕೊಂಡಿದ್ದೀರೋ ಎಂಬದು ನಿಮಗೆ ಗೊತ್ತಾಗುವದು.


2. ಜನರು ನನ್ನ ಬಗ್ಗೆ ಸುಳ್ಳುಗಳನ್ನು ಹೇಳುವಾಗ ನಾನು ನನ್ನ ಗೌರವ ಕಾಪಾಡಿಕೊಳ್ಳಲು ಹೋರಾಡಬೇಕೇ?

ಅಂಥ ಪರಿಸ್ಥಿತಿಯನ್ನು ಎದುರಿಸುವದೇ ದೊಡ್ಡ ಕಷ್ಟ. ಸಹಜವಾಗಿ ನಾವು ನಮ್ಮನ್ನು ಸಮರ್ಥಿಸಿಕೊಳ್ಳುತ್ತೇವೆ ಮತ್ತು ನಮ್ಮ ಬಗ್ಗೆ ಹೇಳಲಾಗುವ ವಿಷಯಗಳನ್ನೆಲ್ಲಾ ಅಲ್ಲಗಳೆಯುತ್ತೇವೆ. ಯೇಸು ಕ್ರಿಸ್ತನಿಗೆ ವಿಚಾರಣೆಯ ಸಮಯದಲ್ಲಿ ಏನಾಯಿತು ಎಂಬದನ್ನು ಒಂದುವೇಳೆ ನಾವು ನೋಡುವದಾದರೆ, ಆತನನ್ನು ಕೊಲ್ಲುವ ಸಲುವಾಗಿ ಅವರು ಆತನ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದರು. ಆದರೆ ಆತನು ಏನೂ ಹೇಳಲಿಲ್ಲ. ಕಾಲಕ್ರಮೇಣ ನಿಮ್ಮ ವಿಷಯವಾಗಿ ಹೇಳಿರುವ ಮಾತುಗಳೆಲ್ಲವೂ ಸುಳ್ಳು ಎಂದು ಜನರೇ ಅರ್ಥಮಾಡಿಕೊಳ್ಳುವ ತನಕ ಶಾಂತರಾಗಿರಿ ನಡೆದುಕೊಳ್ಳಿರಿ, ಅದರ ಬಗ್ಗೆ ನೀವು ಏನೂ ಮಾತನಾಡದೆ ಇರುವಾಗ, ಜನರು ನಿಮಗೆ ಒಳ್ಳೆಯ ಪ್ರತಿಕ್ರಿಯೆ ಕೊಡುವದನ್ನು ನೀವು ಗಮನಿಸಬಹುದು.

3. ದೀನತೆಯಿಂದ ನಡೆದುಕೊಳ್ಳಲು ನಾನು ನನ್ನ ಸ್ನೇಹಿತರಿಗೆ ಅಥವಾ ಸಹೋದರರಿಗೆ ಹೇಗೆ ಕಲಿಸಬಹುದು?

ಅವರು ದೀನತೆಯ ಸ್ವಭಾವವನ್ನು ನಮ್ಮ ಜೀವಿತದಲ್ಲಿ ನೋಡಬೇಕು. ಮಾತುಗಳನ್ನು ತಪ್ಪಾಗಿ ಅರ್ಥಮಾಡಿಕೊಳ್ಳ ಬಹುದು; ಆದರೆ ನಮ್ಮ ಕ್ರಿಯೆಗಳೇ ನಮ್ಮ ಪರವಾಗಿ ಮಾತನಾಡುತ್ತವೆ. ಯಾವುದಾದರು ವಿಷಯದಲ್ಲಿ ಬಹಳ ಸಮರ್ಥರಾಗಿರುವವರನ್ನು ಹೊಗಳುವದು ಮತ್ತು ಸಹಾಯ ಕೇಳುವದು ದೀನತೆಯ ಕಾರ್ಯವಾಗಿದೆ. ದೀನತೆಯ ವಿಷಯದಲ್ಲಿ ನೀವೇ ಮಾದರಿಗಳಾಗಿ ನಡೆದುಕೊಳ್ಳಿರಿ.

## ಒಗಟಿನ ಉತ್ತರಗಳು




### ಪದ ಹುಡುಕುವದು

| | | | | | | | |
|---|---|---|---|---|---|---|---|
| ಸಿ | ಊ | ಕ | ರು | ದ | ನ್ಯಾ | ಊ | ಷ್ಯ |
| ಧೇ | ಪಾ | ಟ | ವಿ | ಧೇ | ಯ | ತೆ | ಕು |
| ಕು | ದ | ಯಿ | ಳೆ | ಸಾ | ತೀ | ಟ | ದೀ |
| ಊ | ಟ | ಬೋ | ಳು | ಕು | ರ್ಪು | ಸೇ | ನ |
| ಶಿ | ರು | ಗ | ದ | ರಿ | ಕೆ | ಶಿ | ತೆ |
| ಷ್ಯ | ಯೆ | ಪ | ಸಿ | ಪಾ | ಪಾ | ಷ್ಯ | ಅ |
| ಕ್ರಿ | ಜ್ಞ | ಪಾ | ರ | ಯಿ | ವೆ | ರು | ರ |
| ತೊ | ಳೆ | ದ | ನು | ಲೋ | ಕ | ಳೆ | ಸ |
| ಸೇ | ಸ | ಳ | ಟ | ವ | ಕ | ದ | ಟ |
| ರು | ವೆ | ಶಿ | ಸೇ | ವಿ | ಧೇ | ಯ | ತ |




### ಆಟ

**ಆಶ್ಚರ್ಯಕರ ಬಹುಮಾನದ ಡಬ್ಬಿ**



ಒಂದು ಡಬ್ಬ ಅಥವಾ ಚೀಲವನ್ನು ಸಿದ್ಧಮಾಡಿ ಕೆಲವು ಹಾಳೆಗಳನ್ನು ತೆಗೆದುಕೊಂಡು ಅದರ ಮೇಲೆ ಕೆಲವು ಕೆಲಸಗಳನ್ನು ಬರೆದು ಅದನ್ನು ಆ ಡಬ್ಬ ಅಥವಾ ಚೀಲಕ್ಕೆ ಸುತ್ತಿರಿ. ಉದಾಹರಣೆಗೆ, ಸತ್ಯವೇದ ವಾಕ್ಯವನ್ನು ಹೇಳಿರಿ, ಹಾಡು ಹಾಡಿರಿ, ನಿಮ್ಮ ಕ್ರಯಾನ್ಸ್ ಇತರರೊಂದಿಗೆ ಹಂಚಿಕೊಳ್ಳಿರಿ, ಸ್ವಲ್ಪ ಹೊತ್ತು ನಿಮ್ಮ ನೆಚ್ಚಿನ ಗೊಂಬೆ ಬೇರೆ ಯಾರಿಗಾದರೂ ಆಡಲು ಕೊಡಿರಿ, ಹೀಗೆ ಕೆಲವು ಸಂಗತಿಗಳನ್ನು ಬರೆಯಿರಿ. ಭಾಗವಹಿಸುವವರು ಯಾವುದಾದರು ಸೂಚನೆ ಸಿಗುವ ತನಕ ವೃತ್ತಾಕಾರದಲ್ಲಿ ನಿಂತು ತಮ್ಮ ಪಕ್ಕದಲ್ಲಿರುವವರಿಗೆ ಪಾಸ್ ಮಾಡುತ್ತಿರಬೇಕು. ಸೂಚನೆ ದೊರೆತ ನಂತರ ಯಾರ ಕೈಯಲ್ಲಿ ಡಬ್ಬಿಯಿರುತ್ತದೋ ಅವರು ಡಬ್ಬಿಗೆ ಸುತ್ತಿರುವ ಹಾಳೆಯನ್ನು ತೆಗೆಯಬೇಕು ಮತ್ತು ಅದರಲ್ಲಿ ಬರೆದಿರುವ ಕೆಲಸವನ್ನು ಮಾಡಬೇಕು. ಹಾಳೆಗಳೆಲ್ಲವೂ ಮುಗಿಯುವ ತನಕ ಆಟವನ್ನು ಮುಂದುವರೆಸಬೇಕು. ಯಾರು ಕಡೆಯ ಚಟುವಟಿಕೆಯನ್ನು ಮಾಡುತ್ತಾರೋ ಅವರೇ ಆಟವನ್ನು ಮುಂದುವರೆಸಬೇಕು.




### ಹೋಮ್ ವರ್ಕ್

ಕೆಲಸಗಳಲ್ಲಿ ಸ್ವಲ್ಪ ಸಹಾಯ ಮಾಡಿರಿ ಎಂದು ಯಾರೂ ಕೇಳದೆ ಇದ್ದರೂ ನೀವು ನಿಮ್ಮ ಮನೆಯ ಅಥವಾ ಶಾಲೆಯ ಕೆಲಸಗಳನ್ನು ಮಾಡಿರಿ. ಶಾಲೆಯಲ್ಲಿ, ನೀವು ಶುಚಿ ಮಾಡದೆ ಬಿಟ್ಟಿರುವ ಕಸವನ್ನು ತೆಗೆಯಲು ಸಹಾಯ ಮಾಡಿರಿ.

# ಯೇಸು ಕ್ರಿಸ್ತನ ಹಾಗೆ ಆತ್ಮಭಾರವುಳ್ಳವರಾಗಿರಬೇಕು 06

**ಯೇಸು ಕ್ರಿಸ್ತನು ಮೇಜುಗಳನ್ನು ಕೆಡವಿದನು: ಮಾರ್ಕ 11:15-17 (ಯೋಹಾನ 2:13-17)**

### ನಾಟಕ (ಭಾಗ 1)



ಏಜೆಂಟ್ ತಂಡದವರಿಗೆ ನಾನು ನನ್ನ ಸಹೋದರಿಯೊಂದಿಗೆ ಚಿಕ್ಕದಾಗಿ ವ್ಯಾಪಾರ ಮಾಡುವ ಯೋಜನೆ ಹಾಕಿಕೊಂಡಿದ್ದೇನೆ. ಆಕೆ ಕಲಾವಿದೆಯಾಗಿದ್ದಾಳೆ ಮತ್ತು ಬಹಳ ಚೆನ್ನಾಗಿ ಗೋಡೆಗಳಿಗೆ ಅಲಂಕಾರ ಮಾಡುತ್ತಾಳೆ ಹಾಗೂ ಆಕೆ ಮಾಡಿರುವ ಕೆಲವು ಅಲಂಕಾರಗಳು ಸತ್ಯವೇದದ ವಚನಗಳಾಗಿವೆ. ಈಗ ಅವುಗಳನ್ನು ಮಾರಲು ತಾನು ಬಯಸುತ್ತಿರುವದಾಗಿ ಹೇಳಿದನು. ಮಾರಣೆಯ ದಿನ, ಧಾರ್ಮಿಕ ವಸ್ತುಗಳ ಮೇಲೆ ಯಾರೋ ಹೆಚ್ಚಿನ ಬೆಲೆ ಹಾಕಿರುವದನ್ನು ನೋಡಿದನು, ಯಾಕಂದರೆ ಅವು ಧಾರ್ಮಿಕ ವಿಷಯಗಳಾಗಿದ್ದವು ಮತ್ತು ಜನರನ್ನು ದೇವರ ಹತ್ತಿರಕ್ಕೆ ನಡೆಸುವ ಪ್ರಯತ್ನ ಮಾಡುವವರಾಗಿದ್ದರು. ಸತ್ಯವೇದದ ವಚನಗಳಿರುವ ಗೋಡೆಗಳಿಗೆ ಹಾಕುವ ಚಿತ್ರಗಳಿಗೂ ಹೆಚ್ಚಿನ ಬೆಲೆ ನಿಗದಿಪಡಿಸುವ ಬಗ್ಗೆ ಅವನು ಯೋಚಿಸುತ್ತಾ ಇದ್ದನು. ಬೆಲೆ ಹೆಚ್ಚಿಸುವದು ಒಳ್ಳೆಯ ಯೋಚನೆಯಲ್ಲ ಎಂದು ತನಿಖಾಧಿಕಾರಿ ಅವನಿಗೆ ಹೇಳಿದಳು. ಆದರೆ ಏಜೆಂಟ್ ಗೆ ಅದು ಒಪ್ಪಿಗೆಯಾಗಲಿಲ್ಲ ಮತ್ತು ಅವರು ಹಿಂದಿನ ಕಾಲಕ್ಕೆ ಹೋದರು.

### ಪಾಠ

ಯೇಸು ಕ್ರಿಸ್ತನು ಕತ್ತೆಯ ಮೇಲೆ ಕೂತುಕೊಂಡು ಯೆರೂಸಲೇಮಿನೊಳಗೆ ಪ್ರವೇಶಿಸಿದನು ಆಗ ಜನರು ಸ್ತುತಿಗೀತೆಗಳನ್ನು ಹಾಡುತ್ತಿದ್ದರು ಮತ್ತು ಆತನ ಎದುರು ನೆಲದ ಮೇಲೆ ತಮ್ಮ ಬಟ್ಟಗಳನ್ನು ಹಾಸುತ್ತಿದ್ದರು. ಆತನು ಅರಸನು ಎಂಬದಕ್ಕೆ ಇದು ಗುರುತಾಗಿದೆ! ಯೆಹೂದ್ಯರು ಬಹಳ ಉತ್ತಮವಾಗಿ ನಡೆದುಕೊಳ್ಳುತ್ತಿದ್ದರು. ಆದರೆ ಯೇಸು ಕ್ರಿಸ್ತನು ದೇವಾಲಯದೊಳಗೆ ಹೋದಾಗ, ಜನರು ಪ್ರಾರ್ಥನೆ ಮತ್ತು ಆರಾಧನೆ ಮಾಡದೆ ವ್ಯಾಪಾರ ಮಾಡುತ್ತಿದ್ದರು ಹಾಗೂ ಯಾಜಕರು ಅದಕ್ಕೆ ಅನುಮತಿಯನ್ನೂ ಕೊಟ್ಟಿದ್ದರು.

ಮಾರ್ಕ 11:15-17 ಓದಿರಿ.

ಪ್ರೀತಿ ಮತ್ತು ದೀನತೆಯ ಬಗ್ಗೆ ಬೋಧಿಸುತ್ತಿದ್ದ ಬೋಧಕನ ಈ ಪ್ರತಿಕ್ರಿಯೆ ಹಿಂಸಾತ್ಮಕವಾಗಿ ತೋರುತ್ತದೆ. ಆದರೆ ಇಲ್ಲಿ ನಾವು ಅನೇಕ ವಿಷಯಗಳನ್ನು ಕಲಿತುಕೊಳ್ಳಬಹುದಾಗಿದೆ. ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರ ಜನರು ವರ್ಷಕ್ಕೊಮ್ಮೆ ದೇವಾಲಯಕ್ಕೆ ಬರಬೇಕಾಗಿತ್ತು ಮತ್ತು ತಾವು ಬೆಳೆದಿರುವವುಗಳಿಂದ ಮತ್ತು ಬೆಳೆಸಿರುವವುಗಳಿಂದ ಕಾಣಿಕೆಗಳನ್ನು ಅರ್ಪಿಸಬೇಕಾಗಿತ್ತು. ಒಂದುವೇಳೆ ಅವಶ್ಯವಾಗಿರುವದನ್ನು ತೆಗೆದುಕೊಂಡು ಬರಲು ಯಾರಿಗಾದರೂ ಕಷ್ಟವಾದರೆ, ಅವರು ಅದನ್ನು ಯೆರೂಸಲೇಮಿನಲ್ಲಿಯೇ ಖರೀದಿ ಮಾಡಿ ಅರ್ಪಿಸುತ್ತಿದ್ದರು. ಆದ್ದರಿಂದ ಮಾರಾಟ ಮಾಡುವ ಸಲುವಾಗಿ ದೇವಾಲಯದ ಪ್ರಾಕಾರದೊಳಗೆ ವ್ಯಾಪಾರಿಗಳು ಅಂಗಡಿಗಳನ್ನು ಇಟ್ಟಿದ್ದರು. ದೂರದಿಂದ

ಪ್ರಯಾಣಿಸಿ ಬರುವವರಿಗೆ ಬೇರೆ ಕಡೆಗಳಲ್ಲಿ ಖರೀದಿ ಮಾಡುವದು ಕಷ್ಟವಾದ್ದರಿಂದ ವ್ಯಾಪಾರಿಗಳು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ದೇವರ ಆಲಯದಲ್ಲಿ ಅವರು ಜನರ

ಅಸಹಾಯಕತೆಯನ್ನು ಬಳಸಿಕೊಳ್ಳುತ್ತಿದ್ದರು! ಈ ಕಾರಣದಿಂದ ಯೇಸು ಕ್ರಿಸ್ತನು ಅವರನ್ನು ಕಳ್ಳರು ಎಂದು ಕರೆಯುತ್ತಿದ್ದಾನೆ. ಯಾರಾದರೂ ದೇವರ ಬಳಿಗೆ ಬರುವಾಗ ಇತರರ ಅವರ ನಡುವೆ ಬಂದರೆ ದೇವರು ಅದನ್ನು ಸಹಿಸುವದಿಲ್ಲ ಯಾಕಂದರೆ ಆತನು ಜನರನ್ನು ಪ್ರೀತಿಸುತ್ತಾನೆ ಮತ್ತು ಅವರು ಆತನೊಂದಿಗೆ ಇರಬೇಕೆಂದು ಬಯಸುತ್ತಾನೆ. ಮತ್ತಾಯ 23:13ರಲ್ಲಿ, ಜನರನ್ನು ಪರಲೋಕದಿಂದ ದೂರವಿಡುತ್ತಿದ್ದ ಧಾರ್ಮಿಕ ನಾಯಕರನ್ನು ಯೇಸು ಕ್ರಿಸ್ತನು ಗದರಿಸುತ್ತಾ ಇರುವದನ್ನು ನಾವು ನೋಡುತ್ತೇವೆ. ದೇವರ ಬಳಿಗೆ ಬರುವವರ ಮೇಲೆ ನಿಯಮಗಳ ಮೂಲಕ ಹೊರೆ ಹಾಕುವ ಅಥವಾ ಅವರ ಅಸಹಾಯಕತೆಯನ್ನು ನಮ್ಮ ಲಾಭಕ್ಕಾಗಿ ಬಳಸಿಕೊಳ್ಳುವ ಪ್ರಯತ್ನವನ್ನು ಮಾಡದೆ ದೇವರ ಬಳಿಗೆ ಬರುವವರಿಗೆ ಸುಲಭವಾಗುವಂತೆ ನಡೆದುಕೊಳ್ಳೋಣ.

### ಕಂಠಪಾಠ ವಚನ

ಮತ್ತಾಯ 23:13 "ಕಪಟ ಧರ್ಮಶಾಸ್ತ್ರಿಗಳೇ ಮತ್ತು ಫರಿಸಾಯರೇ, ನಿಮಗೆ ಧಿಕ್ಕಾರ! ಸ್ವರ್ಗಸಾಮ್ರಾಜ್ಯದ ದ್ವಾರಗಳನ್ನು ಮಾನವರಿಗೆ ಮುಚ್ಚಿದ್ದೀರಿ. ನೀವೂ ಪ್ರವೇಶಿಸುವುದಿಲ್ಲ, ಒಳಕ್ಕೆ ಪ್ರವೇಶಿಸಲು ಯತ್ನಿಸುವವರನ್ನೂ ಬಿಡುವುದಿಲ್ಲ."

### ನಾಟಕ (ಭಾಗ 2)

ಯೇಸು ಕ್ರಿಸ್ತನ ಕಾಲದಲ್ಲಿದ್ದ ಯೆರೂಸಲೇಮಿನಿಂದ ಹಿಂದಿರುಗಿ ಬಂದ ನಂತರ, ದೇವಾಲಯದಲ್ಲಿ ಯೇಸು ಕ್ರಿಸ್ತನು ವ್ಯಾಪಾರಿಗಳೊಂದಿಗೆ ನಡೆದುಕೊಂಡ ರೀತಿಯಿಂದ ಏಜೆಂಟ್ ಗೆ ಬಹಳ ಆಶ್ಚರ್ಯವಾಯಿತು. ಜನರು ದೇವರನ್ನು ಕಂಡುಕೊಳ್ಳಲು ನಾವು ಅವರಿಗೆ ಸಹಾಯ ಮಾಡಬೇಕೇ ಹೊರತು, ಅವರನ್ನು ದೂರ ತಳ್ಳಬಾರದು ಅಥವಾ ಅವರು ಹುಡುಕಾಟದಲ್ಲಿರುವ ನಮ್ಮ ಲಾಭಕ್ಕಾಗಿ ಅವರನ್ನು ದುರುಪಯೋಗಪಡಿಸಿಕೊಳ್ಳಬಾರದು ಎಂದು ಹೇಳಿದ ನಾಯಕನಿಗೆ ಏಜೆಂಟ್ ಕೆಲವು ಪ್ರಶ್ನೆಗಳನ್ನು ಕೇಳಿದನು. ಕೆಲವು ನಿಮಿಷಗಳ ಕಾಲ ಅವರು ಚರ್ಚೆ ಮಾಡಿದ ನಂತರ, ಲಾಭ ಮಾಡಬೇಕೆಂಬ ಏಜೆಂಟ್ ತನ್ನ ಮನೋಭಾವನೆಯನ್ನು ಬದಲಾಯಿಸಿಕೊಳ್ಳಲು ಮತ್ತು ಜನರು ದೇವರನ್ನು ತಿಳಿದುಕೊಳ್ಳಲು ತನ್ನ ವ್ಯಾಪಾರವನ್ನ ಉಪಯೋಗಿಸಿಕೊಳ್ಳಲು ಬೇಕಾದ ಸಹಾಯವನ್ನು ನಾಯಕನು ಅವನಿಗೆ ಒದಗಿಸಿದನು. ಸತ್ಯವೇದದ ವಾಕ್ಯಗಳಿರುವ ಅಲಂಕಾರಗಳ ಮೇಲೆ ಡಿಸ್ಕೌಂಟ್ ಕೊಡುವ ತೀರ್ಮಾನವನ್ನು ಅವನು ತೆಗೆದುಕೊಂಡನು ಮತ್ತು ತನ್ನ ಸಹೋದರಿಯ ಬಳಿ ಮತ್ತಷ್ಟು ಅವುಗಳನ್ನು ಕೊಡುವಂತೆ ಕೇಳಿಕೊಂಡನು.

### ನ್ಯಾಯ

ದೇವರ ಹೆಸರಿನಲ್ಲಿ ಬಡವರಿಂದ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಿದ್ದವರೊಂದಿಗೆ ಯೇಸು ಕ್ರಿಸ್ತನು ಒರಟಾಗಿ ನಡೆದುಕೊಂಡನು. ಮುಖ್ಯವಾಗಿ ಸಭೆಯಲ್ಲಿ, ತಮ್ಮನ್ನು ಸಮರ್ಥಿಸಿಕೊಳ್ಳಲು ಆಗದ ಪರಿಸ್ಥಿತಿಯಲ್ಲಿರುವವರನ್ನು ಸಮರ್ಥಿಸಲು ನಾವು ಮುಂದಾಗಬೇಕು.

### ಜೀವನ ಚರಿತ್ರೆ (ಸೈನಿಕ)

ಸೈನಿಕ, ಸಾಮನ್ಯ ಅರ್ಥದಲ್ಲಿ, ಸ್ವೇಚ್ಛೆಯಿಂದ ತನ್ನ ವೃತ್ತಿಯನ್ನು ಆರಿಸಿಕೊಂಡಿರುವವನು ಅಥವಾ ಪ್ರಭುತ್ವವಿರುವ ದೇಶ ಸೇವೆಗಾಗಿ ಖಡ್ಡಾಯವಾಗಿ ಸೈನ್ಯದಲ್ಲಿ ಸೇರಿರುವ ವ್ಯಕ್ತಿಯಾಗಿದ್ದಾನೆ. ದೇಶ ಮತ್ತು ಅದರ ವಿಷಯಗಳನ್ನು


ರಕ್ಷಿಸುವ ಸಲುವಾಗಿ ಸೈನಿಕನು ತರಬೇತಿ ಪಡೆದು ಸಜ್ಜುಗೊಳ್ಳುತ್ತಾನೆ.

ಜವಾಬ್ದಾರಿಕೆಗಳು: ಸೈನ್ಯದೊಳಗೆ, ಸೈನಿಕರನ್ನು ವಿವಿಧ ಕಾರ್ಯಗಳಿಗೆಂದು ತಂಡಗಳಾಗಿ ರಚಿಸುತ್ತಾರೆ. ಉದಾಹರಣೆಗೆ, ಕಾಲಾಳು ಪಡೆ, ಶಸ್ತ್ರಸಜ್ಜಿತ ಸೈನಿಕರು, ಫಿರಂಗಿ, ಮಿಲಿಟರಿ ಪೋಲಿಸ್, ಇತ್ಯಾದಿ. ಸೈನಿಕರಲ್ಲಿ ಉನ್ನತ ಮಟ್ಟದ ವಿಧೇಯತೆ, ಸಹಕಾರ ಮತ್ತು ವಿವೇಚನೆ ಇರುತ್ತದೆ.

ಅವಕಾಶಗಳು: ಕ್ರೈಸ್ತೀಯ ಸೈನಿಕನಿಗೆ ಪ್ರಮಾಣಿಕನಾಗಿರುವ, ಶ್ರಮಶೀಲನಾಗಿರುವ ಮತ್ತು ಸೂಚನೆಗಳನ್ನು ಪಾಲಿಸುವ ಅವಕಾಶ ಇರುತ್ತದೆ. ಒಳ್ಳೆಯ ನೈತಿಕತೆಯು ನಿಮ್ಮ ಘಟಕವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮತ್ತು ಗೌರವಕ್ಕೆ ಪಾತ್ರವನ್ನಾಗಿ ಮಾಡುತ್ತದೆ ಎಂದು ತಿಳಿದು ದೂರು ಹೇಳುವದು ಅಥವಾ ಸುಳ್ಳು ಸುದ್ದಿ ಹಬ್ಬಿಸುವದು ಮತ್ತು ಪ್ರಾರಂಭಿಸುವದನ್ನು ಬಿಟ್ಟುಬಿಡಿರಿ. ಇದಲ್ಲದೆ ಇತರರಿಗೆ ಸಹಾಯ ಮಾಡುವ, ಇತರರನ್ನು ಪ್ರೋತ್ಸಾಹಪಡಿಸುವ ಮತ್ತು ತಂಡವಾಗಿ ಕಾರ್ಯ ಮಾಡುವ ಮಾರ್ಗಗಲನ್ನು ಸೈನಿಕರು ಹುಡುಕಿಕೊಳ್ಳಬಹುದು. ನಿಮ್ಮ ದರ್ಜೆ ಯಾವುದೇ ಆದರೂ, ಘಟಕದ ಮೇಲೆ ಪ್ರಮುಖವಾದ ಪ್ರಭಾವವನ್ನು ಬೀರಬಹುದು.

### ಪ್ರಶ್ನೆಗಳು ಮತ್ತು ಉತ್ತರಗಳು

1. ನಾನು ನನ್ನ ಸ್ವಂತ ವಿಷಯಗಳಲ್ಲಿ ಆತ್ಮಭಾರದಿಂದಿದ್ದು, ದೇವರ ಸೇವೆಯಲ್ಲಿ ಅದನ್ನು ತೋರದೆ ಇದ್ದರೆ ಏನಾಗುತ್ತದೆ?



ನಾವು ನಮಗೆ ಇಷ್ಟವಿರುವ ಕಾರ್ಯಗಳಲ್ಲಿ ಹೇಗೆ ಉತ್ಸಾಹವನ್ನು ತೋರಿಸುತ್ತೇವೆ ಎಂಬದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ಒಂದುವೇಳೆ ನಾವು ದೇವರ ಸೇವೆ ಮಾಡುತ್ತಾ ಇರುವದಾದರೆ, ಆತನ ಸ್ಥಾನವನ್ನು ನಮ್ಮ ಜೀವಿತದಲ್ಲಿ ತಿಳಿದುಕೊಳ್ಳಲು ಅದರಿಂದ ಸಾಧ್ಯವಾಗುತ್ತದೆ. ನಾವು ಯಾವುದಾದರೂ ಕ್ರೀಡಾ ತಂಡದ ಭಾಗವಾಗಿದ್ದರೆ ಅಥವಾ ಅನೇಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರೆ, ಸಿದ್ಧತೆ ಮಾಡಿಕೊಳ್ಳುತ್ತೇವೆ ಮತ್ತು ಪ್ರತಿಯೊಂದು ಕೂಟಗಳಲ್ಲಿಯೂ ಭಾಗವಹಿಸುತ್ತೇವೆ. ನಾವು ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ದೇವರಿಗೆ ಪ್ರಥಮ ಸ್ಥಾನವನ್ನು ಕೊಡುವಾಗ, ಅವಶ್ಯವಾಗಿರುವ ಸಮಯ ಕೊಡಲು ಸುಲಭವಾಗುತ್ತದೆ ಮತ್ತು ಅದನ್ನು ಆತ್ಮಭಾರದಿಂದ ಮಾಡಲು ಸಾಧ್ಯವಾಗುತ್ತದೆ ಹಾಗೂ ನಾವು ಮಾಡುತ್ತಿರುವ ಕಾರ್ಯದಲ್ಲಿ ಸಂತೋಷಪಡಲು ಆಗುತ್ತದೆ.

2. ಕೆಲವೊಮ್ಮೆ ನಾನು ಮೂರ್ಖತನದಿಂದ ನಡೆದುಕೊಳ್ಳುತ್ತಿದ್ದೇನೆ ಆದರೆ ಅದು ನನಗೆ ಗೊತ್ತಾಗುತ್ತಲೇ ಇಲ್ಲ ಎಂದು ಅನ್ನಿಸುತ್ತದೆ . . .

ನೀವು ದೇವರಿಗಾಗಿ ಏನಾದರೂ ಮಾಡುತ್ತಾ ಇರುವಾಗ ಈ ಭಾವನೆಯೊಂದಿಗೆ ಆತನ ಸಹಾಯವನ್ನು ಬೇಡಿಕೊಳ್ಳಬಹುದು ಎಂಬದನ್ನು ಮರೆಯಬೇಡಿರಿ. ಅನೇಕ ಹುಡುಗರು ಮತ್ತು ಹುಡುಗಿಯರು ತಮ್ಮ ಸಭೆಗಳಲ್ಲಿ ಬಹಳ ಅನೂಕತೆಯಲ್ಲಿರುವದರಿಂದ ದೇವರಿಗಾಗಿ ನಿಜವಾದ ಆತ್ಮಭಾರವನ್ನು ತೋರುವ ಅವಶ್ಯಕತೆಯು ಎದುರಾಗುವದಿಲ್ಲ. ಲೋಕದ ಬೇರೆ ಕೆಲವು ಭಾಗಗಳಲ್ಲಿ ಅನೇಕರು ಯೇಸು ಕ್ರಿಸ್ತನಿಗಾಗಿ ತಮ್ಮ ಪ್ರಾಣವನ್ನು ಅರ್ಪಿಸುತ್ತಾ ಇದ್ದಾರೆ. ಅವರು ಖಂಡಿತವಾಗಿಯೂ ದೇವರ ವಿಷಯದಲ್ಲಿ ಯಥಾರ್ಥವಾದ ಆತ್ಮ

ಭಾರವುಳ್ಳವರಾಗಿದ್ದಾರೆ. ಅನಾನೂಕೂಲತೆಯ ಆ ಭಾವನೆಯನ್ನು ಒಪ್ಪಿಸಿಕೊಡುವಂತೆ ಮತ್ತು ಆತನ ಸೇವೆ ಮಾಡುವ ಆತ್ಮಭಾರ ಕೊಡುವಂತೆ ದೇವರನ್ನು ಬೇಡಿಕೊಳ್ಳಲು ನಾನು ನಿಮ್ಮನ್ನು ಸ್ವಾಗತಿಸುತ್ತೇನೆ.

3. ವ್ಯಾಪಾರಿಗಳನ್ನು ದೇವಾಲಯದಿಂದ ಓಡಿಸುವಾಗ ಯೇಸು ಕ್ರಿಸ್ತನು ತೋರಿದ ಕೋಪವನ್ನು ನಾನು ಅನುಸರಿಸಬೇಕೇ? ನಾವು ಮಾಡಬೇಕೆಂದು ಬಯಸುವ ಕಾರ್ಯಗಳನ್ನು ಮಾಡಲು ನಮಗೆ ಅವಕಾಶಗಳನ್ನು ಒದಗಿಸುವಂಥ ಕ್ರಿಯೆಗಳ ಕಡೆಗೆ ಗಮನಹರಿಸುತ್ತೇವೆ. ಆ ಕ್ಷಣದಲ್ಲಿ ಯೇಸು ಕ್ರಿಸ್ತನಿಗೆ ಬೇಸರವಾಯಿತು ಯಾಕಂದರೆ ತಂದೆಯಾದ ದೇವರ ಆರಾಧನೆಗೆ ಅವರು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ಇದ್ದರು. ಆತನು ಫರಿಸಾಯರು ಮತ್ತು ಶಾಸ್ತ್ರಿಗಳ ವಿರುದ್ಧ ತನ್ನ ಕೋಪವನ್ನು ಹೊರಹಾಕಿದನು ಯಾಕಂದರೆ ಅವರು ದೇವಾಲಯದೊಳಗೆ ಇಂಥವುಗಳಿಗೆ ಅನುಮತಿ ಕೊಟ್ಟಿದ್ದರು. ದೇವರು ಬಹುಶಃ ತೀವ್ರವಾದ ಕಾರ್ಯಗಳನ್ನು ಮಾಡಲು ನಮಗೆ ಹೇಳುವದಿಲ್ಲ. ಇತರರಿಗೆ  ನೋವನ್ನುಂಟು ಮಾಡುವ ಕಾರ್ಯಗಳನ್ನ ಮಾಡದಂತೆ ಎಚ್ಚರವಹಿಸಿರಿ, ಯಾಕಂದರೆ ಅವುಗಳು ದೇವರಿಗೆ ಪ್ರಾಮುಖ್ಯವಾದವುಗಳಾಗಿವೆ.

### ಒಗಟಿನ ಉತ್ತರಗಳು






## ಪದ ಹುಡುಕುವದು

| | | | | | | | |
|---|---|---|---|---|---|---|---|
| ಯೆ | ಪ್ರೀ | ಅ | ವಿ | ಧೇ | ಯ | ತ | ಯೇ |
| ದೀ | ರೂ | ರ | ಬೋ | ಕ | ಸ್ತು | ಸ್ತು | ಸು |
| ನ | ವಾ | ಸ | ಜ್ಞ | ಳ್ಳ | ರಿ | ತಿ | ಕ್ರಿ |
| ವ್ಯಾ | ಬೋ | ರಿ | ಲೇ | ರು | ಪ್ರೀ | ರ | ಸ್ತ |
| ದೇ | ವಾ | ಲ | ಯ | ಮ್ | ತೆ | ವಾ | ನು |
| ಕು | ಜ್ಞ | ಸಾ | ರ | ಜ್ಞ | ಬೋ | ಧ | ನೆ |
| ರಿ | ರಿ | ಸ | ಳ | ಟ | ಗ | ಕ | ದೀ |
| ಫ | ಪ್ರೀ | ಕ | ಗ | ಗ | ಜ್ಞ | ಳು | ನ |
| ಕ | ಬೆ | ಳೆ | ಯು | ವ | ದು | ಶಿ | ತೆ |
| ವಾ | ತ್ತೆ | ಯೇ | ಸ | ಕ್ರಿ | ಸ್ತ | ಷ್ಯ | ನು |
| ದ | ಯೆ | ರೂ | ಸ | ಲ | ಮ್ | ರು | ಬೋ |

### ಆಟ


**ನನ್ನ ಬಳಿಗೆ ತೆಗೆದುಕೊಂಡು ಬನ್ನಿರಿ**



ಭಾಗವಹಿಸುವವರನ್ನು ಸಣ್ಣ ಗುಂಪುಗಳಾಗಿ ವಿಭಾಗಿಸಬೇಕು ಮತ್ತು ತಂಡಗಳನ್ನು ಸಾಧ್ಯವಾದಷ್ಟು ಸಹಾಯ ಮಾಡುವಾತನಿಂದ ದೂರ ಇರಿಸಬೇಕು. ಆಗ ಸಹಾಯ ಮಾಡುವಾತನು "ತೆಗೆದುಕೊಂಡು ಬನ್ನಿರಿ . . ." ಎಂದು ಹೇಳಬೇಕು ಹಾಗೆಯೇ ಹತ್ತಿರದಲ್ಲಿರುವ ವಸ್ತುವಿನ ಹೆಸರನ್ನು ಹೇಳಬೇಕು. ಉದಾಹರಣೆಗೆ, "ಹುಡುಗನ ಅಥವಾ ಹುಡುಗಿಯ ಚಪ್ಪಲಿಯನ್ನು ತೆಗೆದುಕೊಂಡು ಬನ್ನಿರಿ" (ತರಗತಿಯ ಒಳಗೆ ಇರುವ ವಸ್ತುಗಳ ಹೆಸರುಗಳನ್ನೇ ಹೇಳಬೇಕು). ತಂಡದವರು ತಮಗೆ ಹೇಳುವ ವಸ್ತುವನ್ನು ತೆಗೆದುಕೊಂಡು ಬರಲು ಹೋಗಬೇಕು.

ಇದನ್ನು ನೀವು ಅನೇಕ ಸಲ ಮಾಡಬಹುದು, ತಂಡಗಳಿಗೆ ವಿವಿಧ ವಸ್ತುಗಳನ್ನು ತರಲು ಹೇಳಬಹುದು.

### ಹೋಮ್ ವರ್ಕ್




ನೀವು ದೇವರನ್ನು ಪ್ರೀತಿಸುವದಕ್ಕಿಂತ ಹೆಚ್ಚಾಗಿ ಪ್ರೀತಿಸುವ ವಸ್ತುಗಳು ಅಥವಾ ಜನರ ಪಟ್ಟಿಯನ್ನು ಮಾಡಿರಿ ಮತ್ತು ದೇವರ ವಿಷಯದಲ್ಲಿ ನಿಮಗಿರುವ ಆತ್ಮಭಾರಗಳಿಗೆ ಅವು ಕಾರಣವಾಗಿದ್ದರೆ ಯೋಚಿಸಿರಿ (ಉದಾಹರಣೆಗೆ ಗರ್ಲ್ ಫ್ರೆಂಡ್ ಅಥವಾ ಬಾಯ್ ಫ್ರೆಂಡ್, ಶಾಲೆಯ ಕೆಲಸ, ಸೆಲ್ ಫೋನ್, ಕ್ರೀಡೆ, ಗೊಂಬೆಗಳು, ಸ್ನೇಹಿತರು). ದೇವರ ದೃಷ್ಟಿಯ ಮೂಲಕ ನೋಡಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ. ಹಾಗೆಯೇ ಈ ವಾರದಲ್ಲಿ ದೇವರೊಂದಿಗೆ ಮಾತನಾಡಲು ಹೆಚ್ಚು ಸಮಯವನ್ನು ತೆಗೆದುಕೊಳ್ಳಿರಿ.

# ಯೇಸು ಕ್ರಿಸ್ತನ ಹೃದಯ ಪ್ರಕಟಗೊಂಡಿದೆ 07



**ಗೆತ್ಸೇಮನೆ ತೋಟ: ಮತ್ತಾಯ 26:36-39,47-57**

### ನಾಟಕ (ಭಾಗ 1)

ತನಿಖಾಧಿಕಾರಿ ಇಂದು ದುಃಖದಲ್ಲಿದ್ದಾಳೆ. ನಿನ್ನೆ ಆಕೆಗೆ ಒಂದು ವಿಷಯ ಗೊತ್ತಾಯಿತು, ಏನೆಂದರೆ ಆಕೆಯ ಆಪ್ತ ಸ್ನೇಹಿತೆ ಒಬ್ಬಳು ಬೇರೊಬ್ಬಳೊಂದಿಗೆ ಹೆಚ್ಚು ಸಮಯ ಕಳೆಯುತ್ತಾ, ತನಿಖಾಧಿಕಾರಿಯ ಭರವಸೆಯನ್ನು ಅಲ್ಲಗಳೆದಿದ್ದಳು ಮತ್ತು ಆಕೆಯ ಕುರಿತು ಮತ್ತೊಬ್ಬಳ ಹತ್ತಿರ ಕೆಟ್ಟದಾಗಿ ಹೇಳಿದ್ದಳು, ಅಲ್ಲದೆ ಆಕೆಯ ರಹಸ್ಯಗಳನ್ನೂ ಹೇಳಿದ್ದಳು. ತನಿಖಾಧಿಕಾರಿಗೆ ಈ ವಿಷಯ ಗೊತ್ತಾಯಿತು ಯಾಕಂದರೆ ಆ ಬೇರೊಬ್ಬಳು ಅದನ್ನು ಕೆಲವರಿಗೆ ಹೇಳಿದ್ದರಿಂದ ಆ ವಿಷಯ ಈಗ ಶಾಲೆಯಲ್ಲಿರುವವರೆಲ್ಲರಿಗೆ ಗೊತ್ತಾಯಿತು. ನಂತರ ಟೀಚರ್ ಅವರಿಬ್ಬರಿಗೆ ಎರಡು ಪ್ರಾಜೆಕ್ಟ್ ಒಪ್ಪಿಸಿ ಆಕೆಯನ್ನು ಆ ಮತ್ತೊಬ್ಬ ಹುಡುಗಿಯ ಜೊತೆ ಮಾಡಿದರು. ತನಿಖಾಧಿಕಾರಿಯೊಂದಿಗೆ ನಾಯಕ ಮತ್ತು ಏಜೆಂಟ್ ಸಹ ನಿರಾಸೆಗೊಂಡರು ಮತ್ತು ಆಕೆಯನ್ನು ಸಂತೈಸಲು ಪ್ರಯತ್ನಿಸಿದರು.

### ಪಾಠ

**ಮತ್ತಾಯ 26:36-39,47-54 ಓದಿರಿ.**

ಯೇಸು ಕ್ರಿಸ್ತನು ಬಹಳವಾಗಿ ನಿರಾಸೆಗೊಂಡಿದ್ದನು ಯಾಕಂದರೆ ಮುಂದಿನ ಕೆಲವು ತಾಸುಗಳಲ್ಲಿ ತನಗೇ ಏನೆಲ್ಲಾ ಸಂಭವಿಸುವದೆಂದು ಆತನು ಚೆನ್ನಾಗಿ ತಿಳಿದಿದ್ದನು. ಮೊದಲನೆಯದಾಗಿ, ಯೇಸು ಕ್ರಿಸ್ತನು ತಂದೆಯಾದ ದೇವರನ್ನು ಪ್ರಾರ್ಥನೆಯ ಮೂಲಕ ಆತುಕೊಂಡನು. ನಮಗೆ ಚಿಂತೆ ಮತ್ತು ಬೇಸರ ಎದುರಾಗುವಾಗ ಏನು ಮಾಡಬೇಕು ಎಂಬದಕ್ಕೆ ಇದು ಸೂಕ್ತವಾದ ಉದಾಹರಣೆಯಾಗಿದೆ! ವೇದನೆಗಳು ಎದುರಾಗುವ ಸಮಯಗಳಲ್ಲಿಯೂ ದೇವರ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಕೊಟ್ಟು, ದೇವರು ತನ್ನ ಮನಸ್ಸಿನಲ್ಲಿ ನಮಗಾಗಿ ಮತ್ತು ನಮ್ಮ ಸುತ್ತಮುತ್ತಲಿನಲ್ಲಿರುವರಿಗೆ ಹಿತವಾದ ಆಲೋಚನೆಗಳನ್ನು ಇಟ್ಟುಕೊಂಡಿದ್ದಾನೆ ಎಂಬದನ್ನು ತಿಳಿದು ಪರಿಸ್ಥಿತಿಗಳನ್ನು ಬದಲಾಯಿಸುವಂತೆ ದೇವರನ್ನು ಬೇಡಿಕೊಳ್ಳಬೇಕು.

ನಂತರ ತನ್ನ ಆಪ್ತ ಮಿತ್ರನಾಗಲು ದೇವರು ಆದುಕೊಂಡವರಲ್ಲಿ ಒಬ್ಬನಾದ ಯೂದನು, ಯೇಸು ಕ್ರಿಸ್ತನಿಗೆ ತೊಂದರೆ ಕೊಡಲು ಬಯಸುತ್ತಿದ್ದವರನ್ನು ನೇರವಾಗಿ ಆತನ ಬಳಿಗೆ ಕರೆದುಕೊಂಡು ಬಂದನು. ಇದು ಉನ್ನತ ಮಟ್ಟದ ಅಲ್ಲಗಳೆಯುವಿಕೆಯಾಗಿದೆ ಹಾಗೂ ಯೇಸು ಕ್ರಿಸ್ತನು ಮೊದಲೇ ದುಃಖದಲ್ಲಿ ಇದ್ದ ಕಾರಣ ಆತನಿಗೆ ಇದರಿಂದ ಮತ್ತಷ್ಟು ವೇದನೆ ಎದುರಾಯಿತು.

ಆದರೆ ಇಂಥ ಘೋರವಾದ ಸಮಯದಲ್ಲಿಯೂ, ಯೇಸು ಕ್ರಿಸ್ತನು ಯೂದನನ್ನು “ಸ್ನೇಹಿತನೇ” ಎಂದು ಕರೆದನು ಮತ್ತು

ಯೇಸು ಕ್ರಿಸ್ತನನ್ನು ಬಂಧಿಸಲು ಬಂದವರಲ್ಲಿ ಒಬ್ಬನಿಗೆ ಗಾಯವಾದಾಗಲೂ, ಯೇಸು ಕ್ರಿಸ್ತನು ಜಗಳವನ್ನು ನಿಲ್ಲಿಸಿದನು ಮತ್ತು ಗಾಯಗೊಂಡವನನ್ನು ಗುಣಪಡಿಸಿದನು.

ಈ ಕಥೆಯು ಯೇಸು ಕ್ರಿಸ್ತನ ಹೃದಯವನ್ನು ಸ್ಪಷ್ಟವಾಗಿ ಪ್ರಕಟಪಡಿಸುತ್ತದೆ. ಯೇಸು ಕ್ರಿಸ್ತನು ಬಹಳವಾದ ವೇದನೆಯಲ್ಲಿದ್ದ ಸಮಯದಲ್ಲಿಯೂ, ಕನಿಕರವುಳ್ಳವನಾಗಿ ನಡೆದುಕೊಂಡನು ಮತ್ತು ನಮ್ಮೆಲ್ಲರ ಹಾಗೂ ಆತನಿಗೆ ತೊಂದರೆ ಮಾಡಲು ಪ್ರಯತ್ನಿಸುವವರ ಮೇಲೆಯೂ ಆತನಿಗಿರುವ ಪ್ರೀತಿಯನ್ನು ವ್ಯಕ್ತಪಡಿಸಿದನು.

### ಕಂಠಪಾಠ ವಚನ

ಲೂಕ 6:27 "ನನ್ನನ್ನು ಆಲಿಸುತ್ತಿರುವವರೇ, ನನ್ನ ಮಾತನ್ನು ಕೇಳಿರಿ: 'ನಿಮ್ಮ ಶತ್ರುಗಳನ್ನು ಪ್ರೀತಿಸಿರಿ, ನಿಮ್ಮನ್ನು ದ್ವೇಷಿಸುವವರನ್ನು ಸತ್ಕರಿಸಿರಿ."

### ನಾಟಕ (ಭಾಗ 2)

ಅವರು ಹಿಂದಿರುಗಿ ಬಂದ ನಂತರ, ತಾವು ಕಂಡ ವಿಷಯಗಳು, ತನ್ನನ್ನು ಬಂಧಿಸಲು ಬಂದವರೊಂದಿಗೆ ಯೇಸು ಕ್ರಿಸ್ತನು ಕನಿಕರದಿಂದ ನಡೆದುಕೊಂಡನ್ನು ಎಲ್ಲವುಗಳನ್ನು ಚರ್ಚಿಸಿದರು. ತನಿಖಾಧಿಕಾರಿಯು ಶಾಲೆಯಲ್ಲಿರುವ ಒಬ್ಬ ಹುಡುಗಿಯೊಂದಿಗೆ ತನ್ನ ಪರಿಸ್ಥಿತಿಯ ಬಗ್ಗೆ ಆಲೋಚಿಸಿದಳು ಮತ್ತು ಎರಡೂ ಏಕರೀತಿಯಾಗಿದೆ ಎಂದು ತಿಳಿದುಕೊಂಡಳು. ಹುಡುಗಿಯು ಮಾಡಿರುವ ಹೋಮ್ ವರ್ಕ್‌ನಲ್ಲಿ ಕೆಲವು ಉತ್ತರ ತಪ್ಪಾಗಿರುವದನ್ನು ತಾನು ನೋಡಿರುವದಾಗಿ ಮತ್ತು ಆಕೆಗೆ ಸಹಾಯ ಮಾಡಲು ಮುಂದಾಗದೆ, ಕಡಿಮೆ ಅಂಕಗಳು ಆಕೆಗೆ ಸಿಗಲಿ ಎಂದು ಬಯಸಿದ್ದಾಗಿ ಹೇಳಿದಳು. ಆದರೆ ಈಗ ತನಿಖಾಧಿಕಾರಿಗೆ ಆಕೆ ತೊಂದರೆ ಕೊಟ್ಟಿದ್ದರೂ ಆಕೆಗೆ ಸಹಾಯ ಮಾಡಲು ಬಯಸುತ್ತಿರುವದಾಗಿ ಹೇಳಿದಳು. ಇದು ಖಂಡಿತವಾಗಿಯೂ ಕಷ್ಟದ ಸಂಗತಿಯಾಗಿದೆ. ಆದರೆ ಯೇಸು ಕ್ರಿಸ್ತನ ಸಹಾಯದೊಂದಿಗೆ ಆಕೆ ಅಸಾಧ್ಯವಾದವುಗಳನ್ನೂ ಮಾಡಬಹುದು ಎಂದು ತಿಳಿದು, ಆ ಹುಡುಗಿಗೆ ಕರುಣೆ ತೋರಲು ಸಹಾಯ ಮಾಡುವಂತೆ ತಂಡದವರು ಆಕೆಗಾಗಿ ಪ್ರಾರ್ಥನೆ ಮಾಡಲು ತೀರ್ಮಾನಿಸಿದರು.

### ನ್ಯಾಯ

ನಿಮ್ಮ ಸ್ನೇಹಿತರಲ್ಲಿ ಯಾರಾದರೂ ನಿಮ್ಮ ಬಗ್ಗೆ ಇತರರ ಬಗ್ಗೆ ಕೆಟ್ಟದಾಗಿ ಹೇಳಿರುವದು ನಿಮಗೆ ಎಂದಾದರು ಗೊತ್ತಾಗಿದೆಯೇ? ಇದು ಅಲ್ಲಗಳೆಯುವಿಕೆಯಾಗಿದೆ ಯಾಕಂದರೆ ಇದು ತಪ್ಪು! ನಾವು ಯಾವಾಗಲೂ ಇತರರ ಬಗ್ಗೆ ಒಳ್ಳೆಯ ವಿಷಯಗಳನ್ನೇ ಹೇಳುವವರಾಗಿರೋಣ.

ಜೀವನ ಚರಿತ್ರೆ (ಭೌತಚಿಕಿತ್ಸಕ)

ಭೌತಚಿಕಿತ್ಸೆಯು ರೋಗ ಪರೀಕ್ಷೆಯಲ್ಲಿ ಆರೋಗ್ಯಕರ ವೃತ್ತಿಯಾಗಿದೆ, ವಿವಿಧ ಬಗೆಯ ರೋಗ ಲಕ್ಷಣಗಳಿಗೆ (ಅಂದರೆ ಕೆಲವು ಬೇನೆ ಮತ್ತು ಗತಿಶೀಲತೆಗೆ ಸಂಬಂಧಿಸಿದ ಗುಣಗಳು) ಚಿಕಿತ್ಸೆ ಕೊಡುವದು ಮತ್ತು ತಡೆಗಟ್ಟುವದು ಇದರ ಕಾರ್ಯವಾಗಿದ್ದು ಔಷಧಿಗಳ ಅವಶ್ಯಕತೆಯಿಲ್ಲದೆ ವೇದನೆಗೆ ಒಳಗಾಗಿರುವ ಭಾಗಗಳು ಚೇತರಿಸಿಕೊಳ್ಳುವದು ಮಾಡುವದು ಇದರ ಪ್ರಮುಖ ಗುರಿಯಾಗಿದೆ.


ಜವಾಬ್ದಾರಿಕೆಗಳು: ಡಾಕ್ಟರ್ ಅಥವಾ ನರ್ಸ್ ರೀತಿಯಲ್ಲಿ, ರೋಗಿಗಳ ಮೇಲೆ ಇವರಿಗೂ ದಯೆ ಇರಬೇಕು ಮತ್ತು

ಉನ್ನತವಾದ ಸಮರ್ಪಣೆ ಇರಬೇಕು. ಭೌತಚಿಕಿತ್ಸಕನು ಮಸಾಜು ಮಾಡುವಾತನಲ್ಲ, ಬದಲಾಗಿ ವಿಶ್ವವಿದ್ಯಾಲಯದಿಂದ ತರಬೇತಿ ಪಡೆದಿರುತ್ತಾನೆ ಮತ್ತು ಶಾಖ, ನೀರಿನ ಚಿಕಿತ್ಸೆ ಅಥವಾ ಶಾರೀರಿಕ ಪುನರ್ವಸತಿಯ ತಂತ್ರಗಳ ಮೂಲಕ ಕಾಯಿಲೆಗಳಿಗೆ ಚಿಕಿತ್ಸೆ ಕೊಡಲು ಮತ್ತು ಅವುಗಳನ್ನು ತಡೆಯಲು ಪ್ರಯತ್ನಿಸುತ್ತಾನೆ.

ಅವಕಾಶಗಳು: ಕ್ರೈಸ್ತೀಯ ಭೌತಚಿಕಿತ್ಸಕನು ರೋಗಿಗಳನ್ನು ಪ್ರೋತ್ಸಾಹಪಡಿಸುತ್ತಾನೆ, ವೈದ್ಯರೊಂದಿಗೆ ಮತ್ತು ಇತರೆ ವೈದ್ಯಕೀಯ ಸಿಬ್ಬಂದಿಗಳೊಂದಿಗೆ ಉತ್ತಮವಾಗಿ ಕೆಲಸ ಮಾಡುತ್ತಾನೆ ಹಾಗೂ ಚಿಕಿತ್ಸೆಗಳು ಮತ್ತು ವಿಧಾನಗಳ ವಿಷಯದಲ್ಲಿ ನಮಗೆ ಸೂಕ್ತವಾದ ಮಾಹಿತಿಗಳನ್ನು ಕೊಡುತ್ತಾ ಇರುತ್ತಾನೆ. ಭೌತಚಿಕಿತ್ಸಕನು ಅವಶ್ಯಕತೆಯಲ್ಲಿರುವ ಬಹುತೇಕ ರೋಗಿಗಳ ಸಂಪರ್ಕದಲ್ಲಿ ಇರುವದರಿಂದ, ಸರಳವಾಗಿ ಅವರಿಗೆ ಸಲಹೆಗಳನ್ನು ಕೊಡುವ ಮತ್ತು ಕುಟುಂಬ ಹಾಗೂ ಸ್ನೇಹಿತರಿಗೆ ಸಹಾಯ ಮಾಡುವ ದೊಡ್ಡ ಅವಕಾಶವನ್ನು ಹೊಂದಿರುತ್ತಾನೆ.

## ಪ್ರಶ್ನೆಗಳು ಮತ್ತು ಉತ್ತರಗಳು

1. ದೇವರು ನನ್ನನ್ನು ಕೆಟ್ಟ ಕಾರ್ಯಗಳಿಂದ ಬಿಡಿಸಲು ಶಕ್ತನಾಗಿದ್ದಾನೆಯೇ?



ಖಂಡಿತವಾಗಿಯೂ, ಆತನು ನಮಗೆ ಉತ್ತಮವಾದದ್ದನ್ನು ಕೊಡಲು ಬಯಸುತ್ತಾನೆ; ನಾವೆಲ್ಲರೂ ವಿವಿಧ ವಿಧಾನಗಳನ್ನು ಹಾದುಹೋಗುತ್ತೇವೆ ಮತ್ತು ಕೆಲವೊಮ್ಮೆ ದೇವರು ನಮ್ಮ ಜೀವಿತಗಳಿಗೆ ನೇಮಿಸಿರುವವುಗಳನ್ನು ಸಾಧಿಸುವಾಗ “ಕೆಟ್ಟ ಕಾರ್ಯಗಳು” ಎದುರಾಗುತ್ತವೆ. ನಕಾರಾತ್ಮಕ ಅನುಭವ ಎದುರಾದರೆ, ಹೀಗೆ ಯಾಕೆ ಆಯಿತು ಎಂಬದನ್ನು ಅರ್ಥಮಾಡಿಕೊಳ್ಳಲು ಬಹಳ ಕಷ್ಟವಾಗುತ್ತದೆ. ಒಂದುವೇಳೆ ನಾವು 'ಯಾಕೆ' ಆದ್ಯತೆಯನ್ನು ಕಳೆದುಕೊಂಡಿದ್ದೇವೆ ಎಂದು ಪ್ರಶ್ನಿಸಿಕೊಳ್ಳುವದು ಉತ್ತಮವಾಗಿರುತ್ತದೆ. ಒಳ್ಳೆದು ಮತ್ತು ಕೆಟ್ಟದು ಈ ಲೋಕದಲ್ಲಿ ನಡೆಯುತ್ತಲೇ ಇರುತ್ತದೆ. ಶಿಲುಬೆಗೆ ಜಡಿಯಲ್ಪಡುವ ಮೊದಲೇ ಶ್ರಮೆಗಳನ್ನು ತಪ್ಪಿಸಲು ಯೇಸು ಕ್ರಿಸ್ತನಿಂದಲೂ ಆಗಲಿಲ್ಲ. ಆತನ ವೈಯಕ್ತಿಕ ವಿಧಾನಗಳಲ್ಲಿ ಮುಂದಿನ ಹೆಜ್ಜೆ ಇಡಲು ಆತನು ಹಾಗೆಯೇ ಜೀವಿಸಬೇಕಾಯಿತು. ದೇವರು ನಮಗಾಗಿ ಇಟ್ಟಿರುವ ಜೀವಿತದಲ್ಲಿ ಮುಂದೆ ಸಾಗಬೇಕಾದರೆ ನಾವೂ ಇವುಗಳನ್ನು ಅನುಸರಿಸಬೇಕು.

2. ಅಲ್ಲಗಳೆಯುವಿಕೆಯನ್ನು ಕ್ಷಮಿಸುವದು ಕಷ್ಟ. ನಾವು ಅದನ್ನು ಹೇಗೆ ಕ್ಷಮಿಸಬಹುದು?

ಅದರಿಂದ ನಮ್ಮ ಮೇಲೆ ಎಂಥಾ ಪ್ರಭಾವಗಳು ಎದುರಾಗುತ್ತವೆ ಎಂಬದರ ಮೇಲೆ ಅದು ಆಧಾರವಾಗಿರುತ್ತದೆ, ಯೇಸು ಕ್ರಿಸ್ತನು ತನಗೆ ಹತ್ತಿರವಾಗಿದ್ದವನಿಂದಲೇ ಅಲ್ಲಗಳೆಯುವಿಕೆಯನ್ನು ಅನುಭವಿಸಿದನು; ಅವನು ಯಾವಾಗಲೂ ಆತನ ಜೊತೆಯಲ್ಲಿಯೇ ಇರುತ್ತಿದ್ದನು. ಆದರೆ ಅಲ್ಲಗಳೆಯುವಿಕೆಯ ಸಮಯದಲ್ಲಿಯೂ ಯೇಸು ಕ್ರಿಸ್ತನಿಗೆ ಯೂದನ ಮೇಲೆ ಕೋಪವಾಗಲಿ ದ್ವೇಷವಾಗಲಿ ಇರಲಿಲ್ಲ. ಆ ಪರಿಸ್ಥಿತಿಯ ಪರಿಣಾಮಗಳು ನಮ್ಮೆಲ್ಲರ ಹಿತಕ್ಕಾಗಿ ಆಗಿದೆ ಎಂಬದನ್ನು ಆತನು ಬಲ್ಲವನಾಗಿದ್ದನು. ಜನರ ಹೃದಯಗಳಲ್ಲಿ ಏನಿದೆ ಎಂಬದು ಯೇಸು ಕ್ರಿಸ್ತನಿಗೆ ಚೆನ್ನಾಗಿ ತಿಳಿದಿತ್ತು. **(ಯೋಹಾನ 2:26)** ಅದರಲ್ಲಿ ಅಲ್ಲಗಳೆಯುವಿಕೆಯೂ ಸೇರಿತ್ತು. ಅಲ್ಲಗಳೆಯುವವನನ್ನು ಕ್ಷಮಿಸುವ ಸಾಧ್ಯತೆಯೂ ಇದೆ ಎಂಬದನ್ನು ಸಹ ನಾವು ತಿಳಿದುಕೊಂಡಿರಬೇಕು.

3.  ನಾನು ನನ್ನ ಹೃದಯವನ್ನ ವಾಸಿಮಾಡಿಕೊಳ್ಳುವದು ಹೇಗೆ?

**ವಾಸಿಮಾಡಿಕೊಳ್ಳಬಹುದು, ಆದರೆ ಅನೇಕ ಸಲ ಗಾಯಗೊಂಡಿದ್ದರೆ ನಮ್ಮ ಹೃದಯವನ್ನು ವಾಸಿ ಮಾಡಿಕೊಳ್ಳಲು ಆಗುವದಿಲ್ಲ. ನಾವು ಮಾಡುವ ಕ್ರಿಯೆಗಳು ಅಥವಾ ಮಾಡದೆ ನಿಲ್ಲಿಸಿರುವ ಕ್ರಿಯೆಗಳು ನಮ್ಮ ಹೃದಯ ಹೇಗಿದೆ ಎಂಬದನ್ನು ತೋರಿಸುತ್ತದೆ.**

**ಯೇಸು ಕ್ರಿಸ್ತನನ್ನು ಹಿಡಿದುಕೊಟ್ಟಾಗ, ಆತನಿಗೆ ನಿರಾಸೆಯಾಯಿತು ಎಂಬದರಲ್ಲಿ ಯಾವುದೇ ಸಂದೇಹವಿಲ್ಲ, ಅದರೆ ಅದೇ ಕ್ಷಣದಲ್ಲಿ ಆತನು ದೀನತೆಯುಳ್ಳವನಾಗಿದ್ದನು ಮತ್ತು ತನ್ನನ್ನು ಹಿಡಿಯಲು ಬಂದಿದ್ದ ಸಿಪಾಯಿಗಳಲ್ಲಿ ಒಬ್ಬನಿಗೆ ಆತನು ಕರುಣೆಯನ್ನು ತೋರಿದನು. ಪೇತ್ರನು ಕತ್ತರಿಸಿದ ಕಿವಿಯನ್ನು ಅವನು ಮತ್ತೆ ಜೋಡಿಸಿದನು ಮತ್ತು ಗುಣಪಡಿಸಿದನು. ನಾವೂ ಇದೇ ರೀತಿಯಲ್ಲಿ ನಡೆದುಕೊಳ್ಳುತ್ತಾ ಇದ್ದೇವು ಎಂದು ದೃಢವಾಗಿ ಹೇಳಲು ನನ್ನಿಂದ ಆಗುವದಿಲ್ಲ. ಆತನು ತನ್ನ ಹೃದಯ ಘಾಸಿಗೊಂಡಿರಲಿಲ್ಲ ಎಂಬದನ್ನು ಆತನು ಇಲ್ಲಿ ತೋರಿಸಿದನು.**

## ಒಗಟಿನ ಉತ್ತರಗಳು

**ನಿಮ್ಮ ನಂಬಿಕೆಯ ಆಧಾರದಲ್ಲಿ ಪ್ರಶ್ನೆಗಳಿಗೆ ಉತ್ತರಿಸಿರಿ.**

1 – ನಿಮ್ಮ ಪ್ರಿಯ ಸ್ನೇಹಿತನ ಹೆಸರು ಏನು? **ಜಾಸ್ಮಿನ್**

2 – ಒಂದುವೇಳೆ ನಿಮ್ಮ ಸ್ನೇಹಿತನೇ ನಿಮ್ಮನ್ನು ಹಿಡಿದುಕೊಟ್ಟರೆ ನೀವು ಏನು ಮಾಡುವಿರಿ? **ನನಗೆ ಬಹಳ ದುಃಖವಾಗುತ್ತಾ ಇದೆ**

3 – ಒಂದುವೇಳೆ ನಿಮ್ಮ ಸ್ನೇಹಿತನೇ ನಿಮ್ಮನ್ನು ಹಣಕ್ಕೆ ಮಾರಿದರೆ ಅಥವಾ ನಿಮ್ಮ ವೈಯಕ್ತಿಕ ವಿಷಯವನ್ನು ಇತರರಿಗೆ ಹೇಳಿದರೆ ನೀವು ಏನು ಮಾಡುವಿರಿ? **ನನ್ನನ್ನು ಎಲ್ಲರೂ ಕೈಬಿಟ್ಟಿರುವಂತೆ ಮತ್ತು ವಂಚಿಸಿರುವಂತೆ ಅನ್ನಿಸುತ್ತಾ ಇದೆ**

4 – ಯೇಸು ಕ್ರಿಸ್ತನು ಸಿಪಾಯಿಯ ಕಿವಿಯನ್ನು ಯಾಕೆ ಗುಣಪಡಿಸಿದನು ಎಂದು ನಿಮಗೆ ಅನ್ನಿಸುತ್ತದೆ?
**ಯಾಕಂದರೆ ಇವೆಲ್ಲವುಗಳ ನಡುವೆಯೂ, ಯೇಸು ಕ್ರಿಸ್ತನು ಎಲ್ಲರಿಗೂ ನಿರಂತರವಾದ ಪ್ರೀತಿ ಮತ್ತು ಸ್ನೇಹವನ್ನು ತೋರಿಸಿದನು**

5 – ಯೇಸು ಕ್ರಿಸ್ತನು ತನ್ನನ್ನು ಹಿಡಿದುಕೊಟ್ಟವನನ್ನೂ ಕ್ಷಮಿಸಿದಂತೆ ನೀವೂ ಕ್ಷಮಿಸುವಿರೋ, ಯಾಕೆ?
**ಹೌದು, ಖಂಡಿತವಾಗಿಯೂ ಯೇಸು ಕ್ರಿಸ್ತನು ನನ್ನನ್ನು ಕ್ಷಮಿಸಿದ್ದಾನೆ. ನಾನು ಯಾಕೆ ಕ್ಷಮಿಸುತ್ತಾ ಇಲ್ಲ?**

6 – ನೀವು ಯಾವಾಗ ಪ್ರಾರ್ಥನೆಮಾಡಬೇಕು? **ಯಾವುದೇ ಸಮಯದಲ್ಲಾದರೂ, ಒಳ್ಳೆಯದಾಗಲಿ ಅಥವಾ ಕೆಟ್ಟದಾಗಲಿ ನಮಗೆ ಸಂಭವಿಸುತ್ತವೆ**


### ಪದ ಹುಡುಕುವದು

| | | | | | | | | |
|---|---|---|---|---|---|---|---|---|
| ಯೇ | ಕೇ | ತ್ತ | ಯ | ಕೊಂ | ವ್ಯ | ರಿ | ಗ | ಳು |
| ಸು | ಕ್ರಿ | ಳಿ | ಗುಂ | ಲಾ | ನಿ | ಯೇ | ಡಿ | ಸಂ |
| ವಿ | ಸ್ತ | ಳ್ಳೇ | ಸಿ | ಸ್ವಾ | ಸ್ಥ | ಸು | ಹೃ | ಶೋ |
| ನು | ಶ್ವಾ | ಒ | ಪಿ | ಕೊಂ | ಒ | ಕ್ರಿ | ಹೃ | ಧ |
| ಡ | ಹೃ | ಸ | ರಿ | ಸ್ನೇ | ಡ | ಸ್ತ | ಸ್ವಾ | ತೆ |
| ಯೂ | ದ | ತ್ತ | ಫಾ | ಹಿ | ನೆ | ನು | ತ್ಯ | ಹಿ |
| ಸಂ | ಯ | ಒ | ಳ್ಳೇ | ತ | ನ | ನಿ | ಸ್ಥ | ಪಿ |
| ರಿ | ಶೋ | ಡಿ | ನ | ತ | ಷ್ಟ | ಸ್ವ | ಚಿ | ತ್ತ |
| ಕೇ | ಳಿ | ಧ | ಳ್ಳೇ | ಸ್ತ | ರಿ | ಸ್ಥ | ಯ | ಳ್ಳೇ |
| ಸಿ | ಕೊಂ | ಒ | ನೆ | ಸ್ವ | ಷ್ಟ | ತೆ | ಕೊಂ | ನ |



## ಆಟ

**ನೀನು ಯಾರು?**




ಕೋಣೆಯೊಳಗಿನಿಂದ ಹೊರಬರುವಂತೆ ಸ್ವ ಇಚ್ಛೆಯಿಂದ ಕೆಲಸ ಮಾಡುವವರಿಗೆ ಹೇಳಿರಿ. ಸ್ವ ಇಚ್ಛೆಯಿಂದ ಕೆಲಸ ಮಾಡುವವನು ಹೊರಗೆ ಇರುವಾಗ, ಭಾಗವಹಿಸುತ್ತಿರುವ ಇತರರು ಆತನಿಗಾಗಿ/ಆಕೆಗಾಗಿ ಒಂದು ವೃತ್ತಿಯನ್ನು ಆಯ್ಕೆ ಮಾಡಬೇಕು. ತರಗತಿಯ ಪಾಠಗಳಲ್ಲಿ ನಾವು ನೋಡಿರುವ ಜೀವನ ಚರಿತ್ರೆಗಳ ಸ್ವಭಾವಗಳಲ್ಲಿ ಅದು ಒಂದಾಗಿರಬಹುದು. ಸ್ವ ಇಚ್ಛೆಯಿಂದ ಕೆಲಸ ಮಾಡುವವನು ಹಿಂದಿರುಗಿ ಬಂದಾಗ, ಭಾಗವಹಿಸುವವರು ಆ ವ್ಯಕ್ತಿಯ ಚಟುವಟಿಕೆಗಳನ್ನು ಮಾಡಿ ತೋರಿಸಬೇಕು. ಸ್ವ ಇಚ್ಛೆಯಿಂದ ಕೆಲಸ ಮಾಡುವವನು ತನಗಾಗಿ ಆಯ್ಕೆ ಮಾಡಲಾಗಿರುವ ವೃತ್ತಿಯನ್ನು ನೋಡಿ ಕಂಡು ಹಿಡಿಯಬೇಕು.




## ಹೋಮ್ ವರ್ಕ್

ಈ ವಾರದಲ್ಲಿ ಒಂದುವೇಳೆ ಯಾರಾದರೂ ನಿಮ್ಮನ್ನು ಅನ್ಯಾಯವಾಗಿ ದೂಷಿಸಿದರೆ, ನಿಮಗೆ ಮೋಸ ಮಾಡಿದರೆ ಅಥವಾ ಬೈದರೆ, ಅವರೊಂದಿಗೆ ಜಗಳ ಮಾಡಬೇಡಿರಿ. ಸ್ಥಿರವಾಗಿದ್ದು ಅವರಿಗಾಗಿ ಪ್ರಾರ್ಥನೆ ಮಾಡಿರಿ ಮತ್ತು ನಿಮಗೆ ಸಮಾಧಾನ ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ. ನಿಮ್ಮ ಅನಿಸಿಕೆಗಳನ್ನು ನಿಮ್ಮ ಸಂಡೇ ಸ್ಕೂಲ್ ಟೀಚರ್ ಹತ್ತಿರ ಹಂಚಿಕೊಳ್ಳಿರಿ.

# ಅನ್ಯಾಯ! 08

## ಯೇಸು ಕ್ರಿಸ್ತನ ವಿಚಾರಣೆ: ಮಾರ್ಕ 14:57-65,15:1-15



### ನಾಟಕ (ಭಾಗ 1)

ಏಜೆಂಟ್ ಇಂದು ಬೇಸರದಲ್ಲಿದ್ದಾನೆ. ಅವನು ತನ್ನ ತಂಡದವರಿಗೆ ಶಾಲೆಯವರು ಸಾಕರ್ ಬಾಲ್ ತೆಗೆದುಕೊಂಡಿದ್ದಾರೆ ಎಂದು ಹೇಳಿದರೂ, ನೀನೇ ತೆಗೆದುಕೊಂಡಿರುವೆ ಅದು ಅವರು ಆತನ ಮೇಲೆ ಆರೋಪ ಮಾಡುತ್ತಾ ಇದ್ದರು. ಅವನು ಖಂಡಿತವಾಗಿಯೂ ತೆಗೆದುಕೊಂಡಿರಲಿಲ್ಲ! ಅವನು ಕ್ರೈಸ್ತನು, ಆದ್ದರಿಂದ ಅವನೇ ತೆಗೆದುಕೊಂಡಿರಬಹುದು ಎಂದು ಯಾರೋ ಹೇಳಿದ್ದು ಅವನ ಕಿವಿಗೆ ಬಿದ್ದ ಕಾರಣ ಅವನಿಗೆ ಮತ್ತಷ್ಟು ಬೇಸರವಾಯಿತು. ಅವನು ತನ್ನ ಸ್ನೇಹಿತರಾದ ನಾಯಕ ಮತ್ತು ತನಿಖಾಧಿಕಾರಿಯ ಎದುರು ತನ್ನನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದನು. ನಾಯಕನು ಅವನ ಮಾತುಗಳನ್ನು ನಂಬಿದನು ಮತ್ತು ಅವರು ಹಿಂದಿನ ಸಮಯಕ್ಕೆ ಹೋಗುವ ಮೊದಲು ಅವನನ್ನು ಸಮಾಧಾನಪಡಿಸಿದನು.

### ಪಾಠ

**ಮಾರ್ಕ 14:55-65, 15:1-15**

ಯೇಸು ಕ್ರಿಸ್ತನಲ್ಲಿ ಯಾವ ಅಪರಾಧಗಳೂ ಇರಲಿಲ್ಲ. ಆತನ ವಿರುದ್ಧ ಹೇಳಿದ ಸುಳ್ಳುಗಳನ್ನು ಸಹ ಯಾರಿಂದಲು ನಂಬಲು ಆಗುವದಿಲ್ಲ. ಯೇಸು ಕ್ರಿಸ್ತನು ಅಂತಿಮವಾಗಿ ತಾನೇ ಮೆಸ್ಸೀಯನೆಂದು ಹೇಳುವ ಮೂಲಕ ತನ್ನ ಮೇಲೆ ಆರೋಪ ಮಾಡುತ್ತಿದ್ದವರಿಗೆ ಸಹಾಯ ಮಾಡಿದನು, ಇದಲ್ಲದೆ ಆತನು ಹೇಳಿದ್ದೇ ಸತ್ಯ ಎಂಬದನ್ನು ನಾವು ತಿಳಿದುಕೊಳ್ಳಬೇಕು. ಆತನಿಗೆ ಮರಣದಂಡನೆಗೆ ವಿಧಿಸಲು ಈ ಕಾರಣ ಸಾಕು ಧಾರ್ಮಿಕ ನಾಯಕರಿಗೆ ಸಾಕಾಗಿತ್ತು. ಯಾರನ್ನೂ ಕೊಲ್ಲುವ ಅಧಿಕಾರ ಅವರಿಗೆ ಇರಲಿಲ್ಲವಾದ್ದರಿಂದ, ರೋಮನ್ನರ ನಾಯಕನಾದ ಪಿಲಾತನ ಬಳಿಗೆ ಅವರು ಯೇಸು ಕ್ರಿಸ್ತನನ್ನು ಕಳುಹಿಸಿದರು, ಆದರೆ ಯೇಸು ಕ್ರಿಸ್ತನು ನಿರಪರಾಧಿ ಎಂದು ಪಿಲಾತನಿಗೆ ನಿಯಮಬದ್ಧವಾಗಿಯೇ ಗೊತ್ತಾಯಿತು. ಆದರೆ ಯೆಹೂದ್ಯರ ನಾಯಕರು ಯೇಸು ಕ್ರಿಸ್ತನ ಮರಣವನ್ನು ಬೇಡುವಂತೆ ಜನರ ಗುಂಪನ್ನು ಪ್ರೇರೇಪಿಸಿ ಕರೆದುಕೊಂಡು ಬಂದರು.

ಇವೆಲ್ಲವುಗಳು ನಡೆದರೂ, ಯೇಸು ಕ್ರಿಸ್ತನು ತನ್ನನ್ನು ಸಮರ್ಥಿಸಿಕೊಳ್ಳಲಿಲ್ಲ. ಬಹುಶಃ ಒಂದುವೇಳೆ ಆತನು ತನ್ನನ್ನು ಸಮರ್ಥಿಸಿಕೊಂಡಿದ್ದರೆ, ಆತನು ಕೊಲ್ಲಲ್ಪಡುತ್ತಾ ಇರಲಿಲ್ಲ. ನಾವು ರಕ್ಷಣೆ ಹೊಂದಬೇಕಾದರೆ ಈ ಕಾರ್ಯಗಳೆಲ್ಲವೂ ಸಂಭವಿಸಬೇಕು ಎಂಬದನ್ನು ಯೇಸು ಕ್ರಿಸ್ತನು ಬಲ್ಲವನಾಗಿದ್ದನು.

ಅಪರಾಧಿಗಳನ್ನು ಶಿಕ್ಷಿಸುವದು ನ್ಯಾಯವಾದದ್ದು ಮತ್ತು ಸರಿಯಾದದ್ದೂ ಆಗಿದೆ. ಆದರೆ ಯೇಸು ಕ್ರಿಸ್ತನು ಯಾವ ಪಾಪವನ್ನೂ ಮಾಡಲಿಲ್ಲ ಆದರೂ ಆತನನ್ನು ಘೋರವಾಗಿ ಶಿಕ್ಷಿಸಿದರು. ಆತನು ನಮಗಾಗಿ ಬೇಕೆಂದೇ ಘೋರವಾದ ಅನ್ಯಾಯವನ್ನು ಸಹಿಸಿಕೊಂಡನು!!

## ಕಂಠಪಾಠ ವಚನ

ಯೆಶಾಯ 53:9 "ಮಾಡಲಿಲ್ಲ ಆತ ಯಾವ ಪಾಪಕೃತ್ಯ ಅವನ ಬಾಯಲಿರಲಿಲ್ಲ ವಂಚನೆಯ ವಾಕ್ಯ ಹೂಣಿದರಾತನನು ಸತ್ತಮೇಲೆ ದುರುಳರ ಹಾಗೂ ದುಷ್ಕರ್ಮಿಗಳ ನಡುವೆ."

## ನಾಟಕ (ಭಾಗ 2)

ಅವರು ಹಿಂದಿರುಗಿ ಬಂದಾಗ, ಅವರು ಯೇಸು ಕ್ರಿಸ್ತನ ವಿಚಾರಣೆಯ ಬಗ್ಗೆ ಮತ್ತು ಆತನು ತನ್ನನ್ನು ಸಮರ್ಥಿಸಿಕೊಳ್ಳಲು ಒಂದು ಮಾತನ್ನೂ ಹೇಳದೆ ಇದ್ದದ್ದು ಹಾಗೂ ಮರಣದಂಡನೆ ವಿಧಿಸಲು ಅವರಿಗೆ ಅವಕಾಶ ಕೊಟ್ಟದ್ದರ ಬಗ್ಗೆ ಮಾತನಾಡುತ್ತಿದ್ದರು. ಅವರು ಮಾಡಿದ ಕಾರ್ಯ ಸರಿಯಲ್ಲ ಎಂದು ಏಜೆಂಟ್ ಹೇಳಿದನು. ಸಾರ್ವಭೌಮನಾಗಿರುವ ದೇವರು ಅಂತ್ಯದಲ್ಲಿ ನ್ಯಾಯವನ್ನು ಒದಗಿಸುವನು ಎಂದು ನಾಯಕ ಅವನನ್ನು ಪ್ರೋತ್ಸಾಹಪಡಿಸಿದನು. ಅವರು 1 ಪೇತ್ರ 2:23 ಓದಿದರು ಮತ್ತು ಯೇಸು ಕ್ರಿಸ್ತನು ನೀತಿವಂತನಾಗಿರುವ ತಂದೆಗೆ ತನ್ನನ್ನು ಹೇಗೆ ಒಪ್ಪಿಸಿದನು ಎಂಬದನ್ನು ತಿಳಿದುಕೊಂಡರು. ನಂತರ ಅವರು ಫಿಲಿಪ್ಪಿ 2:5-11 ಓದಿದರು ಮತ್ತು ಅಂತ್ಯದಲ್ಲಿ ಯೇಸು ಕ್ರಿಸ್ತನು ಎಲ್ಲರಿಗಿಂತ ಉನ್ನತವಾಗಿ ಹೇಗೆ ಘನ ಹೊಂದಿದನು ಎಂಬದನ್ನು ತಿಳಿದುಕೊಂಡರು. ಏಜೆಂಟ್ ಗೆ ಈಗ ಸಮಾಧಾನವಾಯಿತು, ಯಾಕಂದರೆ ದೇವರು ಎಲ್ಲವನ್ನು ನೋಡುತ್ತಾನೆ ಮತ್ತು ತಾನು ಬಾಲ್ ತೆಗೆದುಕೊಳ್ಳಲಿಲ್ಲವಾದ್ದರಿಂದ ಅಂತ್ಯದಲ್ಲಿ ತನಗೆ ನ್ಯಾಯ ದೊರಕಿಸುವನು ಎಂಬದನ್ನು ತಿಳಿದುಕೊಂಡನು.

## ನ್ಯಾಯ

ನಿಮ್ಮ ಮೇಲೆ ಯಾರಾದರೂ ಸುಳ್ಳು ಆರೋಪಗಳನ್ನು ಹೊರಿಸಿದ್ದಾರೆಯೇ? ಅದರಿಂದ ಬಹಳ ನೋವಾಗುತ್ತದೆ. ಯಾರ ಮೇಲೆಯೂ ಯಾವುದೇ ಆರೋಪಗಳನ್ನು ಮಾಡದಂತೆ ನಾವು ಎಚ್ಚರಿಕೆಯಿಂದ ಇರೋಣ.

## ಜೀವನ ಚರಿತ್ರೆ (ನ್ಯಾಯಧಿಪತಿ)

ನ್ಯಾಯಾಧಿಪತಿಯು ನ್ಯಾಯಾಲಯದಲ್ಲಿ ಉನ್ನತವಾದ ಅಧಿಕಾರವುಳ್ಳವನಾಗಿದ್ದಾನೆ. ಇಬ್ಬರ ನಡುವೆಯ ಜಗಳವನ್ನು ಆತನು ಬಗೆಹರಿಸುತ್ತಾನೆ ಅಥವಾ ವಿಚಾರಣೆಯ ಸಮಯದಲ್ಲಿ ತೋರಿಸಲಾಗುವ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ ಅಪರಾಧದ ಆರೋಪ ಹೊತ್ತಿರುವ ವ್ಯಕ್ತಿಯ ಸ್ಥಿತಿಯನ್ನು ನಿರ್ಧರಿಸುತ್ತಾನೆ.


ಜವಾಬ್ದಾರಿಕೆಗಳು: ನ್ಯಾಯವನ್ನು ಒದಗಿಸಲು, ನ್ಯಾಯಾಧಿಪತಿಗೆ ಕಾನೂನಿನ ಬಗ್ಗೆ ಆಳವಾದ ತಿಳುವಳಿಕೆ ಇರಬೇಕು ಯಾಕಂದರೆ ಕಾನೂನು ಕ್ರಮಗಳನ್ನು ಕೈಗೊಳ್ಳಲು ಅದು ಬಹಳ ಪ್ರಾಮುಖ್ಯವಾಗಿದೆ. ನ್ಯಾಯಾಧಿಪತಿಯು ಸಾಮಾನ್ಯ ಮಾನವನಾಗಿದ್ದಾನೆ ಆದ್ದರಿಂದ ತನ್ನ ತೀರ್ಪಿನಲ್ಲಿ ಆತನು ತಪ್ಪು ಮಾಡುವ ಸಾಧ್ಯತೆ ಬಹಳ ಇರುತ್ತದೆ.

ಅವಕಾಶಗಳು: ಕ್ರೈಸ್ತೀಯ ನ್ಯಾಯಾಧಿಪತಿಗೆ ಅನೇಕ ಜನರ ವಿಷಯದಲ್ಲಿ ತೀರ್ಪು ಮಾಡುವ ಮತ್ತು ಮೇಲ್ವಿಚಾರಣೆ ಮಾಡುವ ಅವಕಾಶ ಇರುತ್ತದೆ. ನ್ಯಾಯಾಲಯ ಪದ್ಧತಿ ಮಾತ್ರವಲ್ಲ ಬದಲಾಗಿ ಪೋಲೀಸ್ ಚಟುವಟಿಕೆಗಳು, ಶಾಲೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳ ಮೇಲೆ ಪ್ರಭಾವ ಬೀರುವ ಅವಕಾಶ ಅವರಿಗೆ ಇರುತ್ತದೆ. ಈ ವಿಷಯಗಳೆಲ್ಲವೂ ದೇವರಿಗೆ

ಬಹಳ ಪ್ರಾಮುಖ್ಯವಾಗಿವೆ, ಆದ್ದರಿಂದ ನ್ಯಾಯಾಧಿಪತಿಯು ಆತನ ಕಡೆಗೆ ಗಮನ ಹರಿಸುವಾಗ ಆತನು ತನ್ನ ಒಳ್ಳೆಯ ಕಾರ್ಯಗಳು ಪರಿಣಾಮಕಾರಿಯಾಗಿ ಮಾಡುತ್ತಾನೆ.

## ಪ್ರಶ್ನೆಗಳು ಮತ್ತು ಉತ್ತರಗಳು

1. ಆತ್ಮೀಕರಾಗಿ/ಧಾರ್ಮೀಕರಾಗಿ ಇರುವದು ಅಂದರೆ ಏನು?



ಅಕ್ಷರಾರ್ಥವಾಗಿ ಸತ್ಯವೇದದ ಮಾರ್ಗದರ್ಶನಗಳನ್ನು ಅನುಸರಿಸಲು ಬಯಸುವ ಜನರನ್ನು ಇದು ಸೂಚಿಸುತ್ತದೆ, ಈ ಕಥೆಯ ವಿಷಯಕ್ಕೆ ಬರುವದಾದರೆ; ಇತರರ ಮೇಲೆ ಆರೋಪ ಮಾಡಲು ಮಾತ್ರವೇ ಅವರು ತಮ್ಮ ತಿಳುವಳಿಕೆಯನ್ನು ಉಪಯೋಗಿಸಲು ಬಯಸಿದರು, ಆದರೆ ಅದೇ ರೀತಿಯಲ್ಲಿ ಅವರು ಆಜ್ಞೆಗಳನ್ನು ತಮ್ಮ ವೈಯಕ್ತಿಕ ಜೀವಿತಕ್ಕೆ ಅಳವಡಿಸಿಕೊಳ್ಳಲಿಲ್ಲ. ಸಹಜವಾಗಿ ನಾವು ಇದನ್ನೇ ಮಾಡುತ್ತೇವೆ, ಅಂದರೆ ನಮ್ಮಿಂದ ಮಾಡಲು ಆಗದೆ ಇರುವವುಗಳನ್ನು ಇತರರಿಂದ ಮಾಡಿಸುತ್ತೇವೆ.

2. ಅಪರಾಧಿಗಳಿಗೆ ಶಿಕ್ಷೆ ಆಗಲೇ ಬೇಕು ಅಲ್ಲವೇ?

ನಾವು ಸಹಜವಾಗಿ ನೋಡುವ ಪ್ರಕಾರ, ಪಾಪ ಮಾಡುವ ಪ್ರತಿಯೊಬ್ಬನಿಗೂ ಶಿಕ್ಷೆ ಆಗಲೇಬೇಕು. ಆದರೆ ಯೇಸು ಕ್ರಿಸ್ತನು ನಮ್ಮ ಆಲೋಚನೆಯ ರೀತಿಯನ್ನು ಬದಲಾಯಿಸಲು ಶಕ್ತನಾಗಿದ್ದಾನೆ. ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀಯನ್ನು ಅವರು ಆತನ ಬಳಿಗೆ ಕರೆದುಕೊಂಡು ಬಂದಾಗ, ಆಕೆ ಪಾಪ ಮಾಡುತ್ತಿರುವಾಗಲೇ ಸಿಕ್ಕಿಬಿದ್ದಿದ್ದ ಸ್ತ್ರೀಯ ಮೇಲೆ ಅಪರಾಧವನ್ನು ಹೊರಿಸಲಿಲ್ಲ (ಯೋಹಾನ 8:1-11). ಆಕೆಯ ಮೇಲೆ ಆರೋಪ ಮಾಡುತ್ತಿದ್ದವರಿಗೆ ಯೇಸು ಕ್ರಿಸ್ತನು ಹೇಳಿದ್ದೇನೆಂದರೆ, "ನಿಮ್ಮಲ್ಲಿ ಯಾರು ಪಾಪ ಮಾಡಿಲ್ಲವೋ, ಅವರೇ ಮೊದಲು ಆಕೆಯ ಮೇಲೆ ಕಲ್ಲನ್ನು ಎಸೆಯಲಿ." ಪಾಪ ಮಾಡಿದವರ ವಿಷಯದಲ್ಲಿ ನಾವು ಎಂದಿಗೂ ಒರಟಾಗಿ ನಡೆದುಕೊಳ್ಳಬಾರದು ಎಂದು ಇದು ನಮಗೆ ತೋರಿಸುತ್ತದೆ ಯಾಕಂದರೆ ನಾಳೆ ನಮಗೂ ಅದೇ ಪರಿಸ್ಥಿತಿ ಎದುರಾಗಬಹುದು.

3. ಯಾವುದಾದರು ವಿಷಯದಲ್ಲಿ ಅಪರಾಧಿಭಾವನೆಯು ನನ್ನನ್ನು ಕಾಡುವಾಗ ನಾನು ಏನು ಮಾಡಬೇಕು?


ನಾವು ಯಾವುದಾದರು ಕಾರ್ಯವನ್ನು ಸರಿಯಾಗಿ ಮಾಡಿಲ್ಲ ಎಂದು ನಮಗೆ ಅನ್ನಿಸಿದರೆ, ಆಗ ಅಪರಾಧಿಭಾವನೆ ನಮ್ಮನ್ನು ಕಾಡುತ್ತದೆ; ಅದು ಒಳ್ಳೆಯ ಭಾವನೆ ಎಂದು ನಾವು ಹೇಳಬಹುದು ಯಾಕಂದರೆ ನಾವು ತಪ್ಪು ಮಾಡಿದ್ದೇವೆ ಎಂದು ನಮಗೆ ಅರಿವಾಗುತ್ತಾ ಇದೆ. ನಾವು ಮಾಡಬೇಕಾಗಿರುವ ಕಾರ್ಯ ಏನೆಂದರೆ ಪರಿಸ್ಥಿತಿಯಿಂದ ಕಲಿಯಬೇಕು ಮತ್ತು ಭಿನ್ನವಾಗಿ ಕಾರ್ಯ ಮಾಡಲು ಶಕ್ತರಾಗಬೇಕು. ಮುಂದಿನ ಸಲ ಇಂಥದ್ದೇ ಏನಾದರು ಎದುರಾದರೆ, ಕ್ಷಮಾಪಣೆ ಕೇಳಿರಿ ಅಥವಾ ಹಾಳಾಗಿರುವದನ್ನು ಸರಿ ಮಾಡಿರಿ. 1 ಯೋಹಾನ ಓದಿರಿ.

## ಚಟುವಟಿಕೆಗಳಿಗೆ ಉತ್ತರಗಳು



### ಪದ ಹುಡುಕುವದು


| | | | | | | | |
|---|---|---|---|---|---|---|---|
| ಣ | ಅ | ನ್ಯಾ | ಯ | ಇ | ಸ್ವಾ | ಡು | ಮೋ |
| ಸ | ಮಾ | ಧಿ | ಇ | ದು | ತಂ | ಬೇ | ಸ |
| ಬೇ | ಮ | ವ | ಕಾ | ಳ್ಳ | ತ್ರ್ಯ | ಸಿ | ಮಾ |
| ಡಿ | ಳ್ಳ | ರ್ಧಿ | ಮ | ರ | ಣ | ಣ | ಡಿ |
| ಕೆ | ಕ್ಷ | ಪಾ | ಸಿ | ದು | ಕ್ಷ | ಪು | ದ |
| ಇ | ಶಿ | ಕ್ಷೆ | ಬೇ | ಕೊ | ಗುಂ | ಣಿ | ನು |
| ಡು | ವ್ಯೈ | ರಿ | ಗ | ರ | ಳ್ಳ | ತ | ತ್ರ್ಯ |
| ವ | ವ | ಬೇ | ನ | ಳು | ಲಾ | ವ | ಡು |
| ದು | ತ್ರ್ಯ | ಜ | ಇ | ಪಿ | ಪಾ | ವ | ದು |
| ಯ | ಧಾ | ರ್ಮಿ | ಕ | ರು | ಅ | ನ್ಯ | ಯ |



## ಆಟ

**ಹಲೋ ಹಲೋ**

ಭಾಗವಹಿಸುವವರು ಎದ್ದು ನಿಲ್ಲಬೇಕು ಮತ್ತು ವೃತ್ತವನ್ನು ಮಾಡಬೇಕು. ಒಬ್ಬ ವ್ಯಕ್ತಿ ವೃತ್ತದ ಸುತ್ತಲೂ ಹೊರಗೆ ನಡೆಯಬೇಕು ಮತ್ತು ಯಾರಾದರು ಒಬ್ಬರ ಭುಜವನ್ನು ಮುಟ್ಟಬೇಕು. ಆ ವ್ಯಕ್ತಿ ವಿರುದ್ಧ ದಿಕ್ಕಿನಲ್ಲಿ, ಇಬ್ಬರು ಮುಖಾಮುಖಿಯಾಗಿ ಎದುರಾಗುವ ತನಕ ವೃತ್ತದ ಸುತ್ತಲೂ ನಡೆಯಬೇಕು. ಅವರು ಹೆಸರು ಹೇಳಿ ಒಬ್ಬರನ್ನೊಬ್ಬರು ಮೂರು ವಂದಿಸಿಕೊಳ್ಳಬೇಕು. ನಂತರ ಇಬ್ಬರು ವೃತ್ತದ ಸುತ್ತಲು ವಿರುದ್ಧ ದಿಕ್ಕಿನಲ್ಲಿ ನಡೆಯಬೇಕು, ಅವರಿಗೆ ಖಾಲಿ ಸ್ಥಳ ಸಿಗುವ ತನಕ ನಡೆಯುತ್ತಲೇ ಇರಬೇಕು. ಸೋಲುವ ವ್ಯಕ್ತಿ ಮತ್ತೊಮ್ಮೆ ವೃತ್ತದ ಸುತ್ತಲು ನಡೆಯಬೇಕು ಮತ್ತು ಎಲ್ಲರಿಗೂ ಅವಕಾಶ ಸಿಗುವ ತನಕ ಆಟವನ್ನು ಮುಂದುವರೆಸಬೇಕು.



## ಹೋಮ್ ವರ್ಕ್




ಒಂದುವೇಳೆ ಈ ವಾರದಲ್ಲಿ ಯಾರಾದರು ಅನ್ಯಾಯವಾಗಿ ನಿಮ್ಮ ಮೇಲೆ ಆರೋಪ ಮಾಡಿದರೆ, ನಿಮ್ಮನ್ನು ಸಮರ್ಥಿಸಿಕೊಳ್ಳಬೇಡಿರಿ. ತಾನು ತಪ್ಪು ಮಾಡಿರುವದು ಆ ವ್ಯಕ್ತಿಗೆ ಗೊತ್ತಾಗುವಂತೆ ಮತ್ತು ಅವನು ಅದನ್ನು ಒಪ್ಪಿಕೊಳ್ಳುವಂತೆ ಮಾಡು ಎಂದು ದೇವರನ್ನು ಪ್ರಾರ್ಥಿಸಿರಿ. ಒಂದುವೇಳೆ ಅವನು ಈ ಕಾರ್ಯಗಳನ್ನು ಮಾಡದೆ ಹೋದರೆ ದೇವರು ತಾನೇ ತನ್ನ ಸಮಯದಲ್ಲಿ ಮಾಡುವನು.

# ಮರಣದಲ್ಲಿ ಜೀವ

09



**ಯೇಸು ಕ್ರಿಸ್ತನನ್ನು ಶಿಲುಬೆಗೆ ಜಡಿದರು: ಮತ್ತಾಯ 27:27-31,45-54**

ನಾಟಕ (ಭಾಗ 1)

ಏಜೆಂಟ್ ಪ್ರಶ್ನೆಯೊಂದಿಗೆ ಒಳಗೆ ಬಂದನು. ಅವನು ಕೋಪ ತಡೆದುಕೊಳ್ಳಲು ಆಗುತ್ತಾ ಇರಲಿಲ್ಲ, ತನ್ನ ಅಕ್ಕ ಏನಾದರೂ ಅವನಿಗೆ ತೊಂದರೆ ಕೊಟ್ಟರೆ ಕೂಡಲೇ ಅವಳ ಮೇಲೆ ಕೂಗಾಡುತ್ತಾ ಇದ್ದನು. ಇದಲ್ಲದೆ ತಾನು ರಕ್ಷಣೆಯ ಪ್ರಾರ್ಥನೆ ಮಾಡಿದ್ದೇನೋ ಇಲ್ಲವೋ ಎಂಬದನ್ನು ಮರೆತುಹೋಗಿದ್ದನು ಅಥವಾ ತಾನು ಸರಿಯಾದ ಪ್ರಾರ್ಥನೆ ಮಾಡಿದ್ದೇನೋ ಇಲ್ಲವೋ ಎಂದು ಬಹಳ ಚಿಂತಿಸುತ್ತಾ ಇದ್ದನು. ದೇವರು ನಿಜವಾಗಿಯೂ ನನ್ನ ಸ್ವರವನ್ನು ಕೇಳಿಸಿಕೊಂಡಿದ್ದಾನೆಯೇ? ಅವನು ತನ್ನ ಅಕ್ಕನ ಮೇಲೆ ಕೂಗಾಡಿದ ನಂತರ ಏನಾದರು ಕೆಟ್ಟದ್ದು ನಡೆದರೆ ಅದಕ್ಕೆ ಜವಾಬ್ದಾರಿ ಯಾರು? ನಾಯಕನು ಅವನನ್ನು ಸಂತೈಸಿ, ಅವನಿಗೆ ಹೇಳಿದ್ದೇನೆಂದರೆ ನೀನು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡದ್ದು ನನಗೆ ನೆನಪಿದೆ ಮತ್ತು ಯೇಸು ಕ್ರಿಸ್ತನು ಎಲ್ಲವುಗಳಿಗೆ ಅಂದರೆ ವರ್ತಮಾನ ಹಾಗೂ ಭವಿಷ್ಯತ್ ಕಾಲದ ಪಾಪಗಳಿಗೆ ಕ್ರಯವನ್ನು ಪಾವತಿಸಿದ್ದಾನೆ. ಏಜೆಂಟ್ ಗೆ ಪೂರ್ತಿಯಾಗಿ ಮನವರಿಕೆ ಆಗಲಿಲ್ಲ ಆದರೂ ಅವರು ಯೇಸು ಕ್ರಿಸ್ತನು ಶಿಲುಬೆಗೆ ಜಡಿಯಲ್ಪಟ್ಟದ್ದನ್ನು ನೋಡಲು ಹಿಂದಿನ ಕಾಲಕ್ಕೆ ಹೋದರು.

ಪಾಠ

ಸಿಪಾಯಿಗಳು ಯೇಸು ಕ್ರಿಸ್ತನನ್ನು ತಮಾಷೆ ಮಾಡಿದರು, ಬಹಳವಾಗಿ ಹೊಡೆದರು ಮತ್ತು ಆತನ ಕೈಕಾಲುಗಳಿಗೆ ಮೊಳೆ ಹೊಡೆದು ಶಿಲುಬೆಗೆ ಹಾಕಿದರು. ಶಿಲುಬೆಯ ಮೇಲಿನ ಮರಣ ಬಹಳ ನಿಧಾನವಾಗಿ ಬರುತ್ತಿತ್ತು, ತುಂಬಾ ವೇದನೆಯನ್ನು ಅನುಭವಿಸಬೇಕಾಗಿತ್ತು, ಅದು ಅತ್ಯಂತ ಘೋರವಾದ ಮರಣವಾಗಿತ್ತು. ಇದು ಯೋಚನೆ ಮಾಡುವದಕ್ಕಿಂತಲೂ ಹೆಚ್ಚು ಭಯಂಕರವಾದದ್ದಾಗಿತ್ತು. ಆದರೆ ಇದು ಬಹಳ ಪರಿಣಾಮಕಾರಿಯಾದ ಘಟನೆಯಾದ್ದರಿಂದ ಇಡೀ ಲೋಕವೇ ನಡುಗಿ ಹೋಯಿತು! ಆತ್ಮೀಕರಲ್ಲದವರು ಸಹ ಇದು ಪ್ರಾಮುಖ್ಯವಾಗಿರುವ ಆತ್ಮಕ ಘಟನೆ ಎಂಬದಾಗಿ ತಿಳಿದುಕೊಂಡರು ಮತ್ತು ಯೇಸು ಕ್ರಿಸ್ತನು ನಿಜವಾಗಿಯೂ ದೇವಕುಮಾರನು ಎಂಬದನ್ನು ಪ್ರಕಟಿಸಿದರು. ದೇವಾಲಯದ ಮಹಾ ಪರಿಶುದ್ಧ ಸ್ಥಳದೊಳಗಿದ್ದ ಪರದೆಯು ಹರಿದು ಹೋದದ್ದು, ಈಗ ನಾವು ತಂದೆಯಾದ ದೇವರ ಬಳಿಗೆ ನೇರವಾಗಿ ಹೋಗಬಹುದು ಎಂಬದಕ್ಕೆ ಸೂಚನೆಯಾಯಿತು. ನಮ್ಮ ಅಪರಾಧವು ನಮ್ಮನ್ನು ಇನ್ನೆಂದಿಗೂ ದೇವರಿಂದ ದೂರ ಇಡುವದಿಲ್ಲ ಯಾಕಂದರೆ ಆತನು ತನ್ನ ನೀತಿಯನ್ನು ನಮಗೆ ಉಚಿತ ವರವಾಗಿ ಕೊಟ್ಟಿದ್ದಾನೆ. ನಾವು ಇನ್ನೆಂದಿಗೂ ಕೈಬಿಡಲ್ಪಡುವದಿಲ್ಲ ಬದಲಾಗಿ ಆತನ ಮಗ ಹಾಗೂ ಮಗಳಾಗಿ ಎಂದೆಂದಿಗೂ ಆತನ ಕುಟುಂಬದಲ್ಲಿ ಇರಬಹುದು. ಇದಲ್ಲದೆ ನಾವು ಮರಣ ಅಥವಾ ವೈರಿ ಅಥವಾ ಬೇರೆ ಯಾವುದಕ್ಕೂ ಹೆದರಿಕೊಳ್ಳುವ ಅವಶ್ಯಕತೆಯಿಲ್ಲ ಯಾಕಂದರೆ ಆತನು ಒಂದೇ ಸಾರಿ ಮರಣವನ್ನು ಜಯಿಸಿದ್ದಾನೆ

ಹಾಗೂ ಆತನ ಕಟ್ಟಕಡೆಯ ಅಧಿಕಾರ ಮತ್ತು ಶಕ್ತಿಯನ್ನು ಹೊಂದುವ ಕೃಪೆಯನ್ನು ನಮಗೆ ಕೊಟ್ಟಿದ್ದಾನೆ.

ಇಬ್ರಿಯ ಪುಸ್ತಕವು ನಮಗೆ ಸ್ಪಷ್ಟವಾಗಿ ತಿಳಿಸುವದೇನೆಂದರೆ ಇದಕ್ಕೂ ಮೊದಲು ಜೀವಿಸುತ್ತಿದ್ದ ದೊಡ್ಡ ಆತ್ಮೀಕರು ಮತ್ತು ನಂತರದಲ್ಲಿ ನೀತಿವಂತರೆಂದು ಪರಿಗಣಿಸಲ್ಪಟ್ಟವರು ತಾವಾಗಿಯೇ ಇದಕ್ಕೆ ಅರ್ಹರಾಗಿರಲಿಲ್ಲ ಆದರೆ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಕಾರ್ಯದ ನಿಮಿತ್ತ ರಕ್ಷಣೆಯನ್ನು ಹೊಂದಿದರು. ಇದು ಸಾರ್ವಕಾಲಿಕ ನಿಸ್ವಾರ್ಥವಾದ ಕಾರ್ಯವಾಗಿದೆ ಮತ್ತು ಯೇಸು ಕ್ರಿಸ್ತನು ಇದನ್ನು ನಮಗಾಗಿ ಮಾಡಿದನು! ನಾವು ಏನು ಬೇಕಾದರೂ ಮಾಡಿದರೂ ಯೇಸು ಕ್ರಿಸ್ತನು ಯಾವುದಕ್ಕಾಗಿ ಪ್ರಾಣ ಕೊಟ್ಟನೋ ಆ ವರವನ್ನು ಅಂಗೀಕರಿಸಿ ಕೊಳ್ಳುವದು ಮತ್ತು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಲು ಆಗುತ್ತದೆ!

### ಕಂಠಪಾಠ ವಚನ

ಯೆಶಾಯ 53:5 "ಗಾಯಗೊಂಡನಾತ ನಮ್ಮ ಪಾಪಗಳ ನಿಮಿತ್ತ ಜಜ್ಜರಿತನಾದ ನಮ್ಮ ದ್ರೋಹಗಳ ದೆಸೆಯಿಂದ. ಶಿಕ್ಷೆಗೊಳಗಾದ ನಮ್ಮ ರಕ್ಷೆಗಾಗಿ ಪೆಟ್ಟುತಿಂದ ನಮ್ಮ ಸ್ವಸ್ಥತೆಗಾಗಿ."

### ನಾಟಕ (ಭಾಗ 2)

ಹಿಂದಿನ ಕಾಲದಿಂದ ಹಿಂದಿರುಗಿ ಬಂದ ನಂತರ, ತಾವು ನೋಡಿದ ಸಂಗತಿಗಳಿಂದ ತಮಗಾದ ಆಶ್ಚರ್ಯದಿಂದ ಅವರು ತಂಡದವರಿಗೆ ಹೊರಗೆ ಬರಲು ಆಗಲಿಲ್ಲ. ಯೇಸು ಕ್ರಿಸ್ತನು ಅನುಭವಿಸಿದ ವೇದನೆ, ಸಿಪಾಯಿಗಳು ಆತನಿಗೆ ಕ್ರೂರವಾಗಿ ಹೊಡೆದದ್ದರ ಬಗ್ಗೆ ಅವರು ಮಾತನಾಡುತ್ತಾ ಇದ್ದರು. ನಂತರ ಅವರು ಆತನನ್ನು ಶಿಲುಬೆಗೆ ಹಾಕಿದ್ದು ಮತ್ತು ಎಲ್ಲಾ ಕಡೆಗಳಲ್ಲಿಯೂ ಕತ್ತಲೆ ಆವರಿಸಿಕೊಂಡದ್ದರ ಬಗ್ಗೆ ಮಾತನಾಡುತ್ತಾ ಇದ್ದರು. “ಎಲ್ಲವೂ ತೀರಿತು” (ಯೋಹಾನ 19:30) ಎಂದು ಯೇಸು ಕ್ರಿಸ್ತನು ಹೇಳಿದ್ದನು ಮತ್ತು ಆತನು ಅದನ್ನು ಹೇಳಿದಾಗ ತನ್ನ ಪಾಪಗಳ ಬಗ್ಗೆ ಆತನು ಮಾತನಾಡುತ್ತಿದ್ದಾನೆಂದು ಅವನಿಗೆ ಅರಿವಾದದ್ದನ್ನು ಏಜೆಂಟ್ ಹೇಳಿದನು! ಏಜೆಂಟ್ ಎಲ್ಲಾ ಕಡೆಗಳಲ್ಲಿಯೂ ಹೋಗುತ್ತಾ, “ಎಲ್ಲವೂ ತೀರಿತು” ಎಂದು ಕೂಗುತ್ತಿದ್ದನು. ಅದೇ ಸಮಯದಲ್ಲಿ ನಾಯಕ ಮತ್ತು ತನಿಖಾಧಿಕಾರಿ ಭೂಕಂಪ ಮತ್ತು ಬಂಡೆಗಳು ಒಡೆದು ಹೋದದ್ದು ಹಾಗೂ ಸತ್ತವರು ಸಮಾಧಿಗಳೊಳಗಿಂದ ಎದ್ದು ಬಂದದ್ದರ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು.

### ನ್ಯಾಯ

ನಾವು ಯಾರಿಗಾದರೂ ಮಾಡಬಹುದಾದ ಅತ್ಯಂತ ಕರುಣೆಯುಳ್ಳ ಮತ್ತು ಪ್ರಾಮುಖ್ಯವಾದ ಕಾರ್ಯ ಏನೆಂದರೆ ಯೇಸು ಕ್ರಿಸ್ತನ ಕಥೆಯನ್ನು ಹೇಳುವದು ಮತ್ತು ನಾವು ಬದುಕುವ ಸಲುವಾಗಿ ಆತನು ನಮಗಾಗಿ ತನ್ನ ಪ್ರಾಣ ಕೊಟ್ಟ ಸಂಗತಿಯನ್ನು ಹಂಚಿಕೊಳ್ಳುವದೇ ಆಗಿದೆ.


### ಜೀವನ ಚರಿತ್ರೆ (ಕಾವಲುಗಾರ)

ರಕ್ಷಣೆಯ ಕಾರ್ಯಗಳನ್ನು ಮಾಡುವ ವ್ಯಕ್ತಿಗೆ ಕಾವಲುಗಾರ ಎಂಬ ಹೆಸರನ್ನು ಕೊಡಲಾಗಿದೆ. ಈ ಕೆಲಸದಲ್ಲಿ ಅನೇಕ ತಾಸುಗಳು ಕರ್ತವ್ಯ ನಿರ್ವಹಿಸಬೇಕಾಗುತ್ತದೆ ಮತ್ತು ಅನೇಕ ಸಂದರ್ಭಗಳಲ್ಲಿ ಬಹಳ ಆಯಾಸಗೊಳ್ಳಬೇಕಾಗುತ್ತದೆ ಎಂದು ಹೇಳಲೇಬೇಕು. ಕೆಲವು ವ್ಯಾಪಾರಗಳು ಮತ್ತು ವೃತ್ತಿಗಳಲ್ಲಿ, ಸಹಜವಾದ ಅವಧಿಗಿಂತ ಹೆಚ್ಚು ಸಮಯ ಕೆಲಸ ಮಾಡುವವನನ್ನು ಕಾಯುವವನು/ಕಾವಲುಗಾರ ಎಂದು ಕರೆಯುತ್ತಾರೆ.

ಜವಾಬ್ದಾರಿಕೆಗಳು: ಸಹಜವಾಗಿ ಹೇಳುವದಾದರೆ, ಕಂಪನಿಗಳು ಕಛೇರಿ ಸಮಯಗಳಲಿ ಕಾವಲುಗಾರನನ್ನು ಇಟ್ಟುಕೊಂಡಿರುತ್ತವೆ ಮತ್ತು ಕಛೇರಿ ಕೆಲಸಗಳು ಮುಗಿದ ನಂತರ ಕಾಯಲು ಕಾವಲುಗಾರನನ್ನು ನೇಮಿಸುತ್ತಾರೆ. ಎರಡನೆಯವನು ಹೆಚ್ಚು ಸಮಯ ಕೆಲಸ ಮಾಡಬೇಕಾಗುತ್ತದೆ, ಒಂಟಿಯಾಗಿ ಕಾವಲು ಕಾಯಬೇಕಾಗುತ್ತದೆ, ಏನೇ ಶಬ್ದ ಆದರೂ ಎಚ್ಚರಗೊಳ್ಳಬೇಕಾಗುತ್ತದೆ, ಪ್ರತಿಯೊಂದು ಅಪರಿಚಿತ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.
ಅವಕಾಶಗಳು: ಕ್ರೈಸ್ತೀಯ ಕಾವಲುಗಾರನಿಗೆ ಕಂಪನಿಗೆ ಜನರು ಮತ್ತು ಸಂಪನ್ಮೂಲಗಳನ್ನು ಕಾಯುವ ಅವಕಾಶ ಇರುತ್ತದೆ. ಕಾವಲುಗಾರನು ಜನರೊಂದಿಗೆ ಸಭ್ಯನಾಗಿ ನಡೆದುಕೊಳ್ಳಬೇಕು ಆದರೆ ವಿಶೇಷವಾದ ಕಾರ್ಯಗಳಿಗಾಗಿ ಹೆಚ್ಚು ಒತ್ತಡ ಹಾಕುವವರ ವಿಷಯದಲ್ಲಿ ಎಚ್ಚರವಾಗಿರಬೇಕು. ಯಥಾರ್ಥತೆಯು ಬಹಳ ಪ್ರಾಮುಖ್ಯ. ಒಳ್ಳೆಯವರಾಗಿರಬೇಕು, ಆದರೆ ಎಲ್ಲರನ್ನೂ ನಂಬಬಾರದೆ ಕೆಲಸದ ಜವಾಬ್ದಾರಿಕೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕು.

### ಪ್ರಶ್ನೆಗಳು ಮತ್ತು ಉತ್ತರಗಳು

1. ನಾವೆಲ್ಲರೂ ದೇವರ ಮಕ್ಕಳಾಗಿದ್ದೇವೆಯೇ?




ಇಲ್ಲ, ಸರಿಯಾದ ವಿಷಯ ಏನೆಂದರೆ ನಾವೆಲ್ಲರೂ ಆತನ ಸೃಷ್ಟಿಗಳಾಗಿದ್ದೇವೆ.ಈ ಪದ ನಮಗೆ ಗೊಂದಲವನ್ನುಂಟು ಮಾಡುತ್ತದೆ. ದೇವರ ಮಕ್ಕಳಾಗಬೇಕಾದರೆ ನಾವು ಯೇಸು ಕ್ರಿಸ್ತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕಾರ ಮಾಡಬೇಕು. "ಯೋಹಾನ 1:12" ಓದಿರಿ. ನಮ್ಮ ಹೃದಯಗಳು ಮತ್ತು ಜೀವಿತಗಳನ್ನು ದೇವರಿಗೆ ಕೊಡುವ ಮೂಲಕ, ಆತನ ಮಕ್ಕಳೆಂದು ಕರೆಸಿಕೊಳ್ಳುವ ಅಧಿಕಾರವನ್ನು ನಾವು ಪಡೆದುಕೊಳ್ಳುತ್ತೇವೆ, ಇದನ್ನು ಬಿಟ್ಟರೆ ಬೇರೆ ಯಾವ ಮಾರ್ಗವೂ ಇಲ್ಲ.

2. ಯೇಸು ಕ್ರಿಸ್ತನು ನನಗಾಗಿ ತನ್ನ ಪ್ರಾಣವನ್ನು ಯಾಕೆ ಕೊಟ್ಟನು?

ಯಾಕಂದರೆ ಆತನು ನಿಮ್ಮನ್ನು ಪ್ರೀತಿ ಮಾಡುತ್ತಾನೆ. ನಾವು ಯೋಗ್ಯರಲ್ಲದಿದ್ದರೂ ಆತನು ಪ್ರೀತಿಯಿಂದ ಈ ಕಾರ್ಯವನ್ನು ಮಾಡಿದನು, ಯೋಹಾನ 3:16 ಓದಿರಿ ಮತ್ತು ಗಮನಿಸಿರಿ, "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು." ದೇವರು ತಾನು ಸೃಷ್ಟಿಸಿದ ಜನರನ್ನು ಪ್ರೀತಿಸಿದ್ದರಿಂದ ತಾನು ಬಹಳವಾಗಿ ಪ್ರೀತಿಸುತ್ತಿದ್ದ ತನ್ನ ಒಬ್ಬನೇ ಮಗನನ್ನು ಕೊಡಲು ತೀರ್ಮಾನಿಸಿದನು; ಆತನ ಮರಣದ ಮೂಲಕ ನಾವು ಬದುಕುವವರಾಗಬೇಕೆಂದು ಆತನನ್ನು ನಮಗಾಗಿ ಕೊಟ್ಟನು. ಆತನ ರಕ್ತವು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸುತ್ತದೆ ಮತ್ತು ಆ ಕಾರಣದಿಂದ, ದೇವರು ನಮ್ಮನ್ನು ತನ್ನ ಮಕ್ಕಳೆಂದು ಕರೆಯುತ್ತಾನೆ. ಒಬ್ಬನೇ ಮಗನಾಗಿದ್ದ ಯೇಸು ಕ್ರಿಸ್ತನು (ದೇವರ ಒಬ್ಬನೇ ಮಗನು); ಚೊಚ್ಚಲು ಮಗನಾದನು (ಹೆಚ್ಚಿನ ಸ್ವಾಸ್ಥ್ಯವನ್ನು ಪಡೆಯುವವನು). ಆತನ ತ್ಯಾಗವನ್ನು


ನಾವು ನೆನಪು ಮಾಡಿಕೊಂಡು ಪ್ರೀತಿಸಬೇಕು, ಈ ಕಾರಣದಿಂದಲೇ ಅದನ್ನು ನೀವು ನಿಮ್ಮ ಸ್ನೇಹಿತರು ಹಾಗು ಕುಟುಂಬದವರೊಂದಿಗೆ ಹಂಚಿಕೊಳ್ಳುವದು ಪ್ರಾಮುಖ್ಯವಾಗಿದೆ.

## ಒಗಟಿನ ಉತ್ತರಗಳು




### ಪದ ಹುಡುಕುವದು


| | | | | | | | | |
|---|---|---|---|---|---|---|---|---|
| ಕ್ರಿ | ಫ | ಟ | ನೆ | ಪ್ರ | ಸ್ತು | ತ್ | ಕ್ರಿ | ನ್ಯಾ |
| ಎ | ಧ | ದ | ಜ | ಯಿ | ಸು | ವ | ದು | ಯ |
| ಯ | ದು | ಪ್ | ಬ | ಲ | ಸ | ವ | ಯೊ | ಕ್ಷಿ |
| ಇ | ಕ | ರು | ಶ | ಕ್ರಿ | ಯು | ಮಾ | ಗ | ಶಿ |
| ಶಿ | ಲು | ಬೆ | ಬೀ | ಡಿ | ಅ | ಪು | ಧಾ | ಝ್ |
| ಕ್ಷೆ | ಉ | ಢಿ | ಹಿ | ಳು | ಲು | ಧಿ | ಳು | ನ |
| ವಿ | ಯಿ | ತು | ಗ | ಜೀ | ವಿ | ತ | ಕಾ | ಲ |
| ರಿ | ರು | ಯಿ | ದೈ | ಳು | ಸ್ತು | ಕೆ | ಲು | ರ |
| ಗು | ವಾ | ಧಿ | ನ | ಪ್ರ | ತೀ | ರು | ಲೋ | ಶಿ |
| ಸಿ | ಕ್ರಿ | ನೋ | ವು | ಬ | ರು | ಗ | ಕ | ಲ |
| ಗು | ರು | ತು | ಹಿ | ಢಿ | ಯು | ವ್ | ದು | ಬೆ |




## ಆಟ

**ಮೂವರಾಗಿ**

ಶಿಕ್ಷಕನು ವಿದ್ಯಾರ್ಥಿಗಳನ್ನು ಮೂವರು ಆಟಗಾರರ ಹಲವು ತಂಡಗಳಾಗಿ ವಿಭಾಗಿಸಬೇಕು, ತಂಡಗಳು ಉದ್ದದ ಸಾಲನ್ನು ನಿರ್ಮಿಸಬೇಕು. ಶಿಕ್ಷಕ ಸೂಚನೆ ಕೊಡುವಾಗ, ಸಾಲಿನಲ್ಲಿ ಮುಂದೆ ನಿಂತಿರುವವರು ಓಡಬೇಕು, ಗುರು ಮುಟ್ಟಬೇಕು, ಹಿಂದಿರುಗಬೇಕು ಮತ್ತು ಎರಡನೆಯವನು ಮೂರನೆಯವನ ಕೈಯನ್ನು ಹಿಡಿದುಕೊಳ್ಳಬೇಕು. ಮೂವರೂ ಮತ್ತೆ ಓಡಬೇಕು ಆದರೆ ಕೈಗಳನ್ನು ಬಿಡದೆ ಗುರಿಯ ಕಡೆಗೆ ಓಡಬೇಕು ಮತ್ತು ಪ್ರಾರಂಭದ ಗೆರೆಯ ಬಳಿಗೆ ಹಿಂದಿರುಗಿ ಬರಬೇಕು. ಯಾವ ತಂಡದವರು ಈ ಕಾರ್ಯವನ್ನು ಮೊದಲು ಮುಗಿಸುತ್ತಾರೋ ಅವರು ಗೆಲ್ಲುತ್ತಾರೆ.






## ಹೋಮ್ ವರ್ಕ್

ಯೇಸು ಕ್ರಿಸ್ತನನ್ನು ಶಿಲುಬೆಗೆ ಹಾಕಿದರು ಎಂಬ ವಿಷಯ ನಿಮಗೆ ತಿಳಿದಾಗ ಮತ್ತು ಆತನು ನಿಮಗೆ ರಕ್ಷಣೆಯ ವರವನ್ನು ಉಚಿತವಾಗಿ ಕೊಟ್ಟಿರುವದು ಗೊತ್ತಾದಾಗ ನಿಮಗೆ ಹೇಗೆ ಅನ್ನಿಸಿತು ಎಂಬದನ್ನು ನಿಮಗೆ ಭರವಸೆಯಿರುವ ಜನರೊಂದಿಗೆ ಅಥವಾ ನಿಮ್ಮ ತಂದೆತಾಯಿಗಳೊಂದಿಗೆ ಹೇಳಿರಿ.

# ದುಷ್ಟನು ರಕ್ಷಣೆ ಹೊಂದಿದನು

10



**ಶಿಲುಬೆಗೆ ಹಾಕಲ್ಪಟ್ಟಿದ್ದ ಕಳ್ಳನು: ಲೂಕ 23:32-33,39-43**

ನಾಟಕ (ಭಾಗ 1)

ತನಿಖಾಧಿಕಾರಿಗೆ ಒಬ್ಬ ಸಂಬಂಧಿಕನಿದ್ದನು ದೂರದ ಊರಿನಲ್ಲಿ ಜೀವಿಸುತ್ತಿದ್ದ ಅವನು ಇತ್ತೀಚೆಗಷ್ಟೆ ಮೃತಪಟ್ಟನು. ಈಕೆಗೆ ತನ್ನ ಸಂಬಂಧಿಕನ ಬಗ್ಗೆ ಬಹಳ ಚಿಂತೆ ಉಂಟಾಯಿತು ಯಾಕಂದರೆ ಅವನು ತನ್ನ ಜೀವನ ಪರ್ಯಂತರ ದೇವರನ್ನು ಅರಿತುಕೊಳ್ಳಲಿಲ್ಲ, ಆದರೆ ಈಕೆಯ ತಂದೆ ದೂರದ ಊರಿಗೆ ಹೋಗಿ ಅವನನ್ನು ಭೇಟಿ ಮಾಡಿ ಅವನಿಗಾಗಿ ಪ್ರಾರ್ಥನೆಮಾಡಿ ಬಂದಿದ್ದರು. ಈಗ ಅದರ ಬಗ್ಗೆ ಏನು ಯೋಚಿಸಬೇಕು ಎಂಬದೇ ಈಕೆಗೆ ಗೊತ್ತಾಗಲಿಲ್ಲ. ಮುಂದೇನು ಮಾಡಬೇಕು ಎಂಬ ಚರ್ಚೆಯಲ್ಲಿ ತಂಡವು, ಯೇಸು ಕ್ರಿಸ್ತನನ್ನು ಶಿಲುಬೆಗೆ ಹಾಕಿದ್ದನ್ನು ನೋಡಲು ಹೋಗುವ ತೀರ್ಮಾನ ಮಾಡಿತು ಯಾಕಂದರೆ ಬಹಳ ಕಡಿಮೆ ಸಮಯದಲ್ಲಿ ಅವರು ಬಹಳಷ್ಟು ವಿಷಯಗಳನ್ನು ನೋಡಬಹುದಾಗಿತ್ತು. ಮೊದಲನೆಯ ಸಲ ಹೋಗಿದ್ದಾಗ ತಾವು ಯಾವುದೋ ಪ್ರಾಮುಖ್ಯವಾದ ಮಾತುಕತೆಯನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ ಎಂಬದಾಗಿ ನಾಯಕನಿಗೆ ಅನ್ನಿಸುತ್ತಲೇ ಇತ್ತು. ಯೇಸು ಕ್ರಿಸ್ತನು ಶ್ರಮೆ ಅನುಭವಿಸುವದನ್ನು ಮತ್ತೊಮ್ಮೆ ನೋಡುವ ಯೋಚನೆ ವೇದನೆಯನ್ನುಂಟು ಮಾಡುತ್ತದೆ ಆದರೂ, ಪುನಃ ಹೋಗಿ ಬಚ್ಚಿಟ್ಟುಕೊಂಡು ಕೇಳಿಸಿಕೊಳ್ಳದೆ ಇದ್ದ ವಿಷಯವನ್ನು ಕೇಳಿಸಿಕೊಳ್ಳುವ ತೀರ್ಮಾನ ಮಾಡಿದರು.

ಪಾಠ

**ಲೂಕ 23:32,33,39-43 ಓದಿರಿ**

ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಕೊಲ್ಲಲ್ಪಟ್ಟಾಗ, ಆತನೊಂದಿಗೆ ಇಬ್ಬರು ಕಳ್ಳರು ಸಹ ಕೊಲ್ಲಲ್ಪಟ್ಟರು. ಆ ಇಬ್ಬರು ಕಳ್ಳರಲ್ಲಿ ಒಬ್ಬನೊಂದಿಗೆ ಯೇಸು ಕ್ರಿಸ್ತನು ಬಹಳ ಕ್ಲುಪ್ತವಾದ, ಸರಳವಾದ ಮಾತುಕತೆಯನ್ನು ನಡೆಸಿದನು. ಆ ಕಳ್ಳನು ಯೇಸು ಕ್ರಿಸ್ತನಿಗೆ ನನ್ನನ್ನು ನೆನಪುಮಾಡಿಕೋ ಎಂದು ಹೇಳಿದನು. ಯೇಸು ಕ್ರಿಸ್ತನು ಅವನಿಗೆ ನೀನು ನನ್ನ ಸಂಗಡ ಈ ಹೊತ್ತೇ ಪರದೈಸಿನಲ್ಲಿ ಇರುವಿ ಎಂದು ಹೇಳಿದನು. ಮತ್ತೊಮ್ಮೆ, ಯೇಸು ಕ್ರಿಸ್ತನು ಸಹಿಸಲಾಗದ ವೇದನೆಯಲ್ಲಿದ್ದರು ಕಳ್ಳನೊಂದಿಗೆ ಮಾತನಾಡಲು ಸಮಯ ತೆಗೆದುಕೊಂಡದ್ದನ್ನು ನಾವು ನೋಡುತ್ತೇವೆ.

ಶಿಲುಬೆಗೆ ಹಾಕಲ್ಪಟ್ಟಿದ್ದ ಕಳ್ಳನು ಏನೆಲ್ಲಾ ಅಪರಾಧಗಳನ್ನು ಮಾಡಿದ್ದನು ಎಂಬದು ನಮಗೆ ಗೊತ್ತಿಲ್ಲ. ಅದೇ ಪ್ರಕಾರ, ನಾವು ಮಾಡಿರುವ ಕೆಟ್ಟ ಕಾರ್ಯಗಳೂ ಪ್ರಾಮುಖ್ಯವಲ್ಲ ಯಾಕಂದರೆ ಯೇಸು ಕ್ರಿಸ್ತನು ಸ್ವೇಚ್ಛೆಯಿಂದ ಅರ್ಪಿಸಿರುವ ಯಜ್ಞವು ಎಲ್ಲವುಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿದೆ. ನಾವು ಯೇಸು ಕ್ರಿಸ್ತನೊಂದಿಗೆ ನಿತ್ಯಜೀವವನ್ನು ಅನುಭವಿಸಬೇಕು ಎಂಬ ಕಾರಣಕ್ಕೆ ಆತನು ಉಚಿತವಾಗಿ ತನ್ನ ಪ್ರಾಣವನ್ನು ನಮಗಾಗಿ ಅರ್ಪಿಸಿದನು!

ಯೇಸು ಕ್ರಿಸ್ತನ ಮೂಲಕ ನಾವು ನಮ್ಮ ಪಾಪಗಳಿಂದ ಹೇಗೆ ರಕ್ಷಣೆ ಹೊಂದಬಹುದು ಎಂಬದಕ್ಕೆ ಇದು ಬಹಳ ಸರಳ

ಮತ್ತು ನೇರವಾದ ವಿವರಣೆಯಾಗಿದೆ.

### ಕಂಠಪಾಠ ವಚನ

ರೋಮನರಿಗೆ 10:11 "ಏಕೆಂದರೆ, “ಅವರಲ್ಲಿ ವಿಶ್ವಾಸ ಇಡುವ ಯಾರಿಗೂ ಆಶಾಭಂಗವಾಗುವುದಿಲ್ಲ,” ಎಂದು ಪವಿತ್ರಗ್ರಂಥದಲ್ಲೇ ಹೇಳಲಾಗಿದೆ."

### ನಾಟಕ (ಭಾಗ 2)

ಹಿಂದಿರುಗಿ ಬಂದ ನಂತರ, ತನಿಖಾಧಿಕಾರಿಗೆ ಸಮಾಧಾನವಾಯಿತು ಮತ್ತು ಸಂತೋಷವಾಯಿತು ಯಾಕಂದರೆ ಯೇಸು ಕ್ರಿಸ್ತನೊಂದಿಗೆ ಸತ್ತ ಕಳ್ಳನು ರಕ್ಷಣೆ ಹೊಂದಿದನು ಮತ್ತು ಯೇಸು ಕ್ರಿಸ್ತನು ಅವನಿಗೆ ಪರದೈಸಿಗೆ ಹೋಗುವ ಆಹ್ವಾನವನ್ನು ಕೊಟ್ಟನು. ಏಜೆಂಟ್ ಈಗ ಮಾಡುತ್ತಿರುವ ಮತ್ತು ಮುಂದೆ ಮಾಡುವ ಪಾಪಗಳೆಲ್ಲವೂ ಶಿಲುಬೆಯ ಮೇಲೆ ಪ್ರಾಣವನ್ನು ಅರ್ಪಿಸಿದ ಯೇಸು ಕ್ರಿಸ್ತನ ಮೂಲಕ ಪರಿಹಾರವಾದವೋ ಹಾಗೆಯೇ ತನಿಖಾಧಿಕಾರಿಯ ಸಂಬಂಧಿಕನ ಪಾಪಗಳೆಲ್ಲವೂ ಯೇಸು ಕ್ರಿಸ್ತನಿಂದ ಪರಿಹಾರವಾಗಿವೆ ಎಂದು ತಂಡದವರು ಮಾತನಾಡಿಕೊಳ್ಳುತ್ತಾ ಇದ್ದರು. ಕಡೇ ಕ್ಷಣದ ತನಕ ಕಾಯುವ ಬದಲು ಈ ಜೀವಿತದಲ್ಲಿಯೇ ಯೇಸು ಕ್ರಿಸ್ತನೊಂದಿಗೆ ಜೀವಿಸುವ ಮತ್ತು ಆತನ ಪ್ರೀತಿ, ಸಂತೋಷ ಹಾಗೂ ಸಮಾಧಾನವನ್ನು ಅನುಭವಸುವ ಕಾರ್ಯವು ಉತ್ತಮವಾಗಿದೆ. ಆದರೆ ಅವರು ದೇವರು ಉದಾರಿಯಾಗಿದ್ದಾನೆ ಮತ್ತು ಯೇಸು ಕ್ರಿಸ್ತನ ರಕ್ತವು ಶಕ್ತಿಯುತವಾಗಿದೆ ಎಂದು ಹೇಳುವ ಮೂಲಕ ತಮ್ಮ ಮಾತುಗಳನ್ನು ಮುಗಿಸಿದರು.

### ನ್ಯಾಯ

ನಾವು ಎಲ್ಲಿಂದ ಬಂದವರಾದರೂ ಅಥವಾ ಏನೇ ಮಾಡಿದ್ದರೂ ಯೇಸು ಕ್ರಿಸ್ತನ ವರವನ್ನು ಅಂಗೀಕರಿಸಿಕೊಳ್ಳುವ ಹಾಗೆಯೇ, ಇತರರು ಸಹ ಎಲ್ಲಿಂದಲೇ ಬಂದಿದ್ದರೂ ಅಥವಾ ಏನೇ ಮಾಡಿದ್ದರೂ ದೇವರ ಉಚಿತ ವರವನ್ನು ಅಂಗೀಕರಿಸಿಕೊಳ್ಳಬಹುದಾಗಿದೆ.

### ಜೀವನ ಚರಿತ್ರೆ (ಹಾಡುಗಾರ)

ಹಾಡುವ ವೃತ್ತಿಯನ್ನು ಮಾಡುವ ಸಲುವಾಗಿ ಅದನ್ನು ಅಧ್ಯಯನ ಮಾಡಿರುವ ವ್ಯಕ್ತಿ ಹಾಡುಗಾರನಾಗಿರುತ್ತಾನೆ. ಹಾಡುಗಾರನು ಖಂಡಿತವಾಗಿಯೂ ಹಾಡುಗಳನ್ನು ಹಾಡುತ್ತಾನೆ ಮತ್ತು ಅದಕ್ಕೆ ತಕ್ಕ ಸಂಬಳ ಸಿಗಲಿ ಎಂದು ನಿರೀಕ್ಷಿಸುತ್ತಾನೆ.

ಜವಾಬ್ದಾರಿಕೆಗಳು: ಹಾಡುಗಾರನು ತರಬೇತಿ ಪಡೆಯುವ ಸಮಯದಲ್ಲಿ ಶಿಸ್ತು ಪಾಲನೆ ಮಾಡಬೇಕು, ಹೆಚ್ಚು ಅಭ್ಯಾಸ ಮಾಡಬೇಕು ಮತ್ತು ಎಚ್ಚರವಾಗಿರಬೇಕು ಯಾಕಂದರೆ ಇವುಗಳಿದ್ದರೆ ಮಾತ್ರವೇ ಹಾಡುಗಾರನ ಜೀವನೋಪಾಯಕ್ಕೆ ಏನಾದರೂ ಸಿಗುತ್ತದೆ. ಒಂದುವೇಳೆ ಹಾಡುಗಾರನು ಪ್ರಸಿದ್ಧನಾದರೆ, ದೇವರಿಗೆ ಮಹಿಮೆ ಸಲ್ಲಿಸುವದು ಮತ್ತು ಹಾಡುಗಳ ಮೂಲಕ ನಾವು ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಬಹುದು ಎಂಬದನ್ನು ನೆನೆಪು ಮಾಡಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. 1 ಕೊರಿಂಥ 14:26

ಅವಕಾಶಗಳು: ಸಂಗೀತ ತಿಳುವಳಿಕೆಯನ್ನು ಪಡೆಯುವದು ಮಾತ್ರವಲ್ಲ ಬದಲಾಗಿ ದೇವರೊಂದಿಗೆ ನಿಕಟವಾದ ಸಂಬಂಧದಲ್ಲಿರುವ ಜವಾಬ್ದಾರಿಕೆ ಕ್ರೈಸ್ತ ಹಾಡುಗಾರರಿಗೆ ಇದೆ. ದೇವರ ಆರಾಧನೆಯಲ್ಲಿ ಸಭೆಯನ್ನು ಮುನ್ನಡೆಸುವ ಮೂಲಕ ಅವರು, ದೇವರಿಂದ ಬಹಳವಾಗಿ ಉಪಯೋಗಿಸಲ್ಪಡುವ ಸಾಧನಗಳಾಗಿದ್ದಾರೆ.

ಸದ್ಯಕ್ಕೆ ಸಾಮಾಜಿಕ ಜಾಲತಾಣಗಳ ಮೂಲಕ ನಿಮ್ಮನ್ನು ಹಾಡುಗಾರರನ್ನಾಗಿ ಪರಿಚಯಪಡಿಸಿಕೊಳ್ಳುವದು ಬಹಳ ಸುಲಭ ಮತ್ತು ಕೆಲವರು ಅದರ ಮೂಲಕವೇ ಪ್ರಸಿದ್ಧರಾಗಿದ್ದಾರೆ. ಹಾಡುಗಾರನು ದೇವರ ಪ್ರಸನ್ನತೆಯನ್ನು ಅನುಭವಿಸಬಹುದು ಮತ್ತು ಆತನ ಪ್ರಸನ್ನತೆಯನ್ನು ಅನುಭವಿಸಲು ಇತರೆ ಸಹಾಯ ಮಾಡುವ ಮೂಲಕ ದೇವರಿಂದ ಉಪಯೋಗಿಸಲ್ಪಡಬಹುದು.

### ಪ್ರಶ್ನೆಗಳು ಮತ್ತು ಉತ್ತರಗಳು

1. ಯೇಸು ಕ್ರಿಸ್ತನನ್ನು ನನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವ ಮೂಲಕ ನಾನು ರಕ್ಷಣೆ ಹೊಂದಿದ್ದೇನೆಯೇ?

ಇದು ಅಷ್ಟೇ ಸುಲಭವಾಗಿದೆ. ಒಂದುವೇಳೆ ಈ ಕಾರ್ಯವನ್ನು ಯಥಾರ್ಥತೆಯಿಂದ ಮಾಡುವದಾದರೆ, ಆತನೇ ನಿಮ್ಮ ಜೀವಿತದ ಒಡೆಯನೆಂದು ನೀವು ನಿಮ್ಮ ಕ್ರಿಯೆಗಳ ಮೂಲಕ ತೋರಿಸಲು ಸಾಧ್ಯವಾಗುವದು. ರಕ್ಷಣೆ ಹೊಂದಿರುವ ನೀವು ಎಲ್ಲರಿಗಿಂತ ಭಿನ್ನರಾಗಿದ್ದೀರಿ ಎಂಬದನ್ನು ತೋರಿಸುವದು, ಮತ್ತು ಕೆಲವೊಮ್ಮೆ ಬದಲಾವಣೆಯು ಕ್ರಮೇಣವಾಗಿರುವದು ಹಾಗೂ ಇತರೆ ಸಮಯಗಳಲ್ಲಿ ಅದು ಕೂಡಲೇ ವ್ಯಕ್ತವಾಗುತ್ತದೆ. ಇನ್ನೂ ಕೆಲವೊಮ್ಮೆ ಒಬ್ಬ ವ್ಯಕ್ತಿಯು ಏನಾದರೂ ಬಹುಮಾನ ಮತ್ತು ಲಾಭ ಪಡೆಯಲು ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಲು ಬಯಸುತ್ತಾರೆ, ಆದ್ದರಿಂದ ಅದು ಯಥಾರ್ಥವಾಗಿರುವದಿಲ್ಲ.


2. ಶಿಲುಬೆಯ ಮೇಲಿದ್ದ ಕಳ್ಳನು ತನ್ನ ತಪ್ಪುಗಳ ಹೊರತಾಗಿಯೂ ರಕ್ಷಣೆ ಹೊಂದಿದ್ದು ಯುಕ್ತವಾಗಿದೆಯೇ?


ಕಳ್ಳನು ತನ್ನನ್ನು ತಗ್ಗಿಸಿಕೊಂಡಿದ್ದಾನೆ ಮತ್ತು ಯೇಸು ಕ್ರಿಸ್ತನ ಪರವಾಗಿ ಮಾತನಾಡುತ್ತಿದ್ದಾನೆ ಎಂಬದನ್ನು ಯೇಸು ಕ್ರಿಸ್ತನು ಅರಿತುಕೊಂಡನು. ಕಳ್ಳನು ಪಶ್ಚಾತ್ತಾಪಪಟ್ಟಿದ್ದಾನೆ ಎಂಬದನ್ನು ಇದು ತೋರಿಸುತ್ತದೆ ಮತ್ತು ಎಲ್ಲರಿಗಿಂತ ಹೆಚ್ಚಾಗಿ ಅವನು ಯಥಾರ್ಥನೋ ಅಲ್ಲವೋ ಎಂಬದನ್ನು ಹೇಳಲು ಯೇಸು ಕ್ರಿಸ್ತನು ಶಕ್ತನಾಗಿದ್ದಾನೆ. ರಕ್ಷಣೆ ಹೇಗಿರ ಬೇಕೆಂದು ನಾವು ತೀರ್ಮಾನಿಸಲು ಆಗುವದಿಲ್ಲ, ಬದಲಾಗಿ ನಾವು ಸತ್ಯವೇದ ಓದುವಾಗ ಏನು ಮಾಡಬೇಕೆಂದು ನಮಗೆ ಗೊತ್ತಾಗುವದು ಎಂಬದನ್ನು ಮರೆಯಬಾರದು.

## ಒಗಟಿನ ಉತ್ತರಗಳು

**ಪದ ಹುಡುಕುವದು**

| | | | | | | | | |
|---|---|---|---|---|---|---|---|---|
| ಉ | ಜ್ | ಯ | ನ್ | ಮ್ | ತೆ | ನೆ | ರ | ಬ್ |
| ಮಾ | ಮ | ಗ | ಹ | ಕ | ಧ | ನ | ಕ | ಯೇ |
| ಸ | ರಾ | ಅ | ತು | ಯ | ಳ್ಳ | ಪು | ಗ | ಸು |
| ಭ | ಪ | ಮಾ | ಪ | ಶ | ಕ್ತಿ | ಮಾ | ತು | ಕ್ರಿ |
| ಪ | ರ | ಕ್ಷ | ಣೆ | ರಾ | ಅ | ಡಿ | ಕ್ಷೆ | ಸ್ತ |
| ಕ್ | ದೈ | ವ | ಗ | ಟ | ಧ | ಕೋ | ಯ | ನು |
| ಲ | ಸು | ಧ | ನೆ | ದೈ | ಳು | ಗ | ಪ | ಜ್ಞ |
| ಶಿ | ತು | ರಾ | ಅ | ಪಾ | ಪ | ಗ | ಳು | ಮಾ |
| ಕ್ಷೆ | ಲು | ತು | ಹಿ | ಢಿ | ಯು | ವ್ | ದು | ಕ್ಷಿ |
| ಗ | ಕ್ಷೆ | ಬೆ | ಳ್ಳ | ಕ | ನ್ಯಾ | ಯ | ತೀ | ರ್ಪು |








## ಆಟ

**ಕಡೆಯವರು ಮೊದಲಿನವರಾಗುವರು**



**ಭಾಗವಹಿಸುವವರೆಲ್ಲರೂ ಪ್ರಾರಂಭದ ಸಾಲಿನ ಬಳಿಯಲ್ಲಿ ನಿಂತುಕೊಳ್ಳಬೇಕು ಮತ್ತು ಶಿಕ್ಷಕ ಸೂಚನೆಯನ್ನು ಕೊಟ್ಟ ನಂತರ, ಸ್ಲೋ ಮೋಷನ್ ನಲ್ಲಿ ಯಾರೋ ವೀಡಿಯೋ ಮಾಡುತ್ತಿರುವ ಹಾಗೆ "ಓಡುತ್ತಾ" ಹೊರಗೆ ಬರಬೇಕು.**






## ಹೋಮ್ ವರ್ಕ್

ದೇವರು ನಿಮಗೆ ಸಹಾಯ ಮಾಡುವನೆಂದು ನೀವು ಭರವಸೆಯಿಡುವ ವಿಷಯಗಳ ಪಟ್ಟಿಯನ್ನು ಮಾಡಿರಿ. ಯಾರ ಜೊತೆಯಲ್ಲಾದರೂ ಅದರ ಬಗ್ಗೆ ಮಾತನಾಡಿರಿ. ಪಟ್ಟಿಯ ಕೆಳಗೆ ರೋಮಾ 10:11 ವಚನವನ್ನು ಬರೆಯಿರಿ, "ವಚನವು ಹೇಳುವದೇನೆಂದರೆ, "ಆತನ ಮೇಲೆ ನಂಬಿಕೆಯಿಡುವ ಯಾವನಾದರೂ ಆಶಾಭಂಗಪಡುವದಿಲ್ಲ."

# ಘೋರವಾದ ದಿನ ಅತ್ಯುತ್ತಮ ದಿನವಾಗಿ ಬದಲಾಯಿತು




## ಯೇಸು ಕ್ರಿಸ್ತನ ಪುನರುತ್ಥಾನ: ಮತ್ತಾಯ 27:57-61,28:1-10, ಲೂಕ 24:36-48



### ನಾಟಕ (ಭಾಗ 1)

ಏಜೆಂಟ್ ಇಂದು ಗೊಂದಲದಿಂದ ಒಳಗೆ ಬಂದನು. ಯೇಸು ಕ್ರಿಸ್ತನು ನಮಗಾಗಿ ಯಾಕೆ ಪ್ರಾಣ ಕೊಟ್ಟನು ಎಂದು ಅವನು ತಂಡದವರನ್ನು ಕೇಳಿದನು? ನಾವೇನೋ ಬದುಕಿಕೊಂಡೆವು ಆದರೆ ಆತನು ಸತ್ತು ಹೋದನಲ್ಲವೇ? ಯೇಸು ಕ್ರಿಸ್ತನು ಸತ್ತು ಹೋಗಿಲ್ಲ ಎಂದು ನಾಯಕನು ಅವನಿಗೆ ಹೇಳಿದನು. ಇಲ್ಲಿ ಆತನು ಖಂಡಿತವಾಗಿಯೂ ಸತ್ತು ಹೋಗಿದ್ದಾನೆ ಯಾಕಂದರೆ ನಾವು ಹಿಂದಿನ ಕಾಲಕ್ಕೆ ಎರಡು ಸಲ ಹೋದಾಗಲೂ ಏನಾಯಿತೆಂದು ನೋಡಿದೆವು! ನಾವೇ ನೋಡಿರುವಾಗ ಯೇಸು ಕ್ರಿಸ್ತನು ಬದುಕಿರಲು ಹೇಗೆ ಸಾಧ್ಯ? ಪುನಃ ಹಿಂದಿನ ಕಾಲಕ್ಕೆ ಹೋಗುವದರಿಂದ ನಾಯಕ ಬಹಳ ಉತ್ಸುಕನಾಗಿದ್ದನು, ಹಾಗೂ ಏಜೆಂಟ್ ತಾನಾಗಿಯೇ ಉತ್ತರ ತಿಳಿದುಕೊಳ್ಳಲಿ ಎಂದು ಬಯಸಿದನು.

### ಪಾಠ

**ಮತ್ತಾಯ 27:57-61 ಓದಿರಿ**

ಯೇಸು ಕ್ರಿಸ್ತನ ಹಿಂಬಾಲಕರ ವಿಷಯಕ್ಕೆ ಬಂದರೆ, ಇದುವೇ ಮುಕ್ತಾಯವಾಗಿತ್ತು. ಅವರು ನಿರಾಸೆಗೊಂಡಿದ್ದರು ಎಂದು ಹೇಳುವದು ದೊಡ್ಡ ತಗ್ಗುನುಡಿಯಾಗಿದೆ.

ಯೇಸು ಕ್ರಿಸ್ತನ ಹಿಂಬಾಲಕರಿಗೆ ಈ ಪರಿಸ್ಥಿತಿ ಎಷ್ಟು ಘೋರವಾಗಿರುತ್ತದೆ. ದೊಡ್ಡ ಪ್ರವಾದಿಗಳು ಹೇಳಿದ್ದಂತೆ ಇಸ್ರಾಯೇಲ್ಯರನ್ನು ರಕ್ಷಿಸಲು ಬರುವ ಮೆಸ್ಸೀಯನೇ ಯೇಸು ಕ್ರಿಸ್ತನೆಂದು ಅವರು ನಂಬಿದ್ದರು. ಯೇಸು ಕ್ರಿಸ್ತನನ್ನು ಹಿಂಬಾಲಿಸುವ ಸಲುವಾಗಿ ಅವರು ತಮ್ಮ ಕೆಲಸಗಳನ್ನು ತೊರೆದಿದ್ದರು ಮತ್ತು ಕುಟುಂಬಗಳನ್ನು ಬಿಟ್ಟು ಬಂದಿದ್ದರು. ಆದರೆ ಈಗ ಯೇಸು ಕ್ರಿಸ್ತನು ಮೃತಪಟ್ಟ ಕಾರಣ, ಅವರ ಕನಸುಗಳೂ ಮೃತಪಟ್ಟವು.

ಆದರೆ ಯೇಸು ಕ್ರಿಸ್ತನು ಹೆಚ್ಚು ದಿನ ಮೃತಪಟ್ಟ ಸ್ಥಿತಿಯಲ್ಲಿ ಇರಲಿಲ್ಲ . . .

**ಮತ್ತಾಯ 28:1-10 ಮತ್ತು ಲೂಕ 24:36-38 ಓದಿರಿ**

ಎಂಥಾ ಅದ್ಭುತ! ಯೇಸು ಕ್ರಿಸ್ತನು ಹೇಳಿದ ಮಾತು ಸತ್ಯವಾಗಿತ್ತು! ಆತನು ಸತ್ತವರೊಳಗಿಂದ ಎದ್ದು ಬಂದನು! ಮುಂದಿನ ಕೆಲವು ದಿನಗಳಲ್ಲಿ, ನೂರಾರು ಜನರಿಗೆ ಯೇಸು ಕ್ರಿಸ್ತನು ಕಾಣಿಸಿಕೊಂಡನು. ಅವರಿಗೆ ನಿಜವಾಗಿಯೂ ಬಹಳ ಸಂತೋಷವಾಯಿತು!

ಕೆಲವೊಮ್ಮೆ ನಾವು ಯೇಸು ಕ್ರಿಸ್ತನನ್ನು ನೋಡಿದರೆ ಸಾಕು ಎಂಬದಾಗಿ ಅಂದುಕೊಳ್ಳುತ್ತೇವೆ. ಕಠಿಣ ಪರಿಸ್ಥಿತಿಗಳು ಎದುರಾದಾಗ, ಕರ್ತನೇ ನಿನ್ನನ್ನು ಪ್ರಕಟಪಡಿಸು ಎಂದು ಬೇಡಿಕೊಳ್ಳೋಣ, ನಂತರ ಆತನನ್ನು ಎದುರುನೋಡೋಣ

ಮತ್ತು ನಮ್ಮ ಹಾಗೂ ನಮ್ಮ ಸುತ್ತಮುತ್ತಲಿನಲ್ಲಿರುವ ಜನರ ಜೀವಿತಗಳಲ್ಲಿ ಆತನ ಶಕ್ತಿ ಕಾರ್ಯಮಾಡುತ್ತಿರುವದನ್ನು ತಿಳಿದುಕೊಳ್ಳೋಣ.

### ಕಂಠಪಾಠ ವಚನ

ಹಿಬ್ರಿಯರಿಗೆ 11:1 "ವಿಶ್ವಾಸವೆಂಬುದು ನಾವು ನಿರೀಕ್ಷಿಸುವಂಥವುಗಳು ನಮಗೆ ದೊರಕುತ್ತವೆ ಎಂಬ ದೃಢ ನಂಬಿಕೆ ಹಾಗು ಕಣ್ಣಿಗೆ ಕಾಣದಂಥವುಗಳು ನಿಶ್ಚಯವಾದವು ಎಂಬ ನಿಲುವು ಆಗಿದೆ."

### ನಾಟಕ (ಭಾಗ 2)


ಅವರು ಹಿಂದಿರುಗಿ ಬಂದ ನಂತರ, ಬಹಳ ಸಂತೋಷಿಸಿದರು, ಯೇಸು ಕ್ರಿಸ್ತನು ಪುನರುತ್ಥಾನಗೊಂಡಿದ್ದಾನೆ ಎಂಬ ವಿಷಯ ಗೊತ್ತಿಲ್ಲದೆ ಇದ್ದ ಏಜೆಂಟ್ ಬಹಳವಾಗಿ ಸಂತೋಷಿಸಿದನು! ಯೇಸು ಕ್ರಿಸ್ತನನ್ನು ಹೇಗೆ ಸಮಾಧಿ ಮಾಡಿದರು, ನಂತರ ಮುಂಜಾನೆಯ ಸಮಯದಲ್ಲಿ ಸ್ತ್ರೀಯರು ಸಮಾಧಿಯ ಬಳಿಗೆ ಹೋದದ್ದು, ದೇವದೂತನನ್ನು ಕಂಡದ್ದು ಇತ್ಯಾದಿ ವಿಷಯಗಳ ಬಗ್ಗೆ ಅವರು ಮಾತನಾಡುತ್ತಾ ಇದ್ದರು, ಆದರೆ ಒಬ್ಬ ಮನುಷ್ಯನು ಅಲ್ಲಿದ್ದ ಸ್ತ್ರೀಯ ಹತ್ತಿರಕ್ಕೆ ಬಂದಾಗ, ಆತನೇ ಯೇಸು ಎಂಬದನ್ನು ಅವರು ತಿಳಿದುಕೊಂಡದ್ದು ಅವರ ಮೆಚ್ಚಿನ ಭಾಗವಾಗಿತ್ತು. ಶಿಷ್ಯರು ಬಾಗಿಲು ಮುಚ್ಚಿಕೊಳ್ಳುವ ಮೊದಲು ಕೋಣೆಯೊಳಗೆ ಹೋಗಿ ಅಡಗಿಕೊಂಡದ್ದರ ಬಗ್ಗೆಯೂ ಅವರ ಚರ್ಚಿಸಿದರು, ಯಾಕಂದರೆ ಇಲ್ಲಿಯ ತನಕ ಅವರು ಮಾಡಿರುವ ಕಾರ್ಯಗಳಲ್ಲಿ ಇದು ಬಹಳ ರೋಚಕವಾಗಿತ್ತು, ನಂತರ ಯೇಸು ಕ್ರಿಸ್ತನು ಅವರಿದ್ದ ಕೋಣೆಯೊಳಗೆ ಕಾಣಿಸಿಕೊಂಡನು. ಇದರ ಅರ್ಥ ಏನು ಮತ್ತು ಮುಂದೊಂದು ದಿನ ಯೇಸು ಕ್ರಿಸ್ತನ ಹಾಗೆ ತಾನೂ ನೂತನ ದೇಹವನ್ನು ಹೊಂದುಕೊಂಡು, ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾ ತನಗೆ ಕೋಳಿ ಮಾಂಸ ಇಷ್ಟವಾದರೂ ಮೀನು ತಿನ್ನುವದು ಹೇಗೆ ಎಂದು ಯೋಚಿಸುತ್ತಾ ಇದ್ದನು. ಅವನು ನಾಯಕನನ್ನು ಕೇಳಿದನು ಆದರೆ ನಾಯಕನು ನನಗೆ ಹೊಸ ದೇಹಗಳು ಹೇಗಿರುವವು ಎಂದು ಸರಿಯಾಗಿ ಗೊತ್ತಿಲ್ಲ, ಆದರೆ ಅವು ಖಂಡಿತ ಉತ್ತಮವಾಗಿರುತ್ತವೆ ಎಂದು ಹೇಳಿದನು!

### ನ್ಯಾಯ

ಕೆಲವೊಮ್ಮೆ ಎಲ್ಲರಿಗೂ ನಿರಾಸೆ ಆಗುತ್ತದೆ. ದುಃಖದಲ್ಲಿರುವ ನಮ್ಮ ಸ್ನೇಹಿತರೊಂದಿಗೆ ನಾವೂ ಭಾಗಿಯಾಗೋಣ ಆದರೆ ಘೋರವಾದ ಪರಿಸ್ಥಿತಿಗಳನ್ನು ಅನುಕೂಲಕರವಾಗಿ ಬದಲಾಯಿಸುವ ನಮ್ಮ ದೇವರ ಬಗ್ಗೆ ಅವರಿಗೆ ಹೇಳೋಣ.

### ಜೀವನ ಚರಿತ್ರೆ (ಮಿಷನರಿ)

ಮಿಷನರಿ ದೇವರಿಂದ ಕರೆಯನ್ನು ಹೊಂದಿರುವ ವ್ಯಕ್ತಿಯಾಗಿರುತ್ತಾನೆ, ಕೆಲವೊಮ್ಮೆ ತಮ್ಮ ದೇಶ ಮತ್ತು ಸಂಪ್ರದಾಯವನ್ನು ಬಿಟ್ಟು ಬೇರೊಂದು ದೇಶಕ್ಕೆ ಹೋಗುವವನಾಗಿರುತ್ತಾನೆ.



ಜನರಿಗೆ ತಮ್ಮ ಧರ್ಮವನ್ನು ಬದಲಾಯಿಸಿಕೊಳ್ಳುವಂತೆ ಮಿಷನರಿಗಳು ಒತ್ತಡ ಹಾಕುತ್ತಾರೆಂದು ಕೆಲವು ಹೇಳುತ್ತಾರೆ, ಈ ಕಾರಣದಿಂದಲೇ ಅನೇಕ ದೇಶಗಳಲ್ಲಿ ಅಂದರೆ ಇತರೆ ದೇವರುಗಳನ್ನು ಆರಾಧಿಸುವವರು ಇವರಿಗೆ ಪ್ರವೇಶ ಕೊಡುವದಿಲ್ಲ ಅಥವಾ ಈಗಾಗಲೇ ಆ ಸ್ಥಳಗಳಲ್ಲಿ ಇರುವವರನ್ನು ಅಲ್ಲಿನವರು ಕೆಟ್ಟದಾಗಿ ನೋಡುತ್ತಾರೆ ಅಥವಾ ಕೆಲವೊಮ್ಮೆ ಕೊಲ್ಲುತ್ತಾರೆ.

ಜವಾಬ್ದಾರಿಕೆಗಳು: ಹೊಸ ಸ್ಥಳಕ್ಕೆ ಹೋಗುವ ಮೊದಲು, ತಾವು ಸೇವೆ ಮಾಡಲು ಹೋಗುವ ಹೊಸ ಸಂಸ್ಕೃತಿಗೆ ಹೊಂದಿಕೊಳ್ಳುವದು ಹೇಗೆ ಎಂಬದನ್ನು ತಿಳಿಯಲು ತರಬೇತಿ ಪಡೆಯುತ್ತಾರೆ, ತಮಗೆ ಅಭ್ಯಾಸವಿಲ್ಲದೆ "ಆಹಾರ" ತಿನ್ನಲು ಕಲಿತುಕೊಳ್ಳುತ್ತಾರೆ, ವಸ್ತ್ರಧಾರಣೆಯ ಶೈಲಿಯನ್ನು ಬದಲಾಯಿಸಿಕೊಳ್ಳುತ್ತಾರೆ, ಆ ಸ್ಥಳದ ಭಾಷೆಯನ್ನು ತಿಳಿದುಕೊಳ್ಳುತ್ತಾರೆ ಮತ್ತು ಕಲಿತುಕೊಳ್ಳುತ್ತಾರೆ, ಆದರೆ ಎಲ್ಲದಕ್ಕಿಂತ ಹೆಚ್ಚಾಗಿ ಯಾವುದೇ ಸಂಸ್ಕೃತಿಯವರನ್ನು ಸಂಧಿಸಿದರೂ ಅವರಿಗೆ ಸುವಾರ್ತೆ ಹೇಳುವಾಗ ಎಚ್ಚರವಾಗಿರುತ್ತಾರೆ, ಆದ್ದರಿಂದ ತಡೆಗಳೆದುರಾಗುವದು ಕಡಿಮೆಯಾಗುತ್ತದೆ. ಹಾಗೆಯೇ ತಮ್ಮ ದೇಶ ಅಥವಾ ಮೂಲ ಸ್ಥಳದಿಂದ ದೂರ ಇರುವಾಗ ತಮ್ಮ ಭಾವನೆಗಳಿಗೂ ಬೆಲೆ ಕೊಡುತ್ತಾರೆ.

ಅವಕಾಶಗಳು: ಕಷ್ಟದ ಪರಿಸ್ಥಿತಿಗಳ ನಡುವೆಯೂ ನಮ್ಮ ಕೊರತೆಗಳನ್ನು ನೀಗಿಸುವ, ಹಾಗೆಯೇ ಸುವಾರ್ತೆಗೆ ಬಾಗಿಲುಗಳನ್ನು ತೆರೆಯುವ ಮತ್ತು ಜೀವಿತಗಳನ್ನು ಬದಲಾಯಿಸುವ ಹಾಗೂ ಯಥಾರ್ಥನಾಗಿ ನಡೆದುಕೊಳ್ಳುವ ನಮ್ಮ ದೇವರಲ್ಲಿ ನಂಬಿಕೆಯನ್ನಿಡುವದಕ್ಕೆ ಮಿಷನರಿಗಳು ಮಾದರಿಗಳಾಗಿದ್ದಾರೆ. ಮಿಷನರಿಯು ಸಂಪೂರ್ಣವಾಗಿ ಕೆಲಸಗಳಿಗೆ ತನ್ನನ್ನು ಸಮರ್ಪಿಸಿಕೊಂಡಿರುವ ಮತ್ತು ಅದನ್ನು ಸಂಪೂರ್ಣವಾದ ಸಮರ್ಪಣೆ, ಭಕ್ತಿಯಿಂದ ಮಾಡಿ ಮುಗಿಸುವ ಹಾಗೂ ಯೇಸು ಕ್ರಿಸ್ತನಲ್ಲಿ ಹೆಜ್ಜೆಜಾಡುಗಳಲ್ಲಿ ನಡೆಯುತ್ತಾ ಮಹಾಆಜ್ಞೆಯನ್ನು ನೆರವೇರಿಸಲು ಬಯಸುವ ವ್ಯಕ್ತಿಯಾಗಿರುತ್ತಾನೆ.

## ಪ್ರಶ್ನೆಗಳು ಮತ್ತು ಉತ್ತರಗಳು

1. ಸತ್ಯವೇದವು ಹೇಳುವ ವಿಷಯಗಳು ಈಗಲೂ ಸತ್ಯವಾಗಿವೆಯೇ?

ದೇವರ ವಾಕ್ಯಗಳು ಎಂದಿಗೂ ಅಳಿದುಹೋಗುವದಿಲ್ಲ, ಯೇಸು ಕ್ರಿಸ್ತನು ಜನಿಸುವದಕ್ಕೂ ಹಲವು ವರ್ಷಗಳ ಹಿಂದೆ ಹೇಳಲಾಗಿದ್ದ ವಿಷಯಗಳು ನೆರವೇರಿದವು. ಈಗ ಬರೆಯಲ್ಪಟ್ಟಿರುವ ವಾಗ್ದಾನಗಳು ನಮ್ಮ ಜೀವಿತಗಳಲ್ಲಿ ಹೇಗೆ ನೆರವೇರುತ್ತಾ ಇವೆ ಎಂಬದನ್ನು ನಾವು ನೋಡಬಹುದಾಗಿದೆ. ಒಂದುವೇಳೆ ನಿಮ್ಮಲ್ಲಿ ಸಾಸಿವೆ ಕಾಳಿನಷ್ಟು ನಂಬಿಕೆ ಇದ್ದರೂ, ಆ ವಾಗ್ದಾನಗಳು ನೆರವೇರುವದನ್ನು ನೋಡಬಹುದು. ಮತ್ತಾಯ 24:35 ಓದಿರಿ ಮತ್ತು ನಂಬಿರಿ.


2. ಕಷ್ಟದ ಸಮಯಗಳಲ್ಲಿ ದೇವರಿಗೆ ನಂಬಿಗಸ್ತನಾಗಿರಲು ನನಗೆ ಯಾಕೆ ಕಷ್ಟವಾಗುತ್ತದೆ?

ಸಂದೇಹಗಳು ಬರುವದು ಸಹಜ ಮತ್ತು ಮುಂದುವರೆಯಲು ಆಗುವದಿಲ್ಲ ಎಂದು ಯೋಚಿಸುವದು ಸಾಮಾನ್ಯ ಸಂಗತಿಯಾಗಿದೆ. ಕಷ್ಟದ ಸಮಯಗಳಲ್ಲಿ, ಉದಾಹರಣೆಗೆ, ನಿಮ್ಮ ತಂದೆ ಉದ್ಯೋಗ ಕಳೆದುಕೊಳ್ಳುವಾಗ ಮತ್ತು ನೀವು ಶಾಲೆಗೆ ಹೋಗುವಾಗ ಅಥವಾ ನಿಮ್ಮ ತಾಯಿ ಕೋವಿನಂಥಹ ಘೋರ ವೈರಸ್ ನಿಂದಾಗಿ ಅನಾರೋಗ್ಯಕ್ಕೆ ಒಳಗಾದರೆ, ನಿಮ್ಮ ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ನೆಲೆಯಾಗಿರುವ ದೇವರ ವಾಕ್ಯ ನೀವು ನಂಬುವಂತೆ ನಿಮಗೆ ಸಹಾಯ ಮಾಡುತ್ತದೆ. ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮೃತಪಟ್ಟಾಗ ಶಿಷ್ಯರಿಗೆ ಏನೆಲ್ಲಾ ಯೋಚನೆಗಳು ಬಂದಿರಬಹುದು ಊಹೆ ಮಾಡಿಕೊಳ್ಳಿರಿ. ಅವರು ನಂಬಿದ ವಿಷಯಗಳು, ಅವರ ಭರವಸೆ, ಅವರ ನಿರೀಕ್ಷೆ ಎಲ್ಲವೂ ಮರೆಯಾಗುತ್ತಿದ್ದವು, ಆದರೆ ಯೇಸು ಕ್ರಿಸ್ತನ ಮಾತುಗಳು ಅವರು ಆತನಲ್ಲಿ ಭರವಸೆ ಇಡುವಂತೆ ಮಾಡಿದವು.

## ಒಗಟಿನ ಉತ್ತರಗಳು

### ಪದ ಹುಡುಕುವದು

| | | | | | | | | | |
|---|---|---|---|---|---|---|---|---|---|
| ಯ | ದಿ | ನಿ | ಜೀ | ಮ್ | ಯೆ | ವಿ | ಶ್ವಾ | ಸಿ | ಸೆ |
| ಣೆ | ಳು | ದಿ | ವಿ | ತ್ವಾ | ರೂ | ಕ್ತೆ | ಳು | ವ | ದೇ |
| ತ | ಹಿಂ | ಕ್ತೆ | ತ | ಅಂ | ಸ | ಮ | ರ | ಣ | ರೂ |
| ಸ್ತಿ | ರೀ | ಬಾ | ಕಾ | ತಿ | ಲೇ | ಭ | ನಿ | ಕ್ತ | ಗ |
| ನಿ | ಸ್ತು | ತಿ | ಲ | ಲ | ಮ್ | ಪ್ರ | ನ | ದಿ | ಣೆ |
| ಪ್ರ | ಶ್ಚ | ರೂ | ಲೋ | ಕ | ರಿ | ತ್ವಾ | ಜೀ | ಯ | ದಿ |
| ವಾ | ದೇ | ಯ | ನಿ | ರೂ | ರು | ರ | ಮೆ | ಸ್ವೀ | ಯ |
| ದಿ | ಲೇ | ರ | ತೆ | ನ | ಅಂ | ಹಿಂ | ದಿ | ಮ | ಸ್ತಿ |
| ಗ | ತ್ವಾ | ಮ್ | ಪು | ಜೀ | ಪ್ರ | ತಿ | ಸ | ಲೇ | ಕ್ತೆ |
| ಳು | ತ | ವ | ರಿ | ಸ್ತಿ | ತಿ | ಣೆ | ಮ | ಗ | ತ |







## ಆಟ

**ಬ್ಲೂಸ್ ಅಂಡ್ ರೆಡ್ಸ್**

ಶಿಕ್ಷಕ ಎರಡು ತಂಡಗಳನ್ನು ಮಾಡಬೇಕು, ಅದರಲ್ಲಿ ಒಂದರ ಹೆಸರು "ರೆಡ್ಸ್" ಮತ್ತೊಂದರ ಹೆಸರು "ಬ್ಲೂಸ್" ಎರಡೂ ತಂಡಗಳನ್ನು ಎದುರುಬದುರಾಗಿ ನಿಲ್ಲಿಸಬೇಕು. ಶಿಕ್ಷಕ ಸೂಚನೆಗಳನ್ನು ಕೊಡಬೇಕು. ಉದಾಹರಣೆಗೆ, ಆತನು "ರೆಡ್ಸ್" ಎಂದು ಹೇಳುವಾಗ ಆ ತಂಡದವರು ಅವನ ಹಿಂದಿರುವ ಆಶ್ರಯ ಸ್ಥಾನದ ಬಳಿಗೆ ಓಡಿ ಹೋಗಬೇಕು. ಒಂದುವೇಳೆ ರೆಡ್ ಬ್ಲೂವನ್ನು ಹಿಡಿದುಕೊಂಡರೆ, ಬ್ಲೂ ರೆಡ್ ಅಗುವದು ಮತ್ತು ತನ್ನ ಎದುರಾಳಿ ತಂಡವನ್ನು ಸೇರಿಕೊಳ್ಳುವದು. ಎದುರಾಳಿ ತಂಡದ ಆಟಗಾರರನ್ನು ತನ್ನ ತಂಡಕ್ಕೆ ಹೆಚ್ಚಾಗಿ ಯಾವ ತಂಡ ಸೇರಿಸಿಕೊಳ್ಳುತ್ತದೋ ಆ ತಂಡ ಗೆಲ್ಲುತ್ತದೆ.






## ಹೋಮ್ ವರ್ಕ್

ಊಟದ ಸಮಯದಲ್ಲಿ, ಸಭೆಯ ಚಟುವಟಿಕೆಯಲ್ಲಿ ನಿಮಗಾದ ಉತ್ತಮ ಅನುಭವವನ್ನು ಹಂಚಿಕೊಳ್ಳಿರಿ. ಯಾಕೆ ಎಂಬದನ್ನೂ ಅವರಿಗೆ ಹೇಳಿರಿ.

# ಅಸಾಧ್ಯ ವಿಶ್ವಾಸಿ

12

## ಸೌಲನು ನಂಬಿದನು: ಅಪೊ 9:1-20



### ನಾಟಕ (ಭಾಗ 1)

ದೇವರು ನನ್ನನ್ನು ರಕ್ಷಿಸಲು ಯಾಕೆ ಆರಿಸಿಕೊಂಡನು ಎಂಬದಾಗಿ ಯೋಚಿಸುತ್ತಾ ಒಳಗೆ ಬಂದನು? ಅವನು ಕ್ರೈಸ್ತ ಕುಟುಂಬದವನಾಗಿರಲಿಲ್ಲ ಮತ್ತು ದೇವರ ಬಗ್ಗೆ ಹೆಚ್ಚಿನ ವಿಷಯಗಳು ಅವನಿಗೆ ಗೊತ್ತಿರಲಿಲ್ಲ. ಅವನು ಎಷ್ಟೋ ತಪ್ಪುಗಳು ಹಿಂದೆ ಮಾಡಿದ್ದರೂ, ದೇವರು ಅವನನ್ನು ರಕ್ಷಿಸಿ ಅವನಿಗೆ ಸಹಾಯ ಮಾಡಿದ್ದರಿಂದ, ಅವನಿಗೆ ಗೊಂದಲದ ಜೊತೆಗೆ ಸಂತೋಷವೂ ಬಹಳವಾಗಿತ್ತು. ಆಗ ನಾಯಕನು ಇದಕ್ಕಿಂತ ಹೆಚ್ಚು ಅಸಾಧ್ಯವಾಗಿದ್ದವನನ್ನು ರಕ್ಷಣೆ ಮಾರ್ಗಕ್ಕೆ ನಡೆಸಿದ್ದನ್ನು ಹೋಗಿ ತಿಳಿದುಕೊಳ್ಳೋಣ ಎಂದು ಹೇಳಿದನು. ಅವರು ಸೌಲನನ್ನು (ಪೌಲನನ್ನು) ಭೇಟಿ ಮಾಡಲು ಹಿಂದಿನ ಸಮಯಕ್ಕೆ ಹೋದರು.

### ಪಾಠ

ಯೇಸು ಕ್ರಿಸ್ತನನ್ನು ಶಿಲುಬೆಗೆ ಹಾಕಿದ ನಂತರವೂ, ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವವರನ್ನು ತಡೆಯುವ ಕಾರ್ಯವನ್ನು ಧಾರ್ಮಿಕ ನಾಯಕರು ಮುಂದುವರೆಸಿದರು. ಕ್ರೈಸ್ತರಿಗೆ ಹಿಂಸೆ ಕೊಡುವ ಮೂಲಕ ದೇವರು ಬಯಸುವ ಕಾರ್ಯವನ್ನು ತಾನು ಮಾಡುತ್ತಿದ್ದೇನೆ ಎಂದು ಸೌಲನೆಂಬ ಧಾರ್ಮಿಕ ನಾಯಕನು ಅಂದುಕೊಂಡಿದ್ದನು.

**ಅಪೊ 9:1-22 ಓದಿರಿ.**

ದೇವರ ಮುನ್ನಡೆಸುವಿಕೆಯನ್ನು ಅನುಸರಿಸಿದ ಮತ್ತು ಕ್ರೈಸ್ತರಿಗೆ ಹಿಂಸೆ ಕೊಡುತ್ತಿದ್ದ ಸೌಲನನ್ನು ಭೇಟಿಯಾಗಲು ಅನನೀಯನಲ್ಲಿ ದೊಡ್ಡ ನಂಬಿಕೆ ಇದ್ದಿರಬಹುದು. ಆದರೆ, ಅಮೋಘವಾದ ಫಲಿತಾಂಶಗಳನ್ನು ಗಮನಿಸಿರಿ! ಸೌಲನು ಯೇಸು ಕ್ರಿಸ್ತನನ್ನು ಭೇಟಿಯಾದ ನಂತರ ಅವನ ಜೀವಿತವು ಸಂಪೂರ್ಣವಾಗಿ ಬದಲಾಯಿತು. ಸೌಲ (ಪೌಲನೆಂದೂ ಕರೆಯುತ್ತಾರೆ) ಜನರಿಗೆ ಹಿಂಸೆ ಕೊಡುತ್ತಿದ್ದ ಕೋಪಿಷ್ಟನಾಗಿದ್ದರು, ಆದರೆ ಇತರರಿಗೆ ದೇವರ ಪ್ರೀತಿಯನ್ನು ಸಾರಿ ಹೇಳುವವನಾದನು. ಲೋಕದಾದ್ಯಂತವಿರುವ ಜನರಿಗೆ ಯೇಸು ಕ್ರಿಸ್ತನ ಬಗ್ಗೆ ಹೇಳಲು ಆತನು ಅನೇಕ ಪ್ರಯಾಣಗಳನ್ನು ಸಹ ಮಾಡಿದನು. ಅವನು ಅನೇಕ ಸಭೆಗಳನ್ನು ಸ್ಥಾಪಿಸಿದನು ಮತ್ತು ಕ್ರೈಸ್ತೀಯ ಚರಿತ್ರೆಯಲ್ಲಿ ಬಹಳ ಪ್ರಸಿದ್ಧನಾದ ವ್ಯಕ್ತಿಯಾದನು. ದೇವರು ಪೌಲನ ವಿಷಯದಲ್ಲಿ ಬಹಳ ಸಂತೋಷಿಸಿದನು ಅಲ್ಲದೆ ಅವನು ಬರೆದಿರುವ ಕೆಲವು ವಿಷಯಗಳನ್ನು ಸತ್ಯವೇದದಲ್ಲಿಯೂ ಸೇರಿಸಿದ್ದಾನೆ. ಯೇಸು ಕ್ರಿಸ್ತನು ಮತ್ತು ಆತನನ್ನು ಹಿಂಬಾಲಿಸುವದು ಹೇಗೆ ಎಂಬದನ್ನು ಜನರಿಗೆ ತಿಳಿಸಿದ ಅನನೀಯ ಮತ್ತು ಪೌಲನ ಹಾಗೆ ನಾವೂ ಆಗಬಹುದು.

ದೇವರು ನಮ್ಮ ಮೂಲಕ ಅಥವಾ ನಾವು ಯೇಸು ಕ್ರಿಸ್ತನನ್ನು ಯಾರಿಗೆ ಪರಿಚಯ ಮಾಡಿಸುತ್ತೇವೋ ಅವರ ಮೂಲಕ ಏನು ಮಾಡುತ್ತಾನೆ ಎಂಬದನ್ನು ಈ ಲೋಕದಲ್ಲಿ ಒಂದುವೇಳೆ ನಾವು ನೋಡದೆ ಇರಬಹುದು, ಆದರೆ ಪರಲೋಕದಲ್ಲಿ ನಮಗೆ ಬಹಳ ಆಶ್ಚರ್ಯವಾಗುವದು ಮತ್ತು ದೇವರು ನಮ್ಮ ಜೀವಿತದ ಮೂಲಕ ಮಾಡಿದ ಕಾರ್ಯಗಳನ್ನು ತಿಳಿದುಕೊಳ್ಳುವದು ಸಂತೋಷದಿಂದ ದೇವರನ್ನು ಸ್ತುತಿಸುತ್ತೇವೆ.

### ಕಂಠಪಾಠ ವಚನ

ಪ್ರೇಷಿತರ ಕಾರ್ಯಕಲಾಪಗಳು 1:8 "ಆದರೆ ಪವಿತ್ರಾತ್ಮ ಅವರು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯುತರಾಗುವಿರಿ. ಆಗ ನೀವು ಜೆರುಸಲೇಮಿನಲ್ಲೂ ಜುದೇಯದಲ್ಲೂ ಸಮಾರಿಯದಲ್ಲೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗುವಿರಿ," ಎಂದರು."


### ನಾಟಕ (ಭಾಗ 2)

ಹಿಂದಿರುಗಿ ಬಂದ ನಂತರ, ಸೌಲನ ಜೀವಿತದಲ್ಲಿ ತಾವು ನೋಡಿದ ದೊಡ್ಡ ಬದಲಾವಣೆಯ ವಿಷಯದಲ್ಲಿ ಮಾತನಾಡುತ್ತಿದ್ದರು. ಸೌಲನು ದರ್ಶನದಲ್ಲಿ ನೋಡಿದ ಸಂಗತಿಯನ್ನು ತಾವೂ ನೋಡಬೇಕೆಂದು ಅವರು ಬಯಸಿದರು ಆದರೆ ಒಬ್ಬನು ಕುರುಡನಾಗಿ ನಂತರ ಮತ್ತೆ ಕಣ್ಣು ದೃಷ್ಟಿ ಪಡೆಯುವದನ್ನು ನೋಡುವದು ನಿಜವಾಗಿಯೂ ಅದ್ಭುತವಾದ ಕಾರ್ಯವಾಗಿದೆ. ಕ್ರೈಸ್ತರನ್ನು ಕೊಲ್ಲಲು ಮತ್ತು ಸೆರೆಮನೆಗೆ ಹಾಕಿಸಲು ಪ್ರಯತ್ನಿಸುತ್ತಿದ್ದ ವ್ಯಕ್ತಿಯನ್ನು ರಕ್ಷಣೆ ಮಾರ್ಗಕ್ಕೆ ನಡೆಸಲು ದೇವರು ಶಕ್ತನಾಗಿರುವಾಗ, ತನ್ನನ್ನೂ ರಕ್ಷಿಸಲು ಶಕ್ತನಾಗಿದ್ದಾನೆ ಎಂಬದನ್ನು ಏಜೆಂಟ್ ಮನವರಿಕೆ ಮಾಡಿಕೊಂಡನು. ಆದರೆ ಯಾವುದಕ್ಕಾಗಿ? ಸೌಲನು (ಪೌಲನು) ಹೇಗೆ ಲೋಕ ಸಂಚಾರ ಮಾಡಿ ಯೇಸು ಕ್ರಿಸ್ತನ ಬಗ್ಗೆ ಜನರಿಗೆ ಹೇಳಿದನು ಮತ್ತು ಸತ್ಯವೇದದಲ್ಲಿ ನಾವು ಹೊಸ ಒಡಂಬಡಿಕೆ ಎಂದು ಕರೆಯುವದರ ಬಹುತೇಕ ಭಾಗಗಳನ್ನು ಬರೆದನು ಎಂಬದನ್ನು ನಾಯಕನು ಕ್ಲುಪ್ತವಾಗಿ ವಿವರಿಸಿದನು. ದೇವರು ತನ್ನ ಮೂಲಕ ಏನು ಮಾಡುವನೋ ಎಂದು ಯೋಚಿಸಿ ಏಜೆಂಟ್ ಬಹಳವಾಗಿ ಸಂತೋಷಿಸಿದನು.

### ನ್ಯಾಯ

ಕೆಲವೊಮ್ಮೆ ದೇವರು ಜನರು ಯಾರೊಂದಿಗಾದರೂ ತಪ್ಪಾಗಿ ನಡೆದುಕೊಳ್ಳುತ್ತಾ ಇರುವದಾದರೆ ಅವರೊಂದಿಗೆ ಮಾತನಾಡುವಂತೆ ನಮ್ಮನ್ನು ಪ್ರೇರೇಪಿಸುವನು. ನಾವು ಆತನ ಮುನ್ನಡೆಸುವಿಕೆಯನ್ನು ಹಿಂಬಾಲಿಸುವಾಗ ದೊಡ್ಡ ಕಾರ್ಯಗಳು ನಡೆಯುತ್ತವೆ.

### ಜೀವನ ಚರಿತ್ರೆ (ಲಾಗಪಟು)



ಅಪಾಯಗಳು ಮತ್ತು ಮಹಾ ಕೌಶಲ್ಯದೊಂದಿಗೆ, ಜಿಗಿಯುವ, ಕುಣಿಯುವ ಅಥವಾ ಗಟ್ಟಿಹಗ್ಗ, ಸರ್ಕಸ್ ಇತ್ಯಾದಿಗಳಲ್ಲಿ, ಪ್ರದರ್ಶನದ ನಿಮಿತ್ತ ಇತರೆ ವ್ಯಾಯಾಮಗಳನ್ನು ಮಾಡುವ ವ್ಯಕ್ತಿಯನ್ನು ಲಾಗಪಟು ಎಂದು ಕರೆಯುತ್ತಾರೆ.

ಜವಾಬ್ದಾರಿಕೆಗಳು: ಲಾಗಪಟು ಕಲಾವಿದನಾಗಿದ್ದು ಸಮತೋಲನ, ಶಕ್ತಿ, ಏಕಾಗ್ರತೆ ಮತ್ತು ಜಿಗಿಯುವ ಸಾಮರ್ಥ್ಯಗಳ

ಸಂಬಂಧದಲ್ಲಿ ವಿವಿಧ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾನೆ. ಡೊಂಬರಾಟವು ಕಲೆ ಮತ್ತು ಕ್ರೀಡೆಯ ಸಂಗಮ ಎಂದು ಹೇಳಬಹುದು. ಯೇಸು ಕ್ರಿಸ್ತನು ಬರುವದಕ್ಕಿಂತ ಹಲವು ವರ್ಷಗಳ ಹಿಂದೆ ಸಂಸ್ಕಾರದ ಉದ್ದೇಶಗಳ ನಿಮಿತ್ತ ಸಾರ್ವಜನಿಕವಾಗಿ ಸಾಹಸಗಳನ್ನು ಮಾಡುವ ಜನರಿದ್ದರು.

ಅವಕಾಶಗಳು: ಸಮ್ಮೇಳನಗಳಲ್ಲಿ ಜನರ ಗುಂಪುಗಳನ್ನು ಆಕರ್ಷಿಸುವ ಅಥವಾ ಯೇಸು ಕ್ರಿಸ್ತನ ಬಗ್ಗೆ ಸಾಕ್ಷಿ ಕೊಡುವ ಅವಕಾಶವು ಕ್ರೈಸ್ತೀಯ ಲಾಗಪಟುಗಳಿಗೆ ತಮ್ಮ ಕ್ರಿಯೆಗಳ ಮೂಲಕ ದೊರೆಯುತ್ತದೆ.

ಇದಲ್ಲದೆ ಕೌಶಲ್ಯವಿರುವ ಮತ್ತು ಶಿಸ್ತು ಇರುವ ಜನರು ತಮ್ಮ ಆರೋಗ್ಯವನ್ನು ಗಂಭೀರವಾಗಿ ಪರಿಗಣಿಸಿಕೊಳ್ಳಲು ಪ್ರೋತ್ಸಾಹ ನೀಡುತ್ತದೆ ಇದರಿಂದ ಸಮಯವನ್ನು ಸಕಾರಾತ್ಮಕವಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ.

ಚಮತ್ಕಾರಿಕ ಅಂಗಸಾಧನೆಯ ವಿಷಯಕ್ಕೆ ಬಂದರೆ, ಇದೊಂದು ಕ್ರೀಡೆಯಾಗಿದ್ದು ಕ್ರೀಡಾಪಟುಗಳು ಪರಸ್ಪರ ಸ್ಪರ್ಧಿಸುತ್ತಾರೆ ಮತ್ತು ವಿವಿಧ ಅಂಕಗಳನ್ನು ಗಳಿಸುತ್ತಾರೆ. ಸ್ಪರ್ಧಿಗಳು ವಿವಿಧ ಪ್ರದರ್ಶನಗಳನ್ನು ಕೊಡಬೇಕು, ಜೊತೆಗೆ ಸಾಗುವ ಸಂಗೀತ ಅವರು ತಮ್ಮ ನೃತ್ಯಗಳನ್ನು ಸಂಯೋಜನೆ ಮಾಡಲು ಸಹಾಯ ಮಾಡುತ್ತದೆ. ಇವು ಹೆಚ್ಚು ಜನರನ್ನು ಆಕರ್ಷಿಸುತ್ತವೆ ಮತ್ತು ಉತ್ತಮವಾದ ಸಾಕ್ಷಿ ಹಂಚಿಕೊಳ್ಳಲು ಮುನ್ನಡೆಸುತ್ತವೆ.

### ಪ್ರಶ್ನೆಗಳು ಮತ್ತು ಉತ್ತರಗಳು

1. ನಾನು ಸಂಪೂರ್ಣವಾಗಿ ಬದಲಾಗಬಹುದೇ?

ಹೌದು, ಆದರೆ ಒಂದುವೇಳೆ ನಾವು ನಮ್ಮ ಸ್ವಂತ ಬಲದಿಂದ ಪ್ರಯತ್ನಿಸಿದರೆ ಸಾಧ್ಯವಿಲ್ಲ. ನಾವು ನಮ್ಮ ಜೀವನ, ಭಾವನೆಗಳು ಮತ್ತು ಆಲೋಚನೆಗಳನ್ನು ಯೇಸು ಕ್ರಿಸ್ತನಿಗೆ ಒಪ್ಪಿಸುವದು ಬಹಳ ಪ್ರಾಮುಖ್ಯವಾಗಿದೆ. ಹೀಗೆ ನಾವು ಸಂಪೂರ್ಣವಾಗಿ ಬದಲಾಗಬಹುದು ಯಾಕಂದರೆ ನಾವು ದೇವರ ಬಲವನ್ನು ಆತುಕೊಂಡಿರುತ್ತೇವೆ. ಚರಿತ್ರೆಯಲ್ಲಿ ನಾವು ನೋಡುವದಾದರೆ ಸಭೆಯ ಹಿಂಸಕನಾಗಿದ್ದ ಸೌಲನು ಅಪೊಸ್ತಲನಾಗಿ ಸಂಪೂರ್ಣ ಬದಲಾದನು ಆಗಿನ ಕಾಲದ ಲೋಕದ ಜನರ ಮೇಲೆ ಬಹಳವಾಗಿ ಪ್ರಭಾವ ಬೀರಲು ಮತ್ತು ಹೊಸ ಒಡಂಬಡಿಕೆಯ ಬಹುತೇಕ ಭಾಗಗಳನ್ನು ಬರೆಯಲು ದೇವರು ಅವನನ್ನು ಉಪಯೋಗಿಸಿಕೊಂಡನು. ಅಪೊಸ್ತಲರ ಕೃತ್ಯಗಳಲ್ಲಿ ಪೌಲನ "ಕಾರ್ಯಗಳನ್ನು" ನಾವು ನೋಡಬಹುದು. ಸೌಲನು ಸಂಪೂರ್ಣವಾಗಿ ಬದಲಾಗುತ್ತಾ ಇದ್ದನು.

2. ದೇವರು ನನಗೆ ಹೇಳುವ ವಿಷಯಗಳು ಯಾವಾಗಲು ಯಾಕೆ ಅರ್ಥ ಆಗುವದಿಲ್ಲ?

ದೇವರು ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ವಿವಿಧ ರೀತಿಯಲ್ಲಿ ಕಾರ್ಯಮಾಡುತ್ತಾನೆ. ಅದು ನಿಮ್ಮ ಕೈ ಬೆರಳಿನಂತಿರುತ್ತದೆ: ಅವುಗಳು ಬೇರೆ ಬೇರೆ ಕಾರ್ಯಗಳನ್ನು ಮಾಡುತ್ತವೆ, ಆದರೂ ಅವೆಲ್ಲವೂ ಉಪಯುಕ್ತವಾಗಿವೆ. ಕೆಲವೊಮ್ಮೆ ನಮಗೆ ಮಾಡಲು ಇಷ್ಟವಿಲ್ಲದ ಕಾರ್ಯಗಳನ್ನು ಬೇರೆಯವರು ಯಾಕೆ ಮಾಡುತ್ತಾರೆ ಎಂಬದೇ ನಮಗೆ ಅರ್ಥವಾಗುವದಿಲ್ಲ ಮತ್ತು ಅವರ ಮನೋಭಾವನೆಯನ್ನು ಅರ್ಥಮಾಡಿಕೊಳ್ಳಲು ಆಗುವುದೇ ಇಲ್ಲ. ಆ ವ್ಯಕ್ತಿಗೆ ದೇವರು ಆ ವ್ಯಕ್ತಿಗೆ ಏನು ಹೇಳಿದ್ದಾನೆ ಎಂಬದನ್ನು ನಮಗೆ ತಿಳಿದುಕೊಳ್ಳಲು ಆಗುವದಿಲ್ಲ. ಪೇತ್ರ ಮತ್ತು ಪೌಲನ ವಿಷಯದಲ್ಲಿ ಹೀಗೆಯೇ ಆಯಿತು. ಅನ್ಯರಿಗೆ ರಕ್ಷಣೆಯ ಬಗ್ಗೆ ಸಾರುವ ವಿಷಯದಲ್ಲಿ ಪೇತ್ರನು ಪರಿಣಾಮಕಾರಿಯಾಗಿರಲಿಲ್ಲ, ಯಾಕಂದರೆ ದೇವರು ಆ ಕಾರ್ಯವನ್ನು ಪೌಲನಿಗೆ ಒಪ್ಪಿಸಿದನು.

## ಒಗಟಿನ ಉತ್ತರಗಳು

### ಪದ ಹುಡುಕುವದು


| | | | | | | | |
|---|---|---|---|---|---|---|---|
| ಸ | ಮಾ | ರ್ಯ | ಕೆ | ಕ | ದು | ನಿ | ದಿ |
| ಯ | ಶಿ | ದೇ | ಣೆ | ವ | ಯೂ | ರೂ | ಣೆ |
| ವಿ | ಕ್ಷೆ | ಲು | ಳ್ಳು | ನಾ | ದಾ | ರೀ | ಳು |
| ಕ್ಷಿ | ಶ್ವಾ | ಕೊ | ಬೆ | ಕ್ಷ | ಯ | ಗ | ಶಿ |
| ಮ | ದಿ | ಸಿ | ಗ | ಯ | ಕ್ಷಿ | ಕ | ಕ್ಷೆ |
| ಹೊಂ | ಸಂ | ತೋ | ಷ | ಸಾ | ಮ | ತ | ರು |
| ಕೆ | ನಿ | ಸ | ಸ | ರೂ | ಶ | ರ | ಗ |
| ಸ್ತು | ತಿ | ತ್ಯ | ಲೇ | ದೇ | ಸ್ತಿ | ಯೆ | ಣ |
| ಯ | ಗ | ವೇ | ಮ್ | ಕ್ಷೆ | ಣೆ | ರೂ | ಪ್ರ |
| ಮಾ | ರ್ಗ | ದ | ರ್ಶ | ನ | ಕೆ | ಸ | ವಾ |
| ದಿ | ಸೌ | ಕೊ | ಳ್ಳು | ಬಿ | ಕೊ | ಲೇ | ದಿ |
| ಸಾ | ಲ | ಶಿ | ನಂ | ಸ್ತಿ | ತಿ | ಮು | ಗ |




| ಸೌಲ | ಪೌಲ |
|---|---|
| ಅವನು ಕ್ರೈಸ್ತರನ್ನು ಕೊಲ್ಲುತ್ತಿದ್ದನು | ಸುವಾರ್ತೆ ಸಾರಿದನು |
| ಧಾರ್ಮಿಕ ನಾಯಕ | ಪ್ರೀತಿಸುವವನಾಗಿದ್ದನು |
| ಯೇಸು ಕ್ರಿಸ್ತನಲ್ಲಿ ನಂಬಿಕೆ ಇಡದಂತೆ ತಡೆಯುತ್ತಿದ್ದನು | ಯೇಸು ಕ್ರಿಸ್ತನ ಸುವಾರ್ತೆ ಸಾರುತ್ತಾ ಲೋಕವೆಲ್ಲಾ ಪ್ರಯಾಣಿಸಿದನು |
| ಕ್ರೈಸ್ತರನ್ನು ಸೆರೆಮನೆಗೆ ಹಾಕಿಸುತ್ತಿದ್ದನು | ವಿವಿಧ ಕಡೆಗಳಲ್ಲಿ ಸಭೆಗಳನ್ನು ಪ್ರಾರಂಭಿಸಿದನು |

## ಆಟ

**ಒಂದು ಕಡೆಯಿಂದ ಮತ್ತೊಂದು ಕಡೆಗೆ**



ಶಿಕ್ಷಕ ಗುಂಪನ್ನು ಎರಡು ಸಾಲಾಗಿ ವಿಭಾಗಿಸಬೇಕು. ಶಿಕ್ಷಕ ಸೂಚನೆ ಕೊಡುವಾಗ, ಸಾಲಿನ ಮುಂಭಾಗದಲ್ಲಿರುವ ಆಟಗಾರರು ಪಕ್ಕದ ಕಡೆಗೆ ಓಡಬೇಕು, ಆಗ ಅವರ ಬಲಗೈ ಮುಕ್ತಾಯದ ಗೆರೆಯ ಕಡೆಗೆ ಇರುತ್ತದೆ. ಅವರು ಮುಕ್ತಾಯದ ಗೆರೆಯನ್ನು ತಲುಪಿದ ನಂತರ ಹಿಂದೆ ತಿರುಗದೆ ಹಾಗೆಯೇ ಪಕ್ಕದ ಕಡೆಗೆ ಓಡಬೇಕು. ಅವರ ತಂಡದ ಉಳಿದ ಸದಸ್ಯರ ಬಳಿಗೆ ಬಂದಾಗ, ಸಾಲಿನಲ್ಲಿರುವ ಮತ್ತೊಬ್ಬ ಆಟಗಾರನನ್ನು ಮುಟ್ಟಬೇಕು ಮತ್ತು ಸಾಲಿನ ಕೊನೆಯಲ್ಲಿ ಹೋಗಿ ನಿಲ್ಲಬೇಕು. ಒಬ್ಬರಾದ ನಂತರ ಒಬ್ಬರು ಹೀಗೆಯೇ ಮಾಡಬೇಕು, ಕಡೆಯದಾಗಿ ಎಲ್ಲರೂ ಓಡಿ ಮುಗಿಸಬೇಕು. ಯಾವ ತಂಡದವರು ಮೊದಲು ಮುಗಿಸುತ್ತಾರೋ ಅವರು ಗೆಲ್ಲುತ್ತಾರೆ.




## ಹೋಮ್ ವರ್ಕ್

ನೀವು ಯೇಸು ಕ್ರಿಸ್ತನನ್ನು ಹೇಗೆ ನಂಬಿದಿರಿ, ಆತನ ಬಗ್ಗೆ ನಿಮಗೆ ಹೇಳಿದವರು ಯಾರು ಎಂಬದನ್ನು ನಿಮ್ಮ ತರಗತಿಯವರಿಗೆ ಹೇಳಿರಿ. ಒಂದುವೇಳೆ ಯೇಸು ಕ್ರಿಸ್ತನ ಬಗ್ಗೆ ಬೋಧಿಸಬೇಕೆಂದು ನಿಮಗೆ ಅನ್ನಿಸಿದರೆ, ನೀವು ಸಭಾಪಾಲಕರಾಗುತ್ತೀರೋ, ಸುವಾರ್ತಿಕನಾಗುತ್ತೀರೋ, ಅಥವಾ ಬೇರೆ ಯಾವುದಾದರು ಕಾರ್ಯವನ್ನು ಮಾಡುತ್ತೀರೋ.

# ನಾನೂ ಬರಬಹುದೇ?

13



**ಪೇತ್ರನು ರಕ್ಷಣೆಯ ಸಂದೇಶವನ್ನು ಸಾರಿದನು: ಅಪೊ 2:14,36-40**

**ನಾಟಕ (ಭಾಗ 1)**

ತನಿಖಾಧಿಕಾರಿ ಮತ್ತು ಏಜೆಂಟ್ ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಬಗ್ಗೆ ಹಾಗೂ ದೇವರು ತಮ್ಮನ್ನು ಉಪಯೋಗಿಸಿಕೊಳ್ಳುವನು ಎಂಬ ದೃಢವಾದ ಮನವರಿಕೆಯುಳ್ಳವರಾಗಿದ್ದರು. ಆದರೆ ಹೇಗೆ? ಯೇಸು ಕ್ರಿಸ್ತನು ಪರಲೋಕಕ್ಕೆ ಹೋದ ನಂತರ ಶಿಷ್ಯರು ಏನು ಮಾಡಿದರು ಎಂಬದನ್ನು ತಿಳಿಯಲು ಹಿಂದಿನ ಕಾಲಕ್ಕೆ ಹೋಗೋಣ ಎಂದು ನಾಯಕ ಹೇಳಿದನು.

**ಪಾಠ**

**ಅಪೊ 2:1-14,36-40 ಓದಿರಿ**

ಯೇಸು ಕ್ರಿಸ್ತನು ಯಾರೆಂದು ತನಗೆ ಗೊತ್ತೇ ಇಲ್ಲ ಎಂದು ಪೇತ್ರನು ಇತ್ತೀಚೆಗೆ ತಾನೇ ಹೇಳಿದ್ದನು. ಆದರೆ ಈಗ ಯೇಸು ಕ್ರಿಸ್ತನು ಪುನರುತ್ಥಾನ ಹೊಂದಿದ ನಂತರ ಅವನನ್ನು ಭೇಟಿ ಮಾಡಿದನು ಮತ್ತು ಪುನಃ ಸೇರಿಸಿಕೊಂಡನು ಹಾಗೂ ಪೇತ್ರನು ಪವಿತ್ರಾತ್ಮಭರಿತನಾದನು. ಅವನ ದುಃಖವು ಸಂತೋಷವಾಗಿ ಬದಲಾಯಿತು. ದೇವರಿಂದ ಅವನು ಪಡೆದುಕೊಂಡ ಹೊಸ ಶಕ್ತಿಯ ಮೂಲಕ ಎದ್ದು ನಿಂತು ಜನರಿಗೆ ಬೋಧಿಸಿದನು.

ಅವನು ಅವರಿಗೆ ಕೆಲವು ಗಂಭೀರವಾದ ವಿಷಯಗಳನ್ನು ಹೇಳಿದನು ಆದರೂ ರಕ್ಷಣೆಯ ಮಾರ್ಗವನ್ನು ವಿವರಿಸಿದನು.

ನಾವೆಲ್ಲರೂ ತಪ್ಪುಗಳನ್ನು ಮಾಡಿದ್ದೇವೆ. ನಾವು ಸುಳ್ಳುಗಳನ್ನು ಹೇಳಿದ್ದೇವೆ ಅಥವಾ ಸ್ವಾರ್ಥಿಗಳಾಗಿ ನಡೆದುಕೊಂಡಿದ್ದೇವೆ ಅಥವಾ ಇತರರನ್ನು ಕಡೆಗಣಿಸಿದ್ದೇವೆ, ಇವುಗಳನ್ನು ಪಾಪ ಎಂದು ಕರೆಯುತ್ತಾರೆ. ನಾವು ಪಾಪ ಸ್ವಭಾವದಲ್ಲಿಯೇ ಜನಿಸಿರುವ ಕಾರಣ, ದೇವರಿಂದ ಬೇರ್ಪಟ್ಟಿದ್ದೇವೆ, ನಾಚಿಕೆ ಮತ್ತು ಆತನ ಕುಟುಂಬದಿಂದ ಹೊರಗೆ ಇದ್ದೇವೆ ಇದಲ್ಲದೆ ಅಂಧಕಾರ ಮತ್ತು ಮರಣದ ಶಕ್ತಿಗೆ ಒಳಗಾಗಿದ್ದೇವೆ. ಆದರೂ ನಮಗೊಂದು ಶುಭವಾರ್ತೆ ಇದೆ! ಯೇಸು ಕ್ರಿಸ್ತನು ನಮಗಾಗಿ ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಕೊಟ್ಟನು ಮತ್ತು ಮತ್ತೆ ಬದುಕುತ್ತಾ ಇದ್ದಾನೆ! ಯೇಸು ಕ್ರಿಸ್ತನಲ್ಲಿ ನಾವು ಇಡುವ ನಂಬಿಕೆ ನಮ್ಮ ಜೀವಿತದಲ್ಲಿರುವ ಪಾಪದ ಅಧಿಕಾರವನ್ನು ಮುರಿದು ನಮ್ಮನ್ನು ದೇವರ ಸಂಪರ್ಕಕ್ಕೆ ನಡೆಸುತ್ತದೆ, ನಾಚಿಕೆಯನ್ನೆಲ್ಲಾ ತೆಗೆದು ಶಾಶ್ವತವಾಗಿ ಆತನ ಕುಟುಂಬಕ್ಕೆ ಸೇರಿಸುತ್ತದೆ ಮತ್ತು ಅಂಧಕಾರದ ಶಕ್ತಿಯಿಂದ ನಮ್ಮನ್ನು ಬಿಡಿಸಿ ಆತನ ಬೆಳಕು ಹಾಗೂ ಪ್ರೀತಿಯ ಅಧಿಕಾರಕ್ಕೆ ನಡೆಸುತ್ತದೆ.

ಯೇಸು ಕ್ರಿಸ್ತನ ಮೂಲಕ ದೇವರ ವರವನ್ನು ಅಂಗೀಕರಿಸಿಕೊಳ್ಳಲು ಒಂದುವೇಳೆ ನೀವು ಬಯಸುವದಾದರೆ, ಇಂಥ ಪ್ರಾರ್ಥನೆಯನ್ನೇ ಮಾಡಬೇಕೆಂದು ಸತ್ಯವೇದದಲ್ಲಿ ಎಲ್ಲಿಯೂ ಇಲ್ಲ, ಆದರೆ ಈ ರೀತಿಯಾಗಿ ಇರುವದಾದರೆ ಕಾರ್ಯ ಸಾಧಕವಾಗುತ್ತದೆ. ಯೇಸು ಕ್ರಿಸ್ತನು ಆಸಕ್ತಿಯಿಂದ ನಿಮಗಾಗಿ ಕಾಯುತ್ತಾ ಇದ್ದಾನೆ.

“ಕರ್ತನಾದ ಯೇಸುವೇ, ನಾನು ನಿನ್ನನ್ನು ವೈಯಕ್ತಿಕವಾಗಿ ತಿಳಿದುಕೊಳ್ಳಲು ಬಯಸುತ್ತೇನೆ. ನನ್ನ ಪಾಪಗಳಿಗಾಗಿ ಶಿಲುಬೆಯ ಮೇಲೆ ಪ್ರಾಣ ಕೊಟ್ಟದ್ದಕ್ಕಾಗಿ ನಿನಗೆ ಸ್ತೋತ್ರ. ನಾನು ನನ್ನ ಜೀವನದ ಬಾಗಿಲನ್ನು ತೆರೆದು ನಿನ್ನನ್ನು ನನ್ನ ರಕ್ಷಕನನ್ನಾಗಿ ಹಾಗೂ ಕರ್ತನಾಗಿ ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಪಾಪಗಳನ್ನು ಕ್ಷಮಿಸಿ ನನಗೆ ನಿತ್ಯಜೀವ ಕೊಟ್ಟದ್ದಕ್ಕಾಗಿ ನಿನಗೆ ಸ್ತೋತ್ರ. ನನ್ನ ಜೀವನದ ಸಿಂಹಾಸದ ಮೇಲೆ ನೀನು ಕುಳಿತುಕೋ. ನಾನು ಯಾವ ರೀತಿಯ ವ್ಯಕ್ತಿಯಾಗಬೇಕೆಂದು ನೀನು ಬಯಸುವೆಯೋ ಅಂಥ ವ್ಯಕ್ತಿಯನ್ನಾಗಿ ಮಾಡು.” ಒಂದುವೇಳೆ ನೀವು ಈ ಪ್ರಾರ್ಥನೆಯನ್ನು ಮಾಡುವದಾದರೆ, ಪರಲೋಕದಲ್ಲಿ ಹೆಚ್ಚು ಸಂತೋಷವಾಗುತ್ತದೆ!

## ಕಂಠಪಾಠ ವಚನ

ಯೊವಾನ್ನ 3:16 "ದೇವರು ಲೋಕವನ್ನು ಎಷ್ಟಾಗಿ ಪ್ರೀತಿಸಿದರೆಂದರೆ ತಮ್ಮ ಏಕೈಕ ಪುತ್ರನನ್ನೇ ಧಾರೆಯೆರೆದರು; ಆತನಲ್ಲಿ ವಿಶ್ವಾಸವಿಟ್ಟ ಯಾರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂಬುದೇ ದೇವರ ಉದ್ದೇಶ."

## ನಾಟಕ (ಭಾಗ 2)

ಹಿಂದಿರುಗಿ ಬಂದ ನಂತರ, ತಂಡದವರು ಬಹಳ ಉತ್ಸುಕರಾಗಿದ್ದರು, ಓದುಬರಹ ಗೊತ್ತಿಲ್ಲದ್ದ ಬೆಸ್ತನಾಗಿದ್ದ ಪೇತ್ರನು ಯೇಸು ಕ್ರಿಸ್ತನು ಯಾರು ಎಂದೇ ತನಗೆ ಗೊತ್ತಿಲ್ಲ ಎಂದು ಹೇಳಿದವನು ಎದ್ದು ನಿಂತು ಧೈರ್ಯವಾಗಿ ಜನರ ಗುಂಪಿಗೆ ಬೋಧನೆ ಮಾಡಿದ್ದನು ಅವರು ನೋಡಿದ್ದರು. ಶಿಷ್ಯರ ಹಾಗೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಎಲ್ಲರೂ ಪವಿತ್ರಾತ್ಮನನ್ನು ಹೊಂದುವರು ಮತ್ತು ಧೈರ್ಯವಾಗಿ ಮಾತನಾಡಲು ಅಥವಾ ಸಭೆ ಮತ್ತು ದೇವರ ಜನರ ಸೇವೆ ಮಾಡಲು ಅವರ ಸಾಮರ್ಥ್ಯದನುಸಾರ ಆತನು ಅವರನ್ನು ಉಪಯೋಗಿಸಿಕೊಳ್ಳುವನು ಎಂದು ನಾಯಕನು ಏಜೆಂಟ್ ಮತ್ತು ತನಿಖಾಧಿಕಾರಿಗೆ ಹೇಳುವ ಮೂಲಕ ಅವರನ್ನು ಪ್ರೋತ್ಸಾಹಪಡಿಸಿದನು. ಯೌವನಸ್ಥ ಮಕ್ಕಳಗೆ ಸಹಾಯ ಮಾಡುವ ಮತ್ತು ಬೇರೆ ದೇಶಗಳ ಮಕ್ಕಳನ್ನು ಸ್ನೇಹಿತರನ್ನಾಗಿ ಮಾಡುವ ವಿಷಯದಲ್ಲಿ ತನಿಖಾಧಿಕಾರಿಯು ಈಗಾಗಲೇ ಮುಂದಿದ್ದಳು. ಏಜೆಂಟ್ ಗೋಡೆಗೆ ಹಾಕುವ ವಾಕ್ಯಗಳ ವ್ಯಾಪಾರವನ್ನು ಬೆಳೆಸುತ್ತಿದ್ದನು ಮತ್ತು ಅವನು ಯಾವಾಗಲೂ ಕುತೂಹಲವುಳ್ಳವನಾಗಿ ಕಾರ್ಯಗಳನ್ನು ಸಾಧಿಸುವದು ಹೇಗೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಾ ಇದ್ದನು. ಈಗ ಅವರಿಬ್ಬರೂ ಯೇಸು ಕ್ರಿಸ್ತನ ಜೀವಿತದ ಅದ್ಭುತವಾದ ಕಾರ್ಯಗಳನ್ನು ನೋಡಿದ್ದರು. ಪವಿತ್ರಾತ್ಮನ ಸಹಾಯದಿಂದ, ಯೇಸು ಕ್ರಿಸ್ತನ ಬಗ್ಗೆ ಜನರಿಗೆ ಹೇಳಲು ಮತ್ತು ತಮ್ಮ ಜೀವಿತದಲ್ಲಿಯೂ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಂತೆ ಅವರನ್ನು ಆಹ್ವಾನಿಸಲು ತಾವು ನೋಡಿದ ವಿಷಯಗಳನ್ನೆಲ್ಲಾ ಉಪಯೋಗಿಸಿಕೊಂಡರು!

## ನ್ಯಾಯ

ದೇವರು ನಿಮ್ಮನ್ನು ಬಹಳವಾಗಿ ಪ್ರೀತಿಸುವದರಿಂದ ನೀವು ನಿತ್ಯಜೀವವನ್ನು ಪಡೆಯಬೇಕೆಂದು ತನ್ನ ಒಬ್ಬನೇ ಮಗನನ್ನು ನಿಮಗಾಗಿ ಕೊಟ್ಟನು! ನಮ್ಮನ್ನೇ ಇತರರಿಗೆ ಕೊಡುವ ಮೂಲಕ ಆತನ ಈ ಪ್ರೀತಿಯನ್ನು ನಾವು ಅವರಿಗೋ ತೋರಿಸೋಣ.

## ಜೀವನ ಚರಿತ್ರೆ (ಮೀನುಗಾರ)


ಜೀವನ ಸಾಗಿಸಲು ಮೀನು ಹಿಡಿಯುವ ವ್ಯಕ್ತಿಯನ್ನು ಮೀನುಗಾರ ಎಂದು ಕರೆಯುತ್ತಾರೆ.

ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಮತ್ತು ಮಾರಲು ಬೇಕಾಗುವಷ್ಟು ಮೀನುಗಳನ್ನು ಅವರು ಹಿಡಿಯತ್ತಾರೆ. ಮಾನವ ಕುಲದ ಪ್ರಾರಂಭದಿಂದಲೂ ಈ ವೃತ್ತಿ ಚಾಲನೆಯಲ್ಲಿದೆ.

ಜವಾಬ್ದಾರಿಕೆಗಳು: ಮೀನುಗಾರರು ಮೀನು ಹಿಡಿಯಲು ಸಮುದ್ರಕ್ಕೆ ಹೋಗುತ್ತಾರೆ ಮತ್ತು ಬರುವಾಗ ಮೀನು ಮತ್ತ ಚಿಪ್ಪುಮೀನು ತೆಗೆದುಕೊಂಡು ಬರುತ್ತಾರೆ. ಮೀನು ಹಿಡಿಯವ ತಂಡದಲ್ಲಿ ವಿವಿಧ ಕಾರ್ಯ ಹಾಗೂ ಜವಾಬ್ದಾರಿಕೆಗಳನ್ನು ಮಾಡುವ ಜನರು ಇರುತ್ತಾರೆ. ಸಾಧನಗಳನ್ನು ನೋಡಿಕೊಳ್ಳುವದು, ದೋಣಿ ಸಾಗಿಸುವದು, ಮೀನುಗಳನ್ನು ಬೇರೆ ಮಾಡುವದು, ಅವುಗಳನ್ನು ಕಂಟೇನರ್ ಗಳಲ್ಲಿ ಇಡುವದು, ಕೆಲವೊಮ್ಮೆ ಅವುಗಳನ್ನು ಕಟ್ಟುವದು (ಆಕ್ಟೊಪಸ್ ಅನ್ನು ಚೆನ್ನಾಗಿ ಕಟ್ಟಲು ಆಗುವದಿಲ್ಲ) ಮತ್ತು ಅವುಗಳನ್ನು ಮಾರುಕಟ್ಟಗೆ ತರುವದು ಇಂಥ ಕಾರ್ಯಗಳನ್ನು ಮಾಡಬೇಕಾಗುತ್ತದೆ.

ಅವಕಾಶಗಳು: ಕ್ರೈಸ್ತೀಯ ಮೀನುಗಾರನಿಗೆ ತನ್ನ ತಂಡದವರ ಜೊತೆಯಲ್ಲಿ ಚೆನ್ನಾಗಿ ಕೆಲಸ ಮಾಡುವ, ಎಲ್ಲಿ ಮೀನು ಹಿಡಿಯಬೇಕು ಎಂಬ ವಿಷಯದಲ್ಲಿ ಪ್ರಾಮಾಣಿಕನಾಗಿರುವ ಮತ್ತು ಬೆಲೆ ನಿಗದಿಪಡಿಸುವ ವಿಷಯದಲ್ಲಿ ಯಥಾರ್ಥತೆಯನ್ನು ತೋರುವ ಅವಕಾಶ ಇರುತ್ತದೆ. ಅವರು ಸಮಾಜಕ್ಕೆ ಉತ್ತಮವಾದ ಸೇವೆಯನ್ನು ಮಾಡುತ್ತಾರೆ ಯಾಕಂದರೆ ಮೀನು ಬಹುತೇಕ ಜನರಿಗೆ ಪ್ರಮುಖ ಆಹಾರವಾಗಿದೆ ಮತ್ತು ಸಹಜವಾಗಿ ಕಡಿಮೆ ಬೆಲೆ ಸಿಗುತ್ತದೆ ಹಾಗೂ ಆರೋಗ್ಯಕ್ಕೆ ಒಳ್ಳೆಯದಾಗಿರುತ್ತದೆ.

## ಪ್ರಶ್ನೆಗಳು ಮತ್ತು ಉತ್ತರಗಳು



1. ಸಾರ್ವಜನಿಕ ಸ್ಥಳಗಳಲ್ಲಿ ಸುವಾರ್ತೆ ಸಾರುವದು ಹೆಚ್ಚು ಕಷ್ಟವಾಗುತ್ತದೆಯೇ?

ಇದು ಪ್ರತಿಯೊಬ್ಬ ವ್ಯಕ್ತಿಯ ಸ್ವಭಾವದ ಮೇಲೆ ಆಧಾರವಾಗಿರುತ್ತದೆ. ಸಾರ್ವಜನಿಕವಾಗಿ ಸುವಾರ್ತೆ ಸಾರ ಬೇಕಾದರೆ, ಸತ್ಯವೇದವನ್ನು ಓದುವ ಮೂಲಕ ಸಿದ್ಧತೆ ಮಾಡಿಕೊಳ್ಳಬೇಕು ಮತ್ತು ಜನರ ಆಸಕ್ತಿಗೆ ತಕ್ಕದಾದ ವಿಷಯಗಳನ್ನು ಸಿದ್ಧಮಾಡಿಕೊಳ್ಳಬೇಕು. ಅನೇಕರೊಂದಿಗೆ ಮಾತನಾಡುತ್ತಾ ದೇವರ ವಾಕ್ಯಗಳನ್ನು ಸಾರುವದಕ್ಕಿಂತ ಒಬ್ಬರೊಂದಿಗೆ ವೈಯಕ್ತಿಕವಾಗಿ ಮಾತನಾಡಲು ಕಷ್ಟಪಡುವ ಜನರು ಅನೇಕರಿದ್ದಾರೆ. ಕಾಲಕ್ರಮೇಣ, ಸುವಾರ್ತಿಕರಣದಲ್ಲಿ ಉತ್ತಮವಾಗಿ ಕಾರ್ಯಮಾಡುವದು ಹೇಗೆ ಎಂಬದನ್ನು ನಾವು ಕಲಿತುಕೊಳ್ಳುತ್ತೇವೆ.

2. ನನಗೆ ಯಾವುದಾದರು ಕಾರ್ಯದಿಂದ ಬೇಸರವಾದರೂ ನಾನು ಅದನ್ನೇ ಯಾಕೆ ಮಾಡುತ್ತೇನೆ?

ನಾವು ಮಾನವರು ಮತ್ತು ನಮಗೆ ತೊಂದರೆ ಮಾಡುವ ಅಥವಾ ದೇವರಿಗೆ ಇಷ್ಟವಾಗದೆ ಇರುವ ಕಾರ್ಯಗಳನ್ನು ಬಿಟ್ಟುಬಿಡುವ ಶಕ್ತಿ ನಮಗೆ ಇಲ್ಲ. ಆದರೂ ನಾವು ಬಲಹೀನರಾಗಿರುವ ವಿಷಯಗಳಲ್ಲಿ ದೇವರು ನಮಗೆ ಬಲವನ್ನು ಕೊಡುತ್ತಾನೆ. ಇದರ ಹೊರತಾಗಿಯೂ ನಮಗೆ ಬೇಸರವಾಗುವ ಕಾರ್ಯಗಳನ್ನು ನಾವು ಮಾಡಬಹುದು, ಆದರೆ ಹಂತಹಂತವಾಗಿ, ನಾವು ಬಲಗೊಳ್ಳಲು ದೇವರು ನಮಗೆ ಸಹಾಯ ಮಾಡುವನು.

## ಒಗಟಿನ ಉತ್ತರಗಳು

ಈ ಪಾಠದಲ್ಲಿ ನಾವು ನೋಡಬಹುದಾದ ಯೇಸು ಕ್ರಿಸ್ತನ ಗುಣಗಳನ್ನು ವಿವರಿಸಿರಿ.

**ಕ್ಷಮಾಪಣೆ**
**ಪ್ರೀತಿ**
**ಕರುಣೆ**

ನಾವು ಪಾಪ ಮಾಡುವಾಗ ಮತ್ತು ಯೇಸು ಕ್ರಿಸ್ತನು ನಮ್ಮ ಜೀವಿತದೊಳಗೆ ಬರುವಾಗ ಏನಾಗುತ್ತದೆ?


**ದೇವರೊಂದಿಗೆ ಸಂಪರ್ಕ**
**ನಾಚಿಕೆಯನ್ನು ತೆಗೆದು ಹಾಕುತ್ತಾನೆ**
**ಪೇತ್ರನಿಗಿದ್ದಂಥ ಸಂತೋಷ**
**ರಕ್ಷಣೆ**

ಈ ಪಾಠದ ಪ್ರಕಾರ ಪಾಪದಿಂದ ಉಂಟಾಗುವ ಮೂರು ಪರಿಣಾಮಗಳನ್ನು ಬರೆಯಿರಿ.

**ನಾಚಿಕೆ**
**ದೇವರಿಂದ ಬೇರ್ಪಡುವದು**
**ಮರಣ**

### ಪದ ಹುಡುಕುವದು


| | | | | | | | | | |
|---|---|---|---|---|---|---|---|---|---|
| ಕು | ಟುಂ | ಬ | ಪು | ನ | ತ್ಥಾ | ದು | ನ | ಮಾ | ದು |
| ಲೆ | ಪಾ | ಕ | ಲೆ | ರು | ಪ | ಲೆ | ತ್ತ | ರ್ಗ | ದ್ದು |
| ಶಿ | ತ್ಯ | ಪ | ಮೊ | ಳ್ಳು | ಸ | ತ್ಯ | ವೇ | ದ | ದ |
| ಲು | ಸಂ | ತೋ | ಕೊ | ದಿ | ಚ | ರ | ಪಾ | ರ್ಶ | ಕ್ಷ |
| ಬೆ | ಧ | ದು | ಜ | ಕ್ಷೆ | ಉ | ತ್ಯ | ಕ | ನ | ಣೆ |
| ಫ | ಳೆ | ಳ್ | ನ | ಬಾ | ನಿ | ಪು | ಚೋ | ದ | ನೆ |
| ಕ | ತ್ತ | ಲೆ | ರ | ತಿ | ಭ್ | ಸ್ತು | ಕು | ಟುಂ | ಧ |
| ನಿ | ಗಿ | ಕಾ | ಗುಂ | ಕ್ಷ | ಢಿ | ತ | ಶಿ | ಲು | ದು |
| ಪಾ | ಧಿ | ಝು | ಪು | ತ್ಯ | ಣೆ | ತ್ತ | ಲೆ | ರ | ನಿ |
| ಅ | ಪು | ನ | ರು | ತ್ಥಾ | ನ | ಪಾ | ಸಂ | ತೋ | ಷ |



## ಆಟ

**ನಿಮ್ಮ ಮೊಣಕಾಲುಗಳಿಂದ ಕೆಳಗೆ ಹೋಗಲು ಬಿಡಬೇಡಿರಿ**

ಶಿಕ್ಷಕ ವಿದ್ಯಾರ್ಥಿಗಳನ್ನು ಮೂರು ಅಥವಾ ನಾಲ್ಕು ಸಾಲುಗಳಾಗಿ ವಿಭಾಗಿಸಬೇಕು. ಸೂಚನೆ ಕೊಟ್ಟ ನಂತರ, ಮುಂದೆ ನಿಂತಿರುವ ಆಟಗಾರರು ತಮ್ಮ ಕೈಗಳನ್ನು ಮೊಣಕಾಲುಗಳ ಮೇಲೆ ಇಟ್ಟುಕೊಳ್ಳಬೇಕು ಮತ್ತು ಕೈಗಳನ್ನು ಇಳಿಸದೆ ಸಾಧ್ಯವಾದಷ್ಟು ಬೇಗ ನಡೆದು ಗುರಿಯನ್ನು ತಲುಪಬೇಕು ಮತ್ತು ಮುಂದಿನ ಆಟಗಾರನ ಬಳಿಗೆ ಹಿಂದಿರುಗಬೇಕು. ಒಂದುವೇಳೆ ಆಟಗಾರರಲ್ಲಿ ಯಾರಾದರು ಮೊಣಕಾಲುಗಳ ಮೇಲಿಂದ ಕೈಯನ್ನು ತೆಗೆದರೆ ಅಥವಾ ಕೆಳಗೆ ಬಿದ್ದರೆ, ಪುನಃ ಪ್ರಾರಂಭದ ಗೆರೆಯ ಹತ್ತಿರಕ್ಕೆ ಹೋಗಬೇಕು. ಯಾವ ತಂಡದವರು ಮುಗಿಸುತ್ತಾರೋ ಅವರು ಗೆಲ್ಲುತ್ತಾರೆ.



## ಹೋಮ್ ವರ್ಕ್

ಇತ್ತೀಚೆಗೆ ನೀವು ಯಾರಿಗಾದರೂ ಸುಳ್ಳು ಹೇಳಿರುವದು ನಿಮಗೆ ನೆನಪಿರುವದಾದರೆ, ಆ ವ್ಯಕ್ತಿಯನ್ನು ಭೇಟಿ ಮಾಡಲು ಪ್ರಯತ್ನಿಸಿರಿ ಮತ್ತು ಕ್ಷಮಾಪಣೆ ಕೇಳಿರಿ.

